ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 403

2 ಸದಸ್ಯರ ಹೆಸರು : ಶ್ರೀ ವೈ ಎಂ ಸತೀಶ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3 ಉತ್ತರಿಸಬೇಕಾದ ದಿನಾಂಕ : 29.01.2026

4 ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಳೆದ 2 ವರ್ಷಗಳಲ್ಲಿ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ಲೋಪ ಮತ್ತು ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಅಮಾನತುಗೊಂಡವರ ಸಂಖ್ಯೆ ಎಷ್ಟು; (ಅವರುಗಳ ಹುದ್ದೆಗಳೊಂದಿಗೆ ಪ್ರಕರಣಗಳ ವಿವರ, ಜಿಲ್ಲಾವಾರು ವಿವರಗಳೊಂದಿಗೆ ಮಾಹಿತಿ ಒದಗಿಸುವುದು)	ಕಳೆದ 2 ವರ್ಷಗಳಲ್ಲಿ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ಲೋಪ ಮತ್ತು ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಅಮಾನತ್ತುಗೊಂಡ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ (ಪಿ.ಸಿ. ಯಿಂದ ಡಿವೈಎಸ್‌ಪಿ) ಅಂಕಿ ಅಂಶವನ್ನು ಅನುಬಂಧ-1 ರಲ್ಲಿ ಇರಿಸಿದೆ.
ಆ)	ಆ ಪೈಕಿ ಲೋಪ ರುಜುವಾತು ಆಗಿರುವ ಪ್ರಕರಣಗಳೆಷ್ಟು? ಅವರುಗಳ ಮೇಲೆ ಕೈಗೊಂಡ ಕಠಿಣ ಕಾನೂನು ಕ್ರಮಗಳೇನು? (ವಿವರಗಳೊಂದಿಗೆ ಮಾಹಿತಿ ಒದಗಿಸುವುದು)	ಅನುಬಂಧ-1 ರಲ್ಲಿ ನಮೂದಿಸಿರುವ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಬಹುತೇಕ ಪ್ರಕರಣಗಳಲ್ಲಿ ತನಿಖೆ/ ಇಲಾಖಾ - ವಿಚಾರಣೆ ಪ್ರಗತಿಯಲ್ಲಿದ್ದು, ಉಳಿದಂತೆ ಶಿಸ್ತು ಕ್ರಮ ಕೈಗೊಂಡು ಕರ್ತವ್ಯ ಲೋಪ ರುಜುವಾತು ಆಗಿರುವ ಪ್ರಕರಣಗಳ ಮಾಹಿತಿಯನ್ನು ಅನುಬಂಧ-2 ಮತ್ತು ಅನುಬಂಧ-3 ರಲ್ಲಿ ಇರಿಸಿದೆ.
ಇ)	ಶಿಸ್ತು/ ದಕ್ಷತೆ/ ಪ್ರಮಾಣಿಕತೆಯಿಂದ ಇರಬೇಕಾದ ಪೊಲೀಸರು ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಕರ್ತವ್ಯ ಲೋಪ ಎದುರಿಸಲು ಕಾರಣಗಳೇನು; ಇದನ್ನು ನಿವಾರಿಸಲು ಇಲಾಖೆಯು ಕೈಗೊಂಡ ಕ್ರಮಗಳೇನು? (ವಿವರಗಳೊಂದಿಗೆ ಮಾಹಿತಿ ಒದಗಿಸಿ)	ಒಂದೇ ಸ್ಥಳದಲ್ಲಿ ಅಧಿಕ ವರ್ಷಗಳಿಂದ ಕಾರ್ಯ ನಿರ್ವಹಿಸಿ, ಸಹವಾಸ ಪ್ರೇರಣೆ, ಅತೀವಿಶ್ವಾಸ, ವೈಯಕ್ತಿಕ ಲಾಭ, ದುರಾಸೆ ಇತ್ಯಾದಿಗಳಿಂದಾಗಿ ಶಿಸ್ತು ಇಲಾಖೆಯಲ್ಲಿನ ಸಿಬ್ಬಂದಿಗಳ ಪೈಕಿ ಕೆಲವು ಸಿಬ್ಬಂದಿಗಳು ಭ್ರಷ್ಟಾಚಾರದಡಿ ಸಿಲುಕಿರುವ ಸಾಧ್ಯತೆಗಳ ಇರುತ್ತದೆ. ಇಲಾಖೆಯಲ್ಲಿ ಕರ್ತವ್ಯ ನಿರ್ವಹಣೆಯ ಕುರಿತು ನಿರಂತರವಾಗಿ ತರಬೇತಿ/ ಕಾರ್ಯಾಗಾರಗಳನ್ನು ಕೈಗೊಂಡು, ಕರ್ತವ್ಯ ನಿರ್ವಹಣೆ ಬಗ್ಗೆ ಹಾಗೂ ನಡತೆಯ ಬಗ್ಗೆ ತಿಳುವಳಿಕೆಗಳನ್ನು ನೀಡಲಾಗುತ್ತಿರುತ್ತದೆ. ಈ ಬಗ್ಗೆ ಡಿಜಿ ಮತ್ತು ಐಜಿಪಿ ರವರ ಜ್ಞಾಪನ ಸಂಖ್ಯೆ: ಹೆಚ್‌ಆರ್‌ಎಂ-1(8)/55/2023-24, ದಿನಾಂಕ: 05.12.2025 ರಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ದುರ್ನಡತೆಯನ್ನು ಸಮರ್ಥವಾಗಿ ತಡೆಯುವ ಬಗ್ಗೆ ಎಲ್ಲಾ ಘಟಕಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. ಅಲ್ಲದೇ ಒಂದೇ ಸ್ಥಳದಲ್ಲಿ ಅಧಿಕ ಕಾರ್ಯನಿರ್ವಹಿಸುವ ಅಧಿಕಾರಿ/ಸಮಯದಿಂದ ಸಿಬ್ಬಂದಿಗಳ

		ಸ್ನಾನಪಲ್ಲಟನೆಯಂತಹ ಕ್ರಮಗಳನ್ನು ಹಾಗೂ ಶಿಸ್ತು ಕ್ರಮಗಳನ್ನು ಅನುಸರಿಸುವ ಕ್ರಮಗಳನ್ನು ಜರುಗಿಸಲಾಗುತ್ತಿರುತ್ತದೆ. ಮುಂದುವರೆದು, ಸಮಾಜದಲ್ಲಿ ಪೊಲೀಸ್ ಇಲಾಖೆಯ ಬಗ್ಗೆ ಉತ್ತಮ ಅಭಿಪ್ರಾಯವನ್ನು ಮೂಡಿಸಲು ಪೊಲೀಸ್ ಅಧಿಕಾರಿ /ಸಿಬ್ಬಂದಿಯವರುಗಳು ಕರ್ತವ್ಯ ನಿರ್ವಹಿಸುವಾಗ ಪಾರದರ್ಶಕತೆ, ಸೌಜನ್ಯ ವರ್ತನೆ ಮತ್ತು ನಿಷ್ಪಕ್ಷಪಾತವನ್ನು ಕಾಯ್ದುಕೊಳ್ಳುವ ಬಗ್ಗೆ ಈಗಾಗಲೇ ಡಿಜಿ ಮತ್ತು ಐಜಿಪಿ ರವರ ಕಛೇರಿಯಿಂದ ಕಾಲಕಾಲಕ್ಕೆ ಸಲಹೆ ಸೂಚನೆಗಳನ್ನು ನೀಡಲಾಗಿದ್ದು, ಇತ್ತೀಚೆಗೆ ದಿನಾಂಕ: 21.10.2025 ರ ಸುತ್ತೋಲೆಯಲ್ಲಿ ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಸಂಖ್ಯೆ: ಒಇ 73 ಪಿಇಜಿ 2026

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

ಡೈರಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್
ಆಫ್ ಪೊಲೀಸ್‌ರವರ ಕಾರ್ಯಾಲಯ
ಕರ್ನಾಟಕ ರಾಜ್ಯ, ನೃಪತುಂಗ ರಸ್ತೆ
ಬೆಂಗಳೂರು - ೫೬೦ ೦೦೧.

ಸಂ: ಹೆಚ್‌ಆರ್‌ಎಂ-1(8)/55/2023-24

ಮಹಾನಿರ್ದೇಶಕರು ಹಾಗೂ,
ಪೊಲೀಸ್ ಮಹಾನಿರೀಕ್ಷಕರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು.
ದಿನಾಂಕ: 05.12.2025.

ಜ್ಞಾಪನ

ವಿಷಯ: ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ದುರ್ನಡತೆಯನ್ನು ಸಮರ್ಥವಾಗಿ ತಡೆಯುವ ಬಗ್ಗೆ.

* * *

ಇತ್ತೀಚೆಗೆ ಕೆಲವು ದರೋಡೆ, ಕಳ್ಳತನ ಮತ್ತು ವಂಚನೆ ಕೃತ್ಯಗಳಲ್ಲಿ ಕೆಲವು ಪೊಲೀಸ್ ಸಿಬ್ಬಂದಿಯವರುಗಳ ಹೆಸರುಗಳು ತಳಕು ಹಾಕಿಕೊಂಡಿರುವುದು ತೀರಾ ಕಳವಳಕಾರಿ ಬೆಳವಣಿಗೆಯಾಗಿದೆ. ಇಂತಹ ಪ್ರವೃತ್ತಿಗಳು ಪೊಲೀಸ್ ಇಲಾಖೆಯ ಮೇಲಿನ ವಿಶ್ವಾಸಾರ್ಹತೆಗೆ ಧಕ್ಕೆಯಾಗುವುದರೊಂದಿಗೆ ಇಲಾಖೆಯನ್ನು ಅಪಕೀರ್ತಿಗೆ ಗುರಿ ಮಾಡುತ್ತವೆ. ಈ ರೀತಿಯ ದುಷ್ಕೃತ್ಯಗಳು ಸಾರ್ವಜನಿಕರಿಗೆ ಪೊಲೀಸರ ಮೇಲಿನ ನಂಬಿಕೆಯನ್ನು ಕುಂದಿಸುವುದಲ್ಲದೆ, ಕಾನೂನು ಜಾರಿಯ ಸಂಪೂರ್ಣ ವ್ಯವಸ್ಥೆಯ ಮೂಲ ಸಿದ್ಧಾಂತಗಳನ್ನೇ ಸಂಶಯಾಸ್ಪದವಾಗಿ ನೋಡುವಂತಹ ಸನ್ನಿವೇಶವನ್ನು ನಿರ್ಮಾಣ ಮಾಡುತ್ತದೆ. ಆದ್ದರಿಂದ ಇಂತಹ ಘಟನೆಗಳನ್ನು ಸಮರ್ಥವಾಗಿ ತಡೆಗಟ್ಟಿ, ಹೊಣೆಗಾರಿಕೆಯನ್ನು ನಿಗಧಿಪಡಿಸುವ ಮೂಲಕ ಪೊಲೀಸ್ ಇಲಾಖೆಯ ಸಮಗ್ರತೆಯನ್ನು ಪುನರ್ನಿರ್ಮಿಸುವ ಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆ ಇದೆ.

ಇತ್ತೀಚೆಗೆ ದಾವಣಗೆರೆಯಲ್ಲಿ ಒಬ್ಬ ಚಿನ್ನದ ವ್ಯಾಪಾರಿಯ ಮೇಲೆ ದರೋಡೆ ನಡೆಸಿದ ಆರೋಪದಲ್ಲಿ ಇಬ್ಬರು ಪೊಲೀಸ್ ಉಪನಿರೀಕ್ಷಕರನ್ನು ದಸ್ತಗಿರಿ ಮಾಡಲಾಗಿದೆ. ಅವರು ಸಂತ್ರಸ್ತ ವ್ಯಕ್ತಿಗೆ ತಾವಿಬ್ಬರೂ ಐಜಿ ಸ್ಕ್ವಾಡ್ ಅಧಿಕಾರಿಗಳೆಂದು ಸುಳ್ಳು ಹೇಳಿ, ಬಸ್ ನಿಲ್ದಾಣದಲ್ಲಿ ಆತನನ್ನು ವಶಕ್ಕೆ ಪಡೆದುಕೊಂಡು, ನಕಲಿ ಬಂದೂಕಿನಿಂದ ಸಂತ್ರಸ್ತ ವ್ಯಕ್ತಿಯನ್ನು ಬೆದರಿಸಿ, ಆತನಿಂದ ಸುಮಾರು 80 ಗ್ರಾಂ ಬೆಲೆಬಾಳುವ ಚಿನ್ನಾಭರಣಗಳನ್ನು ದೋಚಿ, ನಂತರ ಅದೇ ಬಸ್ ನಿಲ್ದಾಣದಲ್ಲಿ ಆತನನ್ನು ಬಿಟ್ಟು ಹೋಗಿರುತ್ತಾರೆ. ಸಂತ್ರಸ್ತ ವ್ಯಕ್ತಿಯ ಆಪ್ತ ವಲಯದ ಅಕ್ಕಸಾಲಿಗರೊಬ್ಬರ ಸಹಾಯದೊಂದಿಗೆ ಒಳಸಂಚು ರೂಪಿಸುವ ಮೂಲಕ ಈ ದರೋಡೆಯನ್ನು ಯೋಜಿತವಾಗಿತ್ತು ಎನ್ನಲಾಗಿದೆ.

ಇತ್ತೀಚೆಗೆ ಬೆಂಗಳೂರು ನಗರದಲ್ಲಿ ನಗದು ನಿರ್ವಹಣಾ ಸೇವೆಯ (ಕ್ಯಾಷ್ ಮ್ಯಾನೇಜ್‌ಮೆಂಟ್ ಸರ್ವಿಸಸ್) ಮಾಜಿ ಸಿಬ್ಬಂದಿಯೊಂದಿಗೆ ಅತ್ಯಂತ ಕರಾರುವಕ್ಕಾಗಿ ಒಳಸಂಚು ರೂಪಿಸಿ ಕೋಟ್ಯಂತರ ರೂಪಾಯಿಗಳ ದರೋಡೆ ಮಾಡಿರುವ ಪ್ರಕರಣದಲ್ಲಿ ಬೆಂಗಳೂರು ನಗರದ ಗೋವಿಂದಪುರ ಪೊಲೀಸ್ ಠಾಣೆಯ ಪೊಲೀಸ್ ಕಾನ್ಸ್‌ಟೇಬಲ್ ಒಬ್ಬಾತನನ್ನು ಬಂಧಿಸಲಾಗಿದೆ. ಅತ್ಯಂತ ಎಚ್ಚರಿಕೆಯಿಂದ ಒಳಸಂಚು

...2

ರೂಪಿಸಿ, ಅತಿ ಹೆಚ್ಚು ಮೌಲ್ಯದ ನಗದು ದರೋಡೆ ಕೃತ್ಯದಲ್ಲಿ ಪೊಲೀಸರ ಸಹಭಾಗಿತ್ವವಿರುವ ಈ ಪ್ರಕರಣವು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿರುತ್ತದೆ.

ಅದೇ ರೀತಿ ಬಿ.ಪಿ.ಓ ಸಂಸ್ಥೆಯ ಮ್ಯಾನೇಜರ್‌ನ ಅಪಹರಣ, ಹಣದ ಸುಲಿಗೆ ಯತ್ನದ ಪ್ರಕರಣದಲ್ಲಿ ಮಾಲೂರಿನ ಹೆಡ್ ಕಾನ್ಸ್‌ಟೇಬಲ್ ಒಬ್ಬರನ್ನು ಶಂಕಿಸಿ, ಆತನನ್ನು ದಸ್ತಗಿರಿ ಮಾಡಲಾಗಿದೆ.

ಇಂತಹ ಅಪರಾಧ ಪ್ರಕರಣಗಳಲ್ಲಿ ಮತ್ತು ಅಕ್ರಮ ಚಟುವಟಿಕೆಗಳಲ್ಲಿ ಪೊಲೀಸರು ಒಳಗೊಂಡಿರುವುದು ಯಾವುದೇ ಕಾರಣಕ್ಕೂ ಒಪ್ಪಲಾಗದು. ಇಡೀ ಪೊಲೀಸ್ ಇಲಾಖೆಯ ಅಪಕೀರ್ತಿಗೆ ಕಾರಣವಾಗುವ ಇಂತಹ ಸನ್ನಿವೇಶಗಳು ಸಾರ್ವಜನಿಕರಲ್ಲಿ ಪೊಲೀಸರ ಮೇಲಿನ ವಿಶ್ವಾಸಾರ್ಹತೆಗೆ ತೀವ್ರತರವಾದ ಹಾನಿ ಮಾಡುತ್ತವೆ ಮತ್ತು ಕಾನೂನು ಜಾರಿಯ ಸಂಪೂರ್ಣ ವ್ಯವಸ್ಥೆಯ ಮೂಲ ಸಿದ್ಧಾಂತಗಳನ್ನೇ ಸಂಶಯಾಸ್ಪದವಾಗಿ ನೋಡುವಂತಹ ಸನ್ನಿವೇಶವನ್ನು ನಿರ್ಮಾಣ ಮಾಡುತ್ತದೆ.

ಅಪರಾಧ ಕೃತ್ಯಗಳಲ್ಲಿ ತೊಡಗಿಕೊಳ್ಳುವ ಪೊಲೀಸ್ ಇಲಾಖೆಯ ಪ್ರತಿಯೊಬ್ಬ ಅಧಿಕಾರಿ/ಸಿಬ್ಬಂದಿಯವರುಗಳಿಗೆ ತೀವ್ರತರವಾದ ಶಿಸ್ತಿನ ಕ್ರಮಗಳನ್ನು ಎದುರಿಸಬೇಕಾಗುತ್ತದೆ ಎಂಬ ಕಠಿಣ ಎಚ್ಚರಿಕೆಯನ್ನು ಈ ಜ್ಞಾಪನದ ಮೂಲಕ ನೀಡಲಾಗಿದೆ.

ಘಟಕಾಧಿಕಾರಿಗಳು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದು:-

- ಘಟಕದ ಎಲ್ಲಾ ಅಧಿಕಾರಿಗಳು ಅಧೀನದ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರುಗಳ ಪೂರ್ವಾಪರಗಳ ಪರಿಶೀಲನೆ ಮತ್ತು ಸಮಗ್ರತೆಯ ಮೌಲ್ಯಮಾಪನಗಳನ್ನು ನಿಯತವಾಗಿ ನಡೆಸುವುದು.
- ನೈತಿಕ ಮಾನದಂಡಗಳು, ಕಾನೂನುಬದ್ಧ ಕರ್ತವ್ಯಗಳು, ಮತ್ತು ಭ್ರಷ್ಟಾಚಾರ/ಅಪರಾಧಗಳ ಗಂಭೀರ ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವುದು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ದುರ್ವರ್ತನೆ, ಅಕ್ರಮ ಚಟುವಟಿಕೆಗಳು ಹಾಗೂ ಅಪರಾಧಿಕ ಕೃತ್ಯಗಳಲ್ಲಿ ತೊಡಗಿರುವ ಮಾಹಿತಿಗಳನ್ನು ತಕ್ಷಣವೇ ಪೊಲೀಸ್ ಪ್ರಧಾನ ಕಛೇರಿಗೆ ವರದಿ ಮಾಡುವುದು.
- ಇಲಾಖೆಯ ಘನತೆಯನ್ನು ಕಾಪಾಡುವ ಹೊಣೆಗಾರಿಕೆ ಮತ್ತು ಸಮಗ್ರತೆಯ ಸಂಸ್ಕೃತಿಯು ಎಲ್ಲಾ ಹಂತದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಸಮಾನ ಹೊಣೆಗಾರಿಕೆ ಎಂಬುದನ್ನು ಸಾರಿ ಹೇಳುವುದು.

...3

- ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಮನೋಬಲ ಕಗ್ಗುವಿಕೆಯನ್ನು ಮತ್ತು ಇತರ ನೈತಿಕ ಲೋಪದೋಷಗಳಿಗೆ ಕಾರಣವಾಗುವ ಅಂಶಗಳಿಗೆ ಸೂಕ್ತವಾಗಿ ಮತ್ತು ಸೂಕ್ಷ್ಮವಾಗಿ ಸ್ಪಂದಿಸಿ, ಪರಿಹರಿಸಲು ಅಗತ್ಯ ಮಾರ್ಗದರ್ಶನ ಮತ್ತು ಸಲಹಾ ಕಾರ್ಯಕ್ರಮಗಳನ್ನು ಉತ್ತೇಜಿಸುವುದು.
- ಪ್ರಸ್ತುತ ಜಾರಿಯಲ್ಲಿರುವ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು ಮತ್ತು ಈ ಸಂಹಿತೆಯ ಅಡ್ಡದಾರಿಗಳಿಗೆ ಆಸ್ಪದವಾಗದಂತೆ ಕ್ರಮವಹಿಸುವುದು.

ಇಲಾಖೆಯಲ್ಲಿ ದುರ್ನಡತೆಯನ್ನು ತಡೆಯುವ ಮೇಲ್ಕಂಡ ಎಲ್ಲಾ ಕ್ರಮಗಳನ್ನು ಸ್ವಯಂಪ್ರೇರಿತರಾಗಿ ಅನುಷ್ಠಾನಗೊಳಿಸುವಲ್ಲಿ ವಿಫಲರಾಗುವ ಘಟಕಾಧಿಕಾರಿಗಳ ವಿರುದ್ಧ ಘೋರ ನಿರ್ಲಕ್ಷತೆ ಎಂದು ಪರಿಗಣಿಸಿ ಅವರುಗಳನ್ನು ಇಲಾಖಾ ಶಿಸ್ತಿನ ಕ್ರಮಕ್ಕೆ ಗುರಿಪಡಿಸಲಾಗುವುದು. ಪೊಲೀಸ್ ಇಲಾಖೆಯ ಘನತೆ, ಗೌರವ ಮತ್ತು ಸಮಗ್ರತೆಗಳಲ್ಲಿನ ರಾಜಿ ಸಮಂಜಸವಲ್ಲ ಮತ್ತು ಸಹಿಸಲು ಸಾಧ್ಯವಿಲ್ಲ.

ಪೊಲೀಸ್ ಇಲಾಖೆಯ ಹಿರಿಮೆ ಮತ್ತು ಗೌರವಾದರಗಳನ್ನು ಹೆಚ್ಚಿಸುವ ಶಿಸ್ತುಬದ್ಧ ಜವಾಬ್ದಾರಿಗಳು ಘಟಕಾಧಿಕಾರಿಗಳದ್ದಾಗಿವೆ. ಈ ಸಂಸ್ಥೆಯ ಗೌರವವನ್ನು ಕಾಪಾಡುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ ಎಂಬುದನ್ನು ನಾವಾರೂ ಮರೆಯಕೂಡದು.

(ಡಾ॥ ಎಂ. ಎ. ಸಲೀಂ ಐ.ಪಿ.ಎಸ್)
ಮಹಾನಿರ್ದೇಶಕರು ಹಾಗೂ
ಪೊಲೀಸ್ ಮಹಾನಿರೀಕ್ಷಕರು,
ಕರ್ನಾಟಕ ರಾಜ್ಯ, ಬೆಂಗಳೂರು

ಗೆ:

1. ಎಲ್ಲಾ ಪೊಲೀಸ್ ಆಯುಕ್ತರು.
2. ಎಲ್ಲಾ ವಲಯದ ಪೊಲೀಸ್ ಮಹಾನಿರೀಕ್ಷಕರು.
3. ಎಲ್ಲಾ ಜಿಲ್ಲೆಗಳ ಪೊಲೀಸ್ ಅಧೀಕ್ಷಕರು.

DGP CONTROL ROOM, BENGALURU
O/o. the DG & ICP, N.T.Road, Bengaluru
Out Messages Received for Transmission
NR No. 502 TIME 1735
Date 05/12/2014 Sign

ಸಂ.ಕಾಮತ್ತುಸು/ಮಿಶ್ರ/167/2025

ಮಹಾನಿರ್ದೇಶಕರು ಮತ್ತು
ಪೊಲೀಸ್ ಮಹಾನಿರೀಕ್ಷಕರವರ ಕಛೇರಿ,
ಕರ್ನಾಟಕ ರಾಜ್ಯ, ನೃಪತುಂಗ ರಸ್ತೆ,
ಬೆಂಗಳೂರು, ದಿನಾಂಕ 21.10.2025.

ಸುತ್ತೋಲೆ

ವಿಷಯ: ಸಮಾಜದಲ್ಲಿ ಪೊಲೀಸ್ ಇಲಾಖೆಯ ಬಗ್ಗೆ ಉತ್ತಮ ಅಭಿಪ್ರಾಯವನ್ನು ಮೂಡಿಸಲು, ಪೊಲೀಸ್ ಅಧಿಕಾರಿ / ಸಿಬ್ಬಂದಿಯವರುಗಳು ಕರ್ತವ್ಯ ನಿರ್ವಹಿಸುವಾಗ ಪಾರದರ್ಶಕತೆ, ಸೌಜನ್ಯದ ವರ್ತನೆ ಮತ್ತು ನಿಷ್ಠೆಯನ್ನು ಕಾಯ್ದುಕೊಳ್ಳುವ ಬಗ್ಗೆ.

** ** **

ಪೊಲೀಸ್ ಅಧಿಕಾರಿಗಳು ಸಾರ್ವಜನಿಕರೊಂದಿಗೆ ವರ್ತಿಸುವ ರೀತಿಯು ಪರಿಣಾಮಕಾರಿ ಕಾನೂನು ಜಾರಿ ಮತ್ತು ಸಮುದಾಯದ ಜೊತೆಗಿನ ಉತ್ತಮ ಸಂಬಂಧವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಅತ್ಯಂತ ಮುಖ್ಯವಾಗಿದೆ. ಪೊಲೀಸ್ ಅಧಿಕಾರಿಗಳು ತಮ್ಮ ಅಧಿಕಾರವನ್ನು ಚಲಾಯಿಸುವಾಗ ನಾಗರೀಕರೊಂದಿಗೆ ಸೌಜನ್ಯದಿಂದ ಮತ್ತು ಗೌರವದಿಂದ ವರ್ತಿಸಬೇಕು. ಪೊಲೀಸರ ನಡವಳಿಕೆಯಲ್ಲಿ ಸೌಜನ್ಯ ಮತ್ತು ಘನತೆ ಎದ್ದು ಕಾಣಬೇಕು. ಸಕಾರಾತ್ಮಕ ಮತ್ತು ವೃತ್ತಿಪರ ನಡವಳಿಕೆಯು ಸಾರ್ವಜನಿಕರಲ್ಲಿ ಪೊಲೀಸ್ ಇಲಾಖೆಯ ಮೇಲಿನ ನಂಬಿಕೆ ಮತ್ತು ಸಹಕಾರವನ್ನು ಹೆಚ್ಚಿಸುತ್ತದೆ. ಪೊಲೀಸ್ ಅಧಿಕಾರಿಗಳ ಸಾರ್ವಜನಿಕರೊಂದಿಗಿನ ನಡವಳಿಕೆಯು ಅಪರಾಧ ತಡೆಗಟ್ಟುವಿಕೆ ಮತ್ತು ಅಪರಾಧ ನಿಯಂತ್ರಣ ಕಾರ್ಯವು ಹೆಚ್ಚು ಪರಿಣಾಮಕಾರಿಯಾಗುವಲ್ಲಿ ಸಹಕರಿಸುತ್ತದೆ. ಅಧಿಕಾರ ದುರುಪಯೋಗಪಡಿಸಿಕೊಂಡು ಸಾರ್ವಜನಿಕರ ಮೇಲೆ ಅನಗತ್ಯ ಬಲ ಪ್ರಯೋಗ ಮಾಡುವುದು ಅಥವಾ ದರ್ಪದಿಂದ ವರ್ತಿಸುವುದು ಇಲಾಖೆಯ ಘನತೆಗೆ ತಕ್ಕುದಾದ ನಡವಳಿಕೆಯಲ್ಲ. ನಾಗರೀಕರ ಹಕ್ಕುಗಳಿಗೆ ಗೌರವವನ್ನು ನೀಡುವುದು ಮತ್ತು ಸಂಯಮದಿಂದ ಅವರೊಡನೆ ವರ್ತಿಸುವುದು ಇಲಾಖೆಯ ಘನತೆಯನ್ನು ಹೆಚ್ಚಿಸಿ ಸಾರ್ವಜನಿಕರಲ್ಲಿ ಪೊಲೀಸರ ಬಗ್ಗೆ ಗೌರವ ಮೂಡುವಂತೆ ಮಾಡುತ್ತದೆ.

ಸಾರ್ವಜನಿಕರೊಂದಿಗಿನ ಎಲ್ಲಾ ವ್ಯವಹಾರಗಳಲ್ಲಿ ಎಲ್ಲಾ ಪೊಲೀಸ್ ಅಧಿಕಾರಿಗಳು ಗರಿಷ್ಠ ಮಟ್ಟದ ವೃತ್ತಿಪರತೆ, ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವಂತೆ ಸೂಚಿಸಲಾಗಿದೆ. ಪೊಲೀಸ್ ಇಲಾಖೆಯ ಮೇಲಿನ ಗೌರವ ಹಾಗೂ ನಂಬಿಕೆಗಳು ಸಮಗ್ರವಾಗಿ ಪ್ರತಿ ಅಧಿಕಾರಿಯು ಯಾವ ರೀತಿ

ನಡೆದುಕೊಳ್ಳುತ್ತಾನೆ ಎಂಬುದರ ಮೇಲೆ (ಸಮವಸ್ತ್ರ ಧರಿಸಿದ್ದಾಗ ಅಥವಾ ಮಫ್ತಿಯಲ್ಲಿರುವಾಗ) ಅವಲಂಬಿತವಾಗಿದೆ ಎಂಬುದನ್ನು ಮರೆಯಬಾರದು.

ಈ ನಿಟ್ಟಿನಲ್ಲಿ ಕೆಳಕಂಡ ಮಾರ್ಗಸೂಚಿಗಳನ್ನು ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಕಟ್ಟುನಿಟ್ಟಾಗಿ ಪಾಲಿಸುವುದು:

1. ಇಲಾಖೆಯ ಎಲ್ಲಾ ಅಧಿಕೃತ ವ್ಯವಹಾರಗಳು ಮತ್ತು ಕಾರ್ಯವಿಧಾನಗಳಲ್ಲಿ ಸಂಪೂರ್ಣ ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕು. ಪೊಲೀಸ್ ಠಾಣೆಗೆ ಭೇಟಿ ನೀಡುವ ಯಾವುದೇ ವ್ಯಕ್ತಿಯ ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆಯನ್ನು ಗಮನಿಸದೇ ಎಲ್ಲರನ್ನೂ ಸಮಾನವಾಗಿ ಪರಿಗಣಿಸಬೇಕು.

2. ಸಾರ್ವಜನಿಕರ ಕುಂದುಕೊರತೆಗಳನ್ನು ತಾಳ್ಮೆಯಿಂದ ಆಲಿಸಿ ಮತ್ತು ಕಾನೂನಿನ ಪ್ರಕಾರ ಅನಗತ್ಯ ಕಾಲವಿಳಂಬವಿಲ್ಲದೇ ದೂರುಗಳನ್ನು ದಾಖಲಿಸುವುದು.

3. ಸಾರ್ವಜನಿಕರೊಂದಿಗೆ ಮಾತನಾಡುವಾಗ ಒರಟು ಭಾಷೆ ಅಥವಾ ವರ್ತನೆಯನ್ನು ತೋರದೆ ಯಾವಾಗಲೂ ಸೌಜನ್ಯ ಮತ್ತು ಘನತೆಯಿಂದ ವರ್ತಿಸಿ ಕಾನೂನು ಜಾರಿಗೊಳಿಸುವಲ್ಲಿ ದೃಢತೆಯನ್ನು ಪ್ರದರ್ಶಿಸುವುದು.

4. ಯಾವುದೇ ಸಂದರ್ಭದಲ್ಲೂ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳಿಂದ, ಯಾವುದೇ ರೀತಿಯ ಬೇಡಿಕೆ ಇಡುವುದರಿಂದ ಅಥವಾ ಯಾವುದೇ ಅಕ್ರಮ ಸಹಾಯ/ಲಾಭವನ್ನು ಸ್ವೀಕರಿಸುವುದರಿಂದ ಸಂಪೂರ್ಣವಾಗಿ ದೂರವಿರಬೇಕು.

5. ಕರ್ತವ್ಯದ ಸಮಯದಲ್ಲಿ/ಕರ್ತವ್ಯ ಮುಗಿದ ನಂತರವೂ ನೈತಿಕವಾಗಿ ಇತರರಿಗೆ ಮಾದರಿಯಾಗುವಂತೆ ಇದ್ದು ಇಲಾಖೆಯ ನೀತಿ ನಿಯಮಗಳನ್ನು ಎತ್ತಿಹಿಡಿಯಬೇಕು.

6. ಸ್ಟೇಷನ್ ಹೌಸ್ ಡೈರಿಗಳು ಮತ್ತು ಕೇಸ್ ಫೈಲ್ ಗಳಲ್ಲಿ ನಿಖರ ಮತ್ತು ಇಂದೀಕರಿಸಿದ ದಾಖಲೆಗಳನ್ನು ಕಾಯ್ದುಕೊಳ್ಳಬೇಕು ಮತ್ತು ಸಮಗ್ರವಾಗಿ ನಿರ್ವಹಿಸಬೇಕು.

7. ತನಿಖಾ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದು ಮತ್ತು ಪ್ರತಿ ಹಂತದಲ್ಲೂ ಜವಾಬ್ದಾರಿಯಿಂದ ಕಾರ್ಯನಿರ್ವಹಣೆ ಮಾಡಬೇಕು. ಯಾವುದೇ ನಾಗರೀಕರಿಗೆ ಅನಗತ್ಯವಾಗಿ ತೊಂದರೆ ನೀಡಬಾರದು.

8. ಸಂತ್ರಸ್ಥರು, ಮಹಿಳೆಯರು, ಹಿರಿಯ ನಾಗರೀಕರು ಮತ್ತು ಮಕ್ಕಳೊಂದಿಗೆ ವಿಶೇಷ ಕಾಳಜಿಯಿಂದ ಮತ್ತು ಸೂಕ್ಷ್ಮತೆಯಿಂದ ವರ್ತಿಸಬೇಕು.

9. ಸಾರ್ವಜನಿಕರ ದೂರುಗಳ ಸ್ಥಿತಿ ಮತ್ತು ಬಾಕಿ ಇರುವ ಪ್ರಕರಣಗಳ ಕುರಿತು ನಾಗರೀಕರಿಗೆ ಮಾಹಿತಿ ನೀಡಬೇಕು. ಕರ್ತವ್ಯಕ್ಕೆ ಹಾಜರಾಗುವುದು ಮತ್ತು ಅಧಿಕೃತ ಕಾರ್ಯಗಳನ್ನು ನಿರ್ವಹಿಸುವಲ್ಲಿ ಶಿಸ್ತಿನಿಂದ ಸಮಯ ಪಾಲನೆ ಮಾಡಬೇಕು.

10. ಪೊಲೀಸ್–ಸಾರ್ವಜನಿಕ ಸಂವಹನದಲ್ಲಿ ನ್ಯಾಯಸಮ್ಮತೆಯನ್ನು ಎತ್ತಿಹಿಡಿಯಲು ಸಮವಸ್ತ್ರದ ಮೇಲೆ ಧರಿಸುವ ಕ್ಯಾಮೆರಾಗಳನ್ನು ಮತ್ತು ಲಭ್ಯವಿರುವ ತಂತ್ರಜ್ಞಾನಗಳನ್ನು ಜವಾಬ್ದಾರಿಯುತವಾಗಿ ಬಳಸಿಕೊಳ್ಳಬೇಕು.
11. ಎಲ್ಲಾ ಅಧಿಕೃತ ವಿಷಯಗಳಲ್ಲಿ ನ್ಯಾಯಾಂಗ ಮತ್ತು ಆಡಳಿತಾತ್ಮಕ ಅಧಿಕಾರಿಗಳಿಗೆ ಪೂರ್ಣ ಸಹಕಾರವನ್ನು ನೀಡಿ, ಶೋಧ, ಬಂಧನ ಅಥವಾ ವಿಚಾರಣೆಯ ಸಮಯದಲ್ಲಿ ಸಾರ್ವಜನಿಕರ ಖಾಸಗಿತನ ಮತ್ತು ಘನತೆಯನ್ನು ಗೌರವಿಸಿ, ಅಧಿಕಾರದ ದುರುಪಯೋಗ ಅಥವಾ ದೌರ್ಜನ್ಯದಿಂದ ದೂರವಿರಿ ಮತ್ತು ಸದ್ವರ್ತನೆಗೆ ಮಾದರಿಯಾಗಿರಿ.
12. ಸಮುದಾಯದಲ್ಲಿ ಸಕ್ರಿಯವಾಗಿ ಭಾಗವಹಿಸಿ ಮತ್ತು ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ, ಪಾರದರ್ಶಕ, ಕಾನೂನುಬದ್ಧ ಮತ್ತು ಸಹಾನುಭೂತಿಯ ಪೊಲೀಸಿಂಗ್ ಅಭ್ಯಾಸಗಳ ಮೂಲಕ ಸಾರ್ವಜನಿಕರ ವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದು.
13. ಪೊಲೀಸ್ ಕಾರ್ಯಗಳ ಮೇಲೆ ಪ್ರಭಾವ ಬೀರುವ ಅಥವಾ ಭ್ರಷ್ಟಗೊಳಿಸುವ ಯಾವುದೇ ಪ್ರಯತ್ನಗಳು ಕಂಡುಬಂದಲ್ಲಿ ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡುತ್ತಿರಿ.
14. ಬೇರೆ ಠಾಣಾ ವ್ಯಾಪ್ತಿಯ ದೂರು ಬಂದಲ್ಲಿ ದೂರುದಾರರನ್ನು ಸಂಬಂಧಿಸಿದ ಠಾಣೆಗೆ ಹೋಗಿ ದೂರು ನೀಡುವಂತೆ ಹೇಳದೇ, ಠಾಣೆಯಲ್ಲಿ ಶೂನ್ಯ ಪ್ರ.ವ. ವರದಿಯನ್ನು ದಾಖಲಿಸಿ ಆ ನಂತರ ವ್ಯಾಪ್ತಿಯ ಆಧಾರದ ಮೇಲೆ ಸಂಬಂಧಪಟ್ಟ ಠಾಣೆಗೆ ದೂರನ್ನು ವರ್ಗಾಯಿಸುವುದು.
15. ಮಹಿಳೆಯರನ್ನು ಸಂಜೆ 06:00 ಗಂಟೆಯ ನಂತರ ಪೊಲೀಸ್ ಠಾಣೆಗೆ ವಿಚಾರಣೆಗಾಗಿ ಅಥವಾ ಹೇಳಿಕೆಯನ್ನು ನೀಡಲು ಕರೆತರಬಾರದು.
16. ಮಹಿಳೆಯು ಒಂದು ವೇಳೆ ಸಂತ್ರಸ್ಥೆಯಾಗಿದ್ದಲ್ಲಿ ಆಕೆಯನ್ನು ಮಹಿಳಾ ಪೊಲೀಸ್ ಅಧಿಕಾರಿಯ ನೆರವಿನೊಂದಿಗೆ, ಮಹಿಳೆಯ ವಾಸದ ಸ್ಥಳ/ಮನೆಯ ಬಳಿಯಲ್ಲಿಯೇ ವಿಚಾರಣೆ ಮಾಡಬೇಕು.
17. ಕ್ರಿಮಿನಲ್ ಪ್ರಕರಣಗಳಲ್ಲಿ ಮಹಿಳೆಯರು ಭಾಗಿಯಾದಾಗ ಅವರನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಅವರಿಗೆ ಯಾವುದೇ ಅವಮಾನಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕು ಮತ್ತು ಅವರನ್ನು ಸಂಜೆ 06.00 ಗಂಟೆಯ ನಂತರ ಪೊಲೀಸ್ ಠಾಣೆಯಲ್ಲಿ ಇರಿಸಬಾರದು, ಬದಲಿಗೆ ಅವರನ್ನು ರಾಜ್ಯ ಗೃಹ (ಸ್ಟೇಟ್ ಹೋಮ್) ಆಶ್ರಯ ತಾಣಗಳಲ್ಲಿ ಇರಿಸಬೇಕು.
18. ಉತ್ತಮವಾಗಿ ನೀಟಾದ ಸಮವಸ್ತ್ರವನ್ನು/ಮಫ್ತಿ ಬಟ್ಟೆಗಳನ್ನು ಧರಿಸುವ ಪೊಲೀಸ್ ಅಧಿಕಾರಿಯು ಸಾರ್ವಜನಿಕರಿಂದ ಉತ್ತಮ ಗೌರವವನ್ನು ಪಡೆಯುತ್ತಾನೆ. ಅಧಿಕಾರಿ ಮತ್ತು ಸಿಬ್ಬಂದಿಗಳು ನೀಟಾದ Turn out ಹೊಂದಿರಬೇಕು. ಇದು ಪೊಲೀಸ್ ಅಧಿಕಾರಿಯ ವ್ಯಕ್ತಿತ್ವ ಹಾಗೂ ಕಾರ್ಯದಕ್ಷತೆಗಳನ್ನು

ಉತ್ತೇಜಿಸುತ್ತದೆ. ನೀಟಾದ ಸಮವಸ್ತ್ರವು ವೃತ್ತಿಪರತೆ ಮತ್ತು ಶಿಸ್ತಿನ ಪ್ರತಿಬಿಂಬ ಅಷ್ಟೇ ಅಲ್ಲ ಪರಿಣಾಮಕಾರಿ ಪೊಲೀಸ್ ಕಾರ್ಯನಿರ್ವಹಣೆಗೆ ಅತ್ಯಗತ್ಯ.

ಪ್ರತಿಯೊಬ್ಬ ಅಧಿಕಾರಿಯು ಸಾರ್ವಜನಿಕರ ವಿಶ್ವಾಸವು ಪೊಲೀಸ್ ಇಲಾಖೆಯ ಅತ್ಯಂತ ಮೌಲ್ಯಯುತ ಆಸ್ತಿಯೆಂಬುದನ್ನು ನೆನಪಿಟ್ಟುಕೊಳ್ಳಬೇಕು. ಈ ಸೂಚನೆಗಳಿಂದ ಯಾವುದೇ ವಿಚಲನವನ್ನು ಗಂಭೀರವಾಗಿ ಪರಿಗಣಿಸಲಾಗುವುದು ಮತ್ತು ಇಲಾಖಾ ನಿಯಮಗಳ ಪ್ರಕಾರ ವ್ಯವಹರಿಸಲಾಗುವುದು.

ಎಲ್ಲಾ ಘಟಕಾಧಿಕಾರಿಗಳು ಈ ಸುತ್ತೋಲೆಯ ಅಂಶಗಳನ್ನು ತಮ್ಮ ಅಧೀನದಲ್ಲಿ ಇರುವ ಎಲ್ಲಾ ಸಿಬ್ಬಂದಿಗಳಿಗೆ ತಿಳಿಸಬೇಕು ಮತ್ತು ಕಟ್ಟುನಿಟ್ಟಾದ ಅನುಸರಣೆಯನ್ನು ಖಚಿತಪಡಿಸಿಕೊಳ್ಳಬೇಕು.

13/10/25

(ಡಾ॥ ಎಂ.ಎ. ಸಲೀಂ, ಐ.ಪಿ.ಎಸ್)
ಮಹಾನಿರ್ದೇಶಕರು ಮತ್ತು
ಪೊಲೀಸ್ ಮಹಾನಿರೀಕ್ಷಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಪ್ರತಿ,
1) ಎಲ್ಲಾ ಪೊಲೀಸ್ ಆಯುಕ್ತರುಗಳಿಗೆ
2) ಎಲ್ಲಾ ವಲಯಾಧಿಕಾರಿಗಳಿಗೆ
3) ಎಲ್ಲಾ ಪೊಲೀಸ್ ಅಧೀಕ್ಷಕರುಗಳಿಗೆ

ಅನುಬಂಧ–1

ABSTRACT

PART A : SUSPENSION DUE TO CRIMINAL CASES.

PART A (1) : SUSPENSION DUE TO CASES REGISTERED UNDER P.C - ACT.

Sl.No	Year	Rank	No. of Suspension during the Year
1.	2024	DySP	0
2.		PI	3
3.		PSI	12
4.		ASI	03
5.		HC	07
6.		PC	09
TOTAL			**34**
7.	2025	DySP	0
8.		PI	8
9.		PSI	1
10.		ASI	1
11.		HC	13
12.		PC	5
TOTAL			**28**
GRAND TOTAL			**62**

PART A (2): SUSPENSION DUE TO OTHER CRIMINAL CASES.

Sl.No	Year	Rank	No. of Suspension during the Year
1.	2024	DySP	1
2.		PI	0
3.		PSI	02
4.		ASI	01
5.		HC	12
6.		PC	18
TOTAL			**34**
7.	2025	DySP	0
8.		PI	2
9.		PSI	13
10.		ASI	5
11.		HC	15
12.		PC	26
TOTAL			**61**
GRAND TOTAL			**95**

PART B: SUSPENSION DUE TO OTHER CHARGES.

Sl.No	Year	Rank	No. of Suspension during the Year
1.	2024	DySP	3
2.		PI	26
3.		PSI	41
4.		ASI	38
5.		HC	116
6.		PC	150
TOTAL			**374**
7.	2025	DySP	3
8.		PI	22
9.		PSI	6
10.		ASI	25
11.		HC	68
12.		PC	58
TOTAL			**182**
GRAND TOTAL			**556**

2024		**2025**	
Total no. of suspension due to cases registered under PC Act	34	Total no. of suspension due to cases registered under PC Act	28
Total no. of suspension due to other criminal cases	34	Total no. of suspension due to other criminal cases	61
Total no. of suspension due to other charges	374	Total no. of suspension due to other charges	182
Total	**442**	**Total**	**271**
Grand Total	**713**		

ಅನುಬಂಧ–2

(ಅಮಾನತ್ತುಗೊಂಡ ಪ್ರಕರಣಗಳಲ್ಲಿ ಕರ್ತವ್ಯ ಲೋಪ ರುಜುವಾತಾದ ಅಧಿಕಾರಿ ರವರುಗಳ ವಿರುದ್ದ ಕೈಗೊಂಡ ಕ್ರಮದ ವಿವರಗಳು)

ಕ್ರ. ಸ	ಅಮಾನತ್ತಿನಲ್ಲಿರುವ ಅಧಿಕಾರಿಗಳು/ ಅಮಾನತ್ತುಗೊಂಡ ಸ್ಥಳ	ಪ್ರಕರಣದ ವಿವರ	ಅಮಾನತ್ತಿನ ಆದೇಶ ಸಂಖ್ಯೆ ಮತ್ತು ದಿನಾಂಕ	ಷರಾ
1.	ಸುಮೀತ್ ಎ. ಆರ್., ಡಿವೈಎಸ್‌ಪಿ, ಸಿವಿಲ್ ಮಂಡ್ಯ, ಶ್ರೀ ಅಶೋಕ್ ಕುಮಾರ್ ಬಿ., ಪೊಲೀಸ್ ಇನ್ಸ್‌ಪೆಕ್ಟರ್, ಶ್ರೀ ರವಿ ಬಿ.ಜೆ., ಪಿ.ಎಸ್.ಐ ಮತ್ತು ಶ್ರೀ ಎಂ. ರಮೇಶ್, ಸಿಹೆಚ್‌ಸಿ–408.	ದಿನಾಂಕ: 11–9–2024 ರಂದು ನಾಗಮಂಗಲ ಉಪ ವಿಭಾಗದ ಸರಹದ್ದಿನ ಬದ್ರಿಕೊಪ್ಪಲು ಗ್ರಾಮದ ಗಣೇಶ ವಿಸರ್ಜನೆಯ ಸಂಬಂಧವಾಗಿ ಉಭಯ ಕೋಮಿನವರ ನಡುವೆ ಉದ್ವಿಗ್ನ ಪರಿಸ್ಥಿತಿ ಸೃಷ್ಟಿಯಾಗಿ ಕಾನೂನು ಸುವ್ಯವಸ್ಥೆಗೆ ದಕ್ಕೆ ಉಂಟಾಗಲು ಕಾರಣರಾಗಿರುವುದು.	ಈ ಕಛೇರಿ ಪತ್ರ ಹೆಚ್‌ಆರ್‌ಎಂ–1(5)57/2024– 25, ದಿನಾಂಕ: 17.09.2024 ಹೆಚ್‌ಡಿ 392 ಪಿಇಜಿ 2024, ದಿನಾಂಕ: 14.11.2024 (ಸ್ಥಿರೀಕರಣ) ಲೀನ್– ಎ.ಎನ್.ಎಫ್, ಕಾರ್ಕಳ ಉಡುಪಿ.	ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 392 ಪಿಇಜಿ 2024, ದಿನಾಂಕ: 28.02.2025 ರಲ್ಲಿ ಸೇವೆಯಿಂದ ಅಮಾತ್ತಿನಲ್ಲಿರಿಸಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ತೆರವುಗೊಳಿಸಿ, ಪೊಲೀಸ್ ಉಪಾಧೀಕ್ಷಕರು, ಡಿಸಿಆರ್‌ಇ, ಮೈಸೂರು ಈ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 392 ಪಿಇಜಿ 2024, ದಿನಾಂಕ: 03.05.2025 ರಲ್ಲಿ ಡಾ: ಸುಮಿತ್ ಎ.ಆರ್., ಡಿವೈಎಸ್‌ಪಿ ಹಾಗೂ ಶ್ರೀ ಅಶೋಕ್ ಕುಮಾರ್ ಬಿ., ಪೊಲೀಸ್ ಇನ್ಸ್‌ಪೆಕ್ಟರ್ ಇವರುಗಳಿಗೆ ಕೆ.ಎಸ್.ಪಿ (ಡಿಪಿ) ನಿಯಮಗಳು 1965/89 ಮತ್ತು ತಿದ್ದುಪಡಿ ನಿಯಮ 2022 ರ ನಿಯಮ 4A(1)(a)(i) ರನ್ವಯ **"ವಾಗ್ದಂಡನೆ"** ವಿಧಿಸಿ, ಶ್ರೀ ರವಿ ಬಿ.ಜೆ., ಪಿ.ಎಸ್.ಐ ಮತ್ತು ಶ್ರೀ ಎಂ. ರಮೇಶ್, ಸಿಹೆಚ್‌ಸಿ–408 ಇವರುಗಳಿಗೆ ಕೆ.ಎಸ್.ಪಿ (ಡಿಪಿ) ತಿದ್ದುಪಡಿ ನಿಯಮ 2022 ರ ನಿಯಮ 4A(1)(a)(i) ರನ್ವಯ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ 03 (ಮೂರು) ತಿಂಗಳ ಕಾಲ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

2.	ಎಂ ಎಂ ನಧಾಫ್, ಪಿಐ	ಗದಗ ಗ್ರಾಮೀಣ ಪೊಲೀಸ್ ಠಾಣಾ ಮೊ.ಸಂ:100/2024 ಅನ್ನು ದಾಖಲಿಸುವಂತೆ ಡಿಎಸ್‌ಪಿ ರವರು ಸೂಚಿಸಿದರೂ ಸಹ, ವಿಳಂಬವಾಗಿ ದೂರು ದಾಖಲು ಮಾಡಿರುತ್ತಾರೆ. ಸದರಿ ಪ್ರಕರಣದ ಆರೋಪಿಗಳ ವಿರುದ್ಧ ಯಾವುದೇ ಕ್ರಮ ಜರುಗಿಸಿರುವುದಿಲ್ಲ.	ಎಸ್‌ಪಿ., ಗದಗ ಜಿಲ್ಲೆ ರವರ ಆದೇಶ ಸಂಖ್ಯೆ:ಇವಿ/ಅಮಾನತ್ತು-03/ಸಿಆರ್-350/2024, ದಿನಾಂಕ:07/06/2024 ರಲ್ಲಿ ಅಮಾನತ್ತುಗೊಳಿಸಲಾಗಿರುತ್ತದೆ ಹಾಗೂ ಈ ಕಛೇರಿಯ ಆದೇಶ ದಿನಾಂಕ:14/06/2024 ರಲ್ಲಿ ಸದರಿ ಅಮಾನತ್ತಿನ ಆದೇಶವನ್ನು ಸ್ಥಿರೀಕರಿಸಲಾಗಿರುತ್ತದೆ.	ಸದರಿಯವರ ವಿರುದ್ಧ ದಿನಾಂಕ:17/07/2025 ರಂದು ಕೆಎಸ್‌ಪಿ (ಡಿಪಿ) ನಿಯಮಗಳು, 1965/22 ರ ನಿಯಮ 7 ರಡಿಯಲ್ಲಿ ದೋಷಾರೋಪಣಾ ಪತ್ರವನ್ನು ಹೊರಡಿಸಿ, ಸದರಿಯವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂಬರುವ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗದಂತೆ 01 ವರ್ಷ ಕಾಲ ತಡೆಹಿಡಿದು, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದೆ.
3.	ಎಸ್ ಹೆಚ್ ಭಜಂತ್ರಿ, ಪಿಐ	ಠಾಣಾ ವ್ಯಾಪ್ತಿಯಲ್ಲಿನ ಅನೈತಿಕ ಚಟುವಟಿಕೆಗಳ ಬಗ್ಗೆ ಸೂಕ್ತ ಗಮನ ಹರಿಸದೇ, ಅಗತ್ಯ ಕ್ರಮ ಕೈಗೊಳ್ಳದೇ, ಮೇಲಾಧಿಕಾರಿಗಳ ಸಲಹೆ ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸದೇ, ಠಾಣೆಯ ಹಲವು ಪ್ರಕರಣಗಳಲ್ಲಿ ಸೂಕ್ತ ತನಿಖೆಯನ್ನು ಜರುಗಿಸದೇ ಕರ್ತವ್ಯದಲ್ಲಿ ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುತ್ತಾರೆ ಹಾಗೂ ಮೇಲಾಧಿಕಾರಿಗಳೊಂದಿಗೆ ನಡೆದ ಸಭೆಗಳಲ್ಲಿ ಉಡಾಫೆ ಉತ್ತರಗಳನ್ನು ನೀಡುವ ಮೂಲಕ ಅಶಿಸ್ತು ಪ್ರದರ್ಶಿಸಿರುತವ ಆರೋಪ	ಸಿಓಪಿ., ಮಂಗಳೂರು ನಗರ ರವರ ಆದೇಶ ಸಂಖ್ಯೆ:ಇಎಸ್ಟಿ-3/ಅಮಾನತ್ತು/05/2024, ದಿನಾಂಕ:12/01/2024 ರಲ್ಲಿ ಅಮಾನತ್ತುಗೊಳಿಸಲಾಗಿರುತ್ತದೆ. ದಿನಾಂಕ:30/01/2024 ರಲ್ಲಿ ಅಮಾನತ್ತಿನ ಆದೇಶವನ್ನು ಸ್ಥಿರೀಕರಿಸಲಾಗಿರುತ್ತದೆ.	ದಿನಾಂಕ:21/05/2024 ರಲ್ಲಿ ಕೆಎಸ್‌ಪಿ (ಡಿಪಿ) ನಿಯಮಗಳು, 1965/22 ರ ನಿಯಮ 7 ರಡಿಯಲ್ಲಿ ದೋಷಾರೋಪಣಾ ಪತ್ರವನ್ನು ಹೊರಡಿಸಿ, ದಿನಾಂಕ:/05/2024 ರಲ್ಲಿ ಸದರಿಯವರಿಗೆ ವಾಗ್ದಂಡನೆ ವಿಧಿಸಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದೆ.
4.	ಸೋಮಶೇಖರ್ ಜೆ ಸಿ, ಪಿಐ	ಮೊ.ಸಂ:70/2025 ಹಾಗೂ ಮೊ.ಸಂ:235/2024 ಪ್ರಕರಣಗಳಲ್ಲಿ ಯಾವುದೇ ಕಾನೂನು ರೀತಿಯ ಕ್ರಮಗಳನ್ನು ಕೈಗೊಳ್ಳದೇ, ಸಂಸ್ಥೆಯು ಕಾರ್ಯ ನಿರ್ವಹಿಸಲು ಅವಕಾಶವನ್ನು ಮಾಡಿಕೊಟ್ಟು, ಹಲವು ಉದ್ಯೋಗ ಆಕಾಂಕ್ಷಿಗಳು ಮೋಸ ಹೋಗಲು ಕಾರಣರಾಗಿರುವ ಆರೋಪ	ಸಿಓಪಿ., ಮಂಗಳೂರು ನಗರ ರವರ ಆದೇಶ ಸಂಖ್ಯೆ:ಎಂಜಿಸಿ/ಸಿಬ್ಬಂದಿ-3/ ಅಮಾನತ್ತು/14/2025, ದಿನಾಂಕ:17-05-2025ರಲ್ಲಿ ಅಮಾನತ್ತುಗೊಳಿಸಲಾಗಿರುತ್ತದೆ ಹಾಗೂ ಈ ಕಛೇರಿಯ ಆದೇಶ ದಿನಾಂಕ:04/06/2025 ರಲ್ಲಿ ಸದರಿ ಅಮಾನತ್ತಿನ ಆದೇಶವನ್ನು ಸ್ಥಿರೀಕರಿಸಲಾಗಿರುತ್ತದೆ.	ದಿನಾಂಕ:13/08/2025 ರಂದು ಕೆಎಸ್‌ಪಿ (ಡಿಪಿ) ನಿಯಮಗಳು, 1965/22 ರ ನಿಯಮ 7 ರಡಿಯಲ್ಲಿ ದೋಷಾರೋಪಣಾ ಪತ್ರ ಹೊರಡಿಸಲಾಗಿರುತ್ತದೆ. ದಿನಾಂಕ:06/11/2025 ರಲ್ಲಿ ಸದರಿಯವರಿಗೆ ವಾಗ್ದಂಡನೆ ವಿಧಿಸಲಾಗಿರುತ್ತದೆ.

ಅನುಬಂಧ-3

(ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧದ ಕರ್ತವ್ಯಲೋಪ ಮತ್ತು ಭ್ರಷ್ಟಾಚಾರ ಪ್ರಕರಣಗಳಲ್ಲಿ ಲೋಪ ರುಜುವಾತಾಗಿರುವ / ಕೈಗೊಂಡ ಕ್ರಮ / ಶಿಕ್ಷೆಗಳ ವಿವರ)

ಸಿಓಪಿ, ಬೆಂಗಳೂರು ನಗರ

ಕ್ರಮ ಸಂಖ್ಯೆ	ಆಪಾದಿತ ಪೊಲೀಸ್ ಅಧಿಕಾರಿ / ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪ ವಿವರ	ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ (ಲೋಕಾಯುಕ್ತ & ಕ್ರಿಮಿನಲ್ ಪ್ರಕರಣಗಳನ್ನು ಹೊರತುಪಡಿಸಿ)	ಅಮಾನತ್ತು ಬಿಡುಗಡೆ ದಿನಾಂಕ	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ / ಪ್ರಸ್ತುತ ಹಂತ	ಪ್ರಸ್ತುತ ಹಂತ
1	ಶಿವರಾಜ್ ಗರಸಂಗಿ, ಪಿಎಸ್ ಐ ಹರ್ಷಕುಮಾರ್, ಪಿಸಿ 19781	ಪ್ರಕರಣದ ಆರೋಪಿಗಳನ್ನು ಅಕ್ರಮ ಬಂಧನದಲ್ಲಿಟ್ಟಿರುವ ಆರೋಪ, ಹಣ ಮತ್ತು ಚಿನ್ನದ ಒಡವೆಗಳನ್ನು ಮಾಲುಪಟ್ಟಿಯಲ್ಲಿ ನಮೂದಿಸದೇ ದುರುದ್ದೇಶದಿಂದ ವಶದಲ್ಲಿಟ್ಟುಕೊಂಡಿರುವ ಆರೋಪ, ರೂ.20,000/- ಗಳ ಅಕ್ರಮ ಹಣ ಪಡೆದಿರುವ ಆರೋಪ	03-05-2024	19-08-2024	ರುಜುವಾತಾಗಿದೆ	ಶಿವರಾಜ್ ಗರಸಂಗಿ - ಪಿಎಸ್ಐ ರವರಿಗೆ ವಾರ್ಷಿಕ ವೇತನ ಬಡ್ತಿಯನ್ನು 2 ವರ್ಷಗಳ ಕಾಲ ಧಕ್ಕೆಯಾಗುವಂತೆ ಮುಂದೂಡಲಾಗಿದೆ. ಹರ್ಷಕುಮಾರ್ - ಪಿಸಿ 19781 ರವರಿಗೆ ವಾರ್ಷಿಕ ವೇತನ ಬಡ್ತಿಯನ್ನು 1 ವರ್ಷದ ಕಾಲ ಧಕ್ಕೆಯಾಗದಂತೆ ಮುಂದೂಡಲಾಗಿದೆ. ಇಬ್ಬರಿಗೂ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಲಾಗಿದೆ.		
2	ಹನುಮಂತ ಸಿಂಗ್ , ಆರ್ಎಸ್ಐ	ವಿಚಾರಣಾ ಖೈದಿಯನ್ನು ನ್ಯಾಯಾಲಯಕ್ಕೆ ಕರೆದೊಯ್ದ ಸಂದರ್ಭದಲ್ಲಿ ಮಧ್ಯಪಾನ ಮಾಡಿ ಕರ್ತವ್ಯ ಲೋಪವೆಸಗಿರುವ ಆರೋಪ	28-03-2024	17-07-2024	ರುಜುವಾತಾಗಿದೆ	ವಾರ್ಷಿಕ ವೇತನ ಬಡ್ತಿಯನ್ನು, ಮುಂದಿನ ವೇತನ ಬಡ್ತಿಗಳಿಗೆ ಧಕ್ಕೆಯಾಗುವಂತೆ 2 ವರ್ಷಗಳ ಕಾಲ ಮುಂದೂಡಲಾಗಿದೆ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಲಾಗಿದೆ.		

3	ಆಕಾಶ್, ಆರ್ಎಸ್ಐ ಅಬ್ದುಲ್ ಲತೀಫ್, ಎಆರ್ಎಸ್ಐ ಅಪ್ಪಾಜಿ, ಎಹೆಚ್ಸಿ 22133 ಸಂಗಮೇಶ್ ಹಳ್ಳಿ, ಎಪಿಸಿ 18578 ಸಚಿನ್ ಸವದಿ, ಎಪಿಸಿ 19564	ವಿಚಾರಣಾ ಖೈದಿಯನ್ನು ತಿರುವನಂತಪುರದ ನ್ಯಾಯಾಲಯಕ್ಕೆ ಹಾಜರುಪಡಿಸಿ ವಾಪಸ್ ಕರೆದುಕೊಂಡು ಬರುವ ಸಂದರ್ಭದಲ್ಲಿ ತಪ್ಪಿಸಿಕೊಂಡಿದ್ದು, ಕರ್ತವ್ಯ ನಿರ್ಲಕ್ಷತೆಯ ಆರೋಪ	19-04-2024	14-08-2024	ರುಜುವಾತಾಗಿದೆ	ಅಪೊಅ 1, 2 5 ರವರ ವಾರ್ಷಿಕ ವೇತನ ಬಡ್ತಿಯನ್ನು ಧಕ್ಕೆಯಾಗುವಂತೆ 2 ವರ್ಷಗಳ ಕಾಲ ಮುಂದೂಡಲಾಗಿದೆ. ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದೆ. ಅಪೊಅ 3 ಮತ್ತು 4 ರವರನ್ನು ದೋಷಮುಕ್ತಗೊಳಿಸಿದೆ. ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿ ಎಂದು ಆದೇಶಿಸಿದೆ		
4	ಮೆಹಬೂಬ್, ಪಿಎಸ್ಐ ನಾರಾಯಣಪ್ಪ, ಎಎಸ್ಐ ಮಂಜಾನಾಯ್ಕ, ಹೆಚ್ಸಿ 9595 ಸಚಿನ್ ಬಿ ಎನ್, ಪಿಸಿ 22769	ಮಾನ್ಯ ಮುಖ್ಯ ಮಂತ್ರಿಗಳ ಚುನಾವಣೆ ಸಮಯದಲ್ಲಿ ಭದ್ರತೆ ವಿಷಯದಲ್ಲಿ ಕರ್ತವ್ಯ ಲೋಪವೆಸಗಿರುವ ಆರೋಪ	18-04-2024	25-04-2024	ರುಜುವಾತಾಗಿದೆ	ನಿಯಮ-7 ರಡಿಯಲ್ಲಿ ಕ್ರಮ ಕೈಗೊಳ್ಳಲು ಆದೇಶಿಸಿದ್ದು ಕಡತವನ್ನು ಡಿಇ-3 ಶಾಖೆಗೆ ದಿ:24-07-2024 ರಂದು ವರ್ಗಾಯಿಸಲಾಗಿದೆ. ದಿ: 17-03-2025 ರಂದು ಅಪೊಅ ರವರುಗಳ ವಾರ್ಷಿಕ ವೇತನ ಬಡ್ತಿಯನ್ನು ಧಕ್ಕೆಯಾಗದಂತೆ 3 ತಿಂಗಳ ಕಾಲ ಮುಂದೂಡಲಾಗಿದೆ.		
5	ಮುಜಾಮಿಲ್, ಪಿಎಸ್ಐ ಆನಂದ ಜಿ ಎಸ್, ಹೆಚ್ಸಿ 12156 ವಿಠೋಬಾ ವಾಲೀಕರ್, ಹೆಚ್ಸಿ 12014 ಅಫ್ಜಲ್ ಅಹಮದ್, ಪಿಸಿ 20868	ಕದ್ದಮಾಲುಗಳನ್ನು ಪಡೆದುಕೊಂಡವರನ್ನು ಬೆದರಿಸಿ ಹಣಕ್ಕೆ ಬೇಡಿಕೆ ಇಟ್ಟು ಹಣವನ್ನು ಸ್ವೀಕರಿಸಿರುವ ಆರೋಪ ಹಾಗೂ ದೂರುದಾರರನ್ನು ಹೆದರಿಸಿರುವ ಆರೋಪ	13-09-2024	24-12-2024	ರುಜುವಾತಾಗಿದೆ	ವಾಗ್ದಂಡನೆ ವಿಧಿಸಲಾಗಿದೆ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಲಾಗಿದೆ.		

2024, ನಮೂನೆ - 2								
ಕ್ರಮ ಸಂಖ್ಯೆ	**ಆಪಾದಿತ ಪೊಲೀಸ್ ಅಧಿಕಾರಿ / ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ**	**ಆರೋಪ ವಿವರ**	**ಭ್ರಷ್ಟಾಚಾರದಡಿಯಲ್ಲಿ ಪ್ರಕರಣಗಳಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ**	**ಅಮಾನತ್ತು ಬಿಡುಗಡೆ ದಿನಾಂಕ**	**ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ**	**ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ**	**ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ / ಪ್ರಸ್ತುತ ಹಂತ**	**ಪ್ರಸ್ತುತ ಹಂತ**
1	ಸತೀಶ್ ಕೆ ಟಿ, ಪಿಎಸ್ಐ	dailyhunt.in ವೆಬ್ ಪೋರ್ಟ್‌ಲ್ ನಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ತೇಜೋವಧೆ ಮತ್ತು ಕೊಲೆ ಬೆದರಿಕೆ ಪೋಸ್ಟ್ ಮಾಡಿರುವುದರಿಂದ ಇವರ ವಿರುದ್ಧ ಸಿಸಿಪಿಎಸ್ ನಲ್ಲಿ ಮೊ. ಸಂಖ್ಯೆ: 8/2024 ದಾಖಲಾಗಿರುತ್ತದೆ	15-06-2024		ಕಡತ ನಿಲಂಬನೆಯಲ್ಲಿರುತ್ತದೆ	ಸದರಿಯವರನ್ನು ಬೇರೊಂದು ಇಲಾಖಾ ವಿಚಾರಣೆಯಲ್ಲಿ ದಿ:13-09-2024 ರಂದು ಸೇವೆಯಿಂದ ತೆಗೆದು ಹಾಕಲಾಗಿರುವುದರಿಂದ ಈ ಕಡತವು ನಿಲಂಬನೆಯಲ್ಲಿರುತ್ತದೆ	ದೋಷಾರೋಪಣೆ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ	
2	ಸೈಯ್ಯದ್ ನಿಜಾಮುದ್ದೀನ್, ಪಿಎಸ್ಐ	ಸದರಿಯವರು ರಜೆಯಲ್ಲಿ ತಮ್ಮ ಊರಾದ ಮುಳಬಾಗಿಲಿಗೆ ಹೋಗಿದ್ದಾಗ, ಮಸೀದಿಯಲ್ಲಿನ ಸಭೆಯಲ್ಲಿ ಗಲಾಟೆ ಮಾಡಿಕೊಂಡು ಪರಸ್ಪರರು ಹೊಡೆದಾಡಿಕೊಂಡು ದೂರು-ಪ್ರತಿದೂರನ್ನು ದಾಖಲಿಸಿಕೊಂಡಿದ್ದು, ಪೊಲೀಸ್ ಅಧಿಕಾರಿಗೆ ತಕ್ಕದಲ್ಲದ ರೀತಿಯಲ್ಲಿ ವರ್ತಿಸಿರುವ ಆರೋಪ	07-06-2024	05-12-2024	ರುಜುವಾತಾಗಿದೆ	ವಾರ್ಷಿಕ ವೇತನ ಬಡ್ತಿಯನ್ನು ಧಕ್ಕೆಯಾಗದಂತೆ 1 ವರ್ಷಗಳ ಕಾಲ ಮುಂದೂಡಿದೆ. ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಲಾಗಿದೆ.	ಪರಸ್ಪರ ಒಪ್ಪಿಗೆಯನ್ವಯ ಮಾನ್ಯ ಉಚ್ಚನ್ಯಾಯಾಲಯ FIR ಅನ್ನು ರದ್ದುಗೊಳಿಸಿರುತ್ತದೆ	

2025, ನಮೂನೆ-2								
ಕ್ರಮ ಸಂಖ್ಯೆ	**ಆಪಾದಿತ ಪೊಲೀಸ್ ಅಧಿಕಾರಿ / ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ**	**ಆರೋಪ ವಿವರ**	**ಭ್ರಷ್ಟಾಚಾರದಡಿಯಲ್ಲಿ ಪ್ರಕರಣಗಳಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ**	**ಅಮಾನತ್ತು ಬಿಡುಗಡೆ ದಿನಾಂಕ**	**ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ**	**ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ**	**ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ / ಪ್ರಸ್ತುತ ಹಂತ**	**ಪ್ರಸ್ತುತ ಹಂತ**
1	ಮಂಜುನಾಥ ಹೆಚ್, ಪಿಎಸ್ಐ	ಅಕ್ರಮ ಸಂಬಂಧ ಹೊಂದಿರುವ ಬಗ್ಗೆ ವಿಚಾರಿಸಲು ಹೋದ ತಾಯಿ ಮತ್ತು ಸಹೋದರಿಯರ ಮೇಲೆ ಹಲ್ಲೆ ಮಾಡಿದ್ದು, **ಕೆ ಆರ್ ಪುರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 123/2025 ಪ್ರಕರಣ ದಾಖಲಾಗಿದ್ದು,** ಇವರ ಅನುಚಿತ ವರ್ತನೆ ಮಾಧ್ಯಮದಲ್ಲಿ ಬಿತ್ತರಗೊಂಡು ಇಲಾಖೆಗೆ ಮುಜುಗರ ಉಂಟಾಗಿರುವ ಆರೋಪ	19-02-2025	18-06-2025	ರುಜುವಾಗಿರುತ್ತದೆ	ವಾಗ್ದಂಡನೆ ವಿಧಿಸಲಾಗಿದೆ. ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಲಾಗಿದೆ.	ಪರಸ್ಪರ ಒಪ್ಪಿಗೆಯಂತೆ ಬಿ-ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ	

ನಮೂನೆ-1 (2024)

ಕ್ರ. ಸಂ	**ಆಪಾದಿತ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಹೆಸರು & ಹುದ್ದೆ**	**ಆರೋಪ ವಿವರ**	**ಕರ್ತವ್ಯ ಲೋಪದ ಡಿಯಲ್ಲಿ ಅಮಾನತ್ತು ಗೊಳಿಸಿರುವ ದಿನಾಂಕ: (ಲೋಕಾಯುಕ್ತರು & ಕ್ರಿಮಿನಲ್ ಪ್ರಕರಣಗಳನ್ನು ಹೊರತುಪಡಿಸಿ)**	**ಅಮಾನತ್ತು ಬಿಡುಗಡೆ ದಿನಾಂಕ**	**ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ**	**ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ**	**ಕ್ರಿಮಿನಲ್ ಪ್ರಕಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ/ಪ್ರಸ್ತುತ ಹಂತ**	**ಪ್ರಸ್ತುತ ಹಂತ**
1	1. ಶ್ರೀ. ಮಂಜುನಾಥ, ಹೆಚ್.ಸಿ-7662 2. ಆನಂದ್ ಕುಮಾರ್, ಹೆಚ್ಸಿ-10204 3. ಶ್ರೀ ಅನಂತರಾಜು, ಪಿಸಿ-	ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ಠಾಣಾ ಮೊ.ಸಂ.154/2024 ಕಲಂ.27(ಬಿ) ಎನ್.ಡಿ.ಪಿ.ಎಸ್ ಆಕ್ಟ್ ರೀತ್ಯಾ	10.08.2024	19.11.2025		ಆರೋಪ ಸಾಭೀತಾದ ಹಿನ್ನಲೆಯಲ್ಲಿ ಸದರಿಯವರುಗಳ ವಾರ್ಷಿಕ ವೇತನ		**ಅಂತಿಮ ಆದೇಶ ಹೊರಡಿಸಲಾಗಿದೆ.**

	4340	ಪ್ರಕರಣ ದಾಖಲು ಮಾಡಿ ತನಿಖೆ ಕೈಗೊಂಡಿದ್ದು, ತನಿಖೆ ವೇಳೆಯಲ್ಲಿ ನೀವುಗಳು ಭಾಗಿಯಾಗಿರುವುದು ಕಂಡುಬಂದಿರುತ್ತದೆ. ನೀವುಗಳು ಶಿಸ್ತಿನ ಇಲಾಖೆಯಲ್ಲಿದ್ದು, ಈ ರೀತಿಯಾಗಿ ಕಾನೂನು ಬಾಹಿರ ಚಟುವಟಿಕೆಯಲ್ಲಿ ಭಾಗವಹಿಸಬಾರದೆಂದು ತಿಳಿದಿದ್ದರು ಸಹಾ ಹುಡುಗ-ಹುಡುಗಿಯರನ್ನು ಸೇರಿಸಿಕೊಂಡು ಪಾರ್ಟಿ ಮಾಡಿ				ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗದಂತೆ (6) ತಿಂಗಳ ಕಾಲ ಮುಂದೂಡಲಾಗಿದೆ.		
				2025				
2	ಶ್ರೀ ಪಿ.ಎಂ ಬಾಬು, ಹೆಚ್.ಸಿ-7005,	ಶ್ರೀಮತಿ ಮಂಜುಳಾ ರವರ ಹೇಳಿಕೆ ಕೊಟ್ಟಿರುತ್ತಾರೆ. ಈ ಸಂಬಂಧ ನೀವು ಮಂಜುಳಾ ರವರಿಗೆ ಹಲವಾರು ಬಾರಿ ಫೋನ್ ಮಾಡಿ ಬೆದರಿಕೆ ಹಾಕಿದ್ದಲ್ಲದೆ, ದಿನಾಂಕ:19.03.2025 ರಂದು ಮದ್ಯಾಹ್ನ 2.00 ರಿಂದ 2.30 ರ ಸಮಯದಲ್ಲಿ ಮಂಜುಳಾ ಮತ್ತು ಅವರ ತಾಯಿ ಊಟ ಮಾಡುತ್ತಿರುವಾಗ ನೀವು ಅವರ ಮನೆಗೆ ಅಕ್ರಮವಾಗಿ ಪ್ರವೇಶ ಮಾಡಿ ಮಂಜುಳಾ ರವರ ತಾಯಿಗೆ ಬಾಯಿಗೆ ಬಂದಂತೆ ಅವ್ಯಾಚ ಶಬ್ದಗಳಿಂದ ಬೈದು ಮಂಜುಳಾ ರವರ ಮೇಲೆ ಕೈಗಳಿಂದ ಹಲ್ಲೆ ಮಾಡಿ ಅವರ ತಾಯಿಯಾದ ಲಕ್ಷ್ಮಮ್ಮ ರವರಿಗೂ ಹೊಡೆಯಲು ಯತ್ನಿಸಿರುತ್ತೀರಿ. ನಂತರ ಅವರುಗಳನ್ನು ರೂಮಿನಲ್ಲಿ ಕೂಡಿ ಹಾಕಿ ಕೈಗೆ ಸಿಕ್ಕಿದ ಸಾಮಾನುಗಳಿಂದ ಹೊಡೆದಿರುವ ಬಗ್ಗೆ.	27.03.2025	31.05.2025	**ಆರೋಪ ರುಜುವಾತಾಗಿದೆ.**	ಸೇವೆಯಿಂದ ವಜಾಗೊಳಿಸಲಾಗಿದೆ. ಹಾಗೂ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತು ಎಂದು ಪರಿಗಣಿಸಿದೆ.	-	-

ಕ್ರ. ಸಂ	ಆಪಾದಿತಪೊಲೀಸ್ ಅಧಿಕಾರಿ/ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪದ ವಿವರ	ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ (ಲೋಕಾಯುಕ್ತ &ಕ್ರಿಮಿನಲ್ ಪ್ರಕರಣಗಳನ್ನು ಹೊರತುಪಡಿಸಿ)	ಅಮಾನತ್ತು ಬಿಡುಗಡೆ ದಿನಾಂಕ	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ/ಪ್ರಸ್ತುತ ಹಂತ	ಪ್ರಸ್ತುತ ಹಂತ
01	1. ಶ್ರೀನಾಗೇಶ್ ರಾವ್, ಪಿಎಸ್ಐ (ಪ್ರಸ್ತುತ ಡಿ.ಜೆ.ಹಳ್ಳಿ ಪೊ.ಠಾಣೆ) 2. ಶ್ರೀ ನವೀನ್, ಪಿಸಿ-13621 ಕೆ.ಆರ್ (ಪ್ರಸ್ತುತ ಸಿದ್ದಾಪುರ ಪೊ.ಠಾಣೆ) ಈ ಹಿಂದೆ ಕೆ.ಆರ್.ಪುರ ಸಂಚಾರ ಪೊ.ಠಾಣೆ	ಸಾರ್ವಜನಿಕರಿಂದ ಹಣ ಪಡೆದ ಬಗ್ಗೆ ಹಾಗೂ ಅಪಘಾತದ ಮಾಹಿತಿಯನ್ನು ಹಿರಿಯ ಅಧಿಕಾರಿಗಳಿಗೆ ನೀಡದೇ ಕರ್ತವ್ಯದಲ್ಲಿ ಲೋಪವೆಸಗಿರುವುದು ಪ್ರಾಥಮಿಕ ವರದಿಯಲ್ಲಿ ದೃಢಪಟ್ಟಿರುತ್ತದೆ.	03-10-2024	12-02-2025	ಇಲಾಖಾ ವಿಚಾರಣೆಯಲ್ಲಿ ಹಣ ಪಡೆದಿರುವುದು ದೃಢಪಟ್ಟಿರುವುದಿಲ್ಲ ಆದರೇ ಅಪಘಾತದ ಬಗ್ಗೆ ಹಾಗೂ ಘಟನೆಯ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತರದೇ ಕರ್ತವ್ಯ ಲೋಪ ದೃಢಪಟ್ಟಿರುತ್ತದೆ.	ವಾ. ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗುವಂತೆ ಒಂದು (01) ವರ್ಷಗಳ ಕಾಲ ಮುಂದೂಡಿದೆ ಹಾಗೂ ದಿನಾಂಕ:03-10-2024 ರಿಂದ 12-02-2025 ರವರೆಗಿನ 142 ದಿನಗಳ ಇವರುಗಳ ಅಮಾನತ್ತಿನ ಅವಧಿಯನ್ನು ಅಮಾನತ್ತು ಎಂದೇ ಪರಿಗಣಿಸಿ ಆದೇಶ.	ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಠಾಣೆಯಲ್ಲಿ ಮೊ.ಸಂ:34/2024 ಲಂಚ ಪ್ರಕರಣ ದಾಖಲಾಗಿರುತ್ತದೆ . (ಪ್ರಸ್ತುತ ಹಂತ ಸಂಬಂಧಪಟ್ಟ ಲೋಕಾಯುಕ್ತ ಘಟಕದಲ್ಲಿ ಲಭ್ಯವಿರುತ್ತದೆ)	ಈ ಕಛೇರಿಯಲ್ಲಿ ಅಂತಿಮ ಆದೇಶಗೊಳಿಸಿ ಮುಕ್ತಾಯಗೊಳಿಸಲಾಗಿರುತ್ತದೆ .

ಡಿಸಿಪಿ ಪಶ್ಚಿಮ ವಿಭಾಗ

ನಮೂನೆ-1

ಕ್ರ. ಸಂ	ಆಪಾದಿತಪೊಲೀಸ್ ಅಧಿಕಾರಿ/ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪದ ವಿವರ	ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ (ಲೋಕಾಯುಕ್ತ &ಕ್ರಿಮಿನಲ್ ಪ್ರಕರಣಗಳನ್ನು ಹೊರತುಪಡಿಸಿ)	ಅಮಾನತ್ತು ಬಿಡುಗಡೆ ದಿನಾಂಕ	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ/ ಪ್ರಸ್ತುತ ಹಂತ	ಪ್ರಸ್ತುತ ಹಂತ
01	ಶಾಂತರಾಮಯ್ಯ.ಕೆ, ಪಿಎಸ್ಐ, ವಿವಿಐಪಿ ಭದ್ರತಾ ವಿಭಾಗ, ಮತ್ತು ಸಾಧಿಕ್ ಎಸ್.ಬಿ, ಪಿಸಿ-19105, ಹೈಗ್ರೌಂಡ್ಸ್ ಸಂಚಾರಪೊಲೀಸ್ಠಾಣೆ, ಬೆಂಗಳೂರು ನಗರ (ಈ ಹಿಂದೆ ವಿಜಯನಗರ ಸಂಚಾರ ಪೊಲೀಸ್ ಠಾಣೆ)	ಕರ್ತವ್ಯದ ವೇಳೆ ಹಾಗೂ ವಿಶೇಷ ಕಾರ್ಯಾಚರಣೆ ಸಮಯದಲ್ಲಿ ಕಡ್ಡಾಯವಾಗಿ ಬಾಡಿ ವೋರ್ನ್ ಕ್ಯಾಮರಗಳನ್ನು ಧರಿಸುವಂತೆ ಹಿರಿಯ ಅಧಿಕಾರಿಗಳ ಕಟ್ಟು ನಿಟ್ಟಿನ ಆದೇಶವಿದ್ದರೂ ಮತ್ತು ಸಾರ್ವಜನಿಕರೊಂದಿಗೆ ಸಂಯಮದಿಂದ ವರ್ತಿಸುವಂತೆ ಅನೇಕ ಬಾರಿಸೂಚಿಸಿದ್ದರೂ ಪಿ ಸಹ ಬಾಡಿ ವೋರ್ನ್ ಕ್ಯಾಮರಗಳನ್ನು ಧರಿಸದೆ ಮತ್ತು ಸಾರ್ವಜನಿಕರೊಂದಿಗೆ ಸಂಯಮದಿಂದ ವರ್ತಿಸದೆ ಲಂಚಕ್ಕೆ ಬೇಡಿಕೆ ಇಟ್ಟ ಬಗ್ಗೆ ಹಾಗೂ ಸಾರ್ವಜನಿಕರಿಗೆ ಹಲ್ಲೆ ಮಾಡಿದ ಬಗ್ಗೆ ಸಾರ್ವಜನಿಕರಿಗೆ ತಪ್ಪು ಸಂದೇಶ ಹೋಗುವ ರೀತಿ ಮಾಧ್ಯಮಗಳಲ್ಲಿ ಪ್ರಸಾರವಾಗುವುದಕ್ಕೆ ಕಾರಣರಾಗುವಂತೆ ನಡೆದುಕೊಂಡು ಪೊಲೀಸ್ ಇಲಾಖೆಗೆ ಮುಜುಗರ ಉಂಟಾಗುವಂತೆ ವರ್ತಿಸಿ ಇಲಾಖೆಗೆ ಅಗೌರವ ತಂದಿರುವುದು ನಿಮ್ಮಗಳಕರ್ತವ್ಯದಲ್ಲಿತೀವ್ರನಿರ್ಲಕ್ಷತೆ, ಬೇಜವಾಬ್ದಾರಿತನಮತ್ತುಉದಾಸೀನತೆತೋರಿರುವುದುಮೇಲ್ನೋಟಕ್ಕೆಕಂಡುಬಂದಿರುವ ಆರೋಪ.	17-03-2025	13-05-2025	ಕರ್ತವ್ಯದ ವೇಳೆ ಹಾಗೂ ವಿಶೇಷ ಕಾರ್ಯಾಚರಣೆ ಸಮಯದಲ್ಲಿ ಕಡ್ಡಾಯವಾಗಿ ಬಾಡಿ ವೋರ್ನ್ ಕ್ಯಾಮರಗಳನ್ನು ಧರಿಸಲ್ಲದಿರುವುದು ಇಲಾಖಾ ವಿಚಾರಣೆಯಲ್ಲಿ ರುಜುವಾತಾಗಿರುತ್ತದೆ.	ವಾ.ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗುವಂತೆ ಒಂದು(01) ವರ್ಷಗಳಕಾಲ ಮುಂದೂಡಿದೆ ಹಾಗೂ ದಿನಾಂಕ:17-03-2025 ರಿಂದ 13-05-2025 ರವರೆಗಿನ 58 ದಿನಗಳ ಅಮಾನತ್ತಿನ ಅವಧಿಯನ್ನು ಅಮಾನತ್ತು ಎಂದೇ ಪರಿಗಣಿಸಿ ಆದೇಶ.	-	ಈ ಕಛೇರಿಯಲ್ಲಿ ಅಂತಿಮ ಆದೇಶಗೊಳಿಸಿ ಮುಕ್ತಾಯಗೊಳಿಸಲಾಗಿರುತ್ತದೆ.
02	ಶ್ರೀ ರವಿಕುಮಾರ್.ಎನ್.ಸಿ, ಪಿಎಸ್ಐ(ಹಲಸೂರುಗೇಟ್ ಸಂಚಾರ) ಮತ್ತು ಶ್ರಿ ಕೃಷ್ಣ ಕುಮಾರ್ ಮಾನಪ್ಪ ಚೌವಾಣ, ಹೆಚ್ಸಿ-12980 (ಜೆ.ಬಿ.ನಗರ ಸಂಚಾರ)	ವಿಶೇಷಕಾರ್ಯಾಚರಣೆಕರ್ತವ್ಯದಸಮಯದಲ್ಲಿಬಾಡಿವೋರ್ನ್ಯಾಮೇರಾವನ್ನುರೆಕಾರ್ಡ್ಮಾಡಿಲ್ಲಿಇಟ್ಟುಕೊಳ್ಳದೆ. ಎಸ್.ಓ.ಪಿನಿಯಮಗಳನ್ನು ಹಾಗೂಮೇಲಾಧಿಕಾರಿಗಳಸೂಚನೆಯನ್ನು ಉಲ್ಲಂಘನೆ	17-03-2025	ಶ್ರೀ ರವಿಕುಮಾರ್.ಎನ್.ಸಿ,ಪಿಎಸ್ಐ ದಿ:28-04-2025 ಕೃಷ್ಣ ಕುಮಾರ್ ಮಾನಪ್ಪ ಚೌವಾಣ, ಹೆಚ್ಸಿ-12980, ದಿ:13-05-2025	ಶ್ರೀ ರವಿಕುಮಾರ್.ಎನ್.ಸಿ,ಪಿಎಸ್ಐ ರವರ ವಿರುದ್ದ ಆರೋಪ ಸಾಬೀತಾಗಿರುವುದಿಲ್ಲ (ಮುಕ್ತಾಯಗೊಳಿಸಲಾಗಿರುತ್ತದೆ. ಹೆಚ್.ಸಿ ರವರ ವಿರುದ್ದ ಆರೋಪ ಸಾಬೀತಾಗಿರುತ್ತದೆ.	ಕೃಷ್ಣ ಕುಮಾರ್ ಮಾನಪ್ಪ ಚೌವಾಣ, ಹೆಚ್ಸಿ-12980, ರವರ ವಿರುದ್ದ ಇಲಾಖಾ ವಿಚಾರಣೆಗೆ ಆದೇಶಿಸಿದ್ದು, ಈ ಕಛೇರಿಯಿಂದ ಅಂತಿಮ ಆದೇಶವನ್ನು ಹೊರಡಿಸಬೇಕಾಗಿರುತ್ತದೆ	---	ಹೆಚ್ಸಿ-12980, ರವರ ಇಲಾಖಾ ವಿಚಾರಣೆಯ ವರದಿಯನ್ನು ಪಡೆದಿದ್ದು, , ಈ ಕಛೇರಿಯಿಂದ ಅಂತಿಮ ಆದೇಶವನ್ನು ಹೊರಡಿಸಬೇಕಾಗಿರುತ್ತದೆ

ಕರ್ತವ್ಯ ಲೋಪ ಮತ್ತು ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಅಮಾನತ್ತುಗೊಂಡವರ ಮಾಹಿತಿ

ಕ್ರ.ಸಂ	ಆಪಾದಿತ ಪೊಲೀಸ್ ಅಧಿಕಾರಿ / ಸಿಬ್ಬಂದಿಯವರ ಹೆಸರು & ಹುದ್ದೆ	ಆರೋಪದ ವಿವರ	ಕರ್ತವ್ಯಲೋಪದಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ: (ಲೋಕಾಯುಕ್ತ & ಕ್ರಿಮಿನಲ್ ಪ್ರಕರಣಗಳನ್ನು ಹೊರತುಪಡಿಸಿ)	ಅಮನತ್ತು ಬಿಡುಗಡೆ ದಿನಾಂಕ	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ಮಾಹಿತಿ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಿಲ್ಲಿ ಶಿಕ್ಷೆಯ ವಿವರ ಪ್ರಸ್ತುತ ಹಂತ	ಪ್ರಸ್ತುತ ಹಂತ
1.	ಶ್ರೀ.ಯದುಕುಮಾರ್, ಹೆಚ್.ಸಿ-7705 ರಾಜರಾಜೇಶ್ವರಿನಗರ ನಗರ ಪೊಲೀಸ್ ಠಾಣೆ	ಪ್ರಕರಣದ ತನಿಖಾಧಿಕಾರಿಯವರಿಂದ ಪೊಲೀಸ್ ಐಟಿ ತಂತ್ರಾಂಶದ ಯೂಸರ್ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ಗಳನ್ನು ಪಡೆದುಕೊಂಡು, ತನಿಖಾಧಿಕಾರಿಯವರ ಗಮನಕ್ಕೆ ತರದೇ, ತನಿಖಾಧಿಕಾರಿಯವರಿಂದ ಎಲ್ಲಾ ವಿಚಾರಗಳನ್ನೂ ಮರೆಮಾಚಿ, ಪೂರ್ವಯೋಜಿತವಾಗಿ ಲಾಭ ಪಡೆಯುವ ದುರುದ್ದೇಶದಿಂದ ಆರೋಪಿಗಳನ್ನು ವಿಚಾರಣೆ ಮಾಡದೇ ಇದ್ದರೂ ಸಹ ಹಾಗೂ ಪ್ರಕರಣದಲ್ಲಿ ತನಿಖಾ ಪ್ರಕ್ರಿಯೆಗಳನ್ನು ನಿಯಮಾನುಸಾರ ಪೂರ್ಣಗೊಳಿಸದೇ, ದೋಷಾರೋಪಣಾ ಪಟ್ಟಿಯನ್ನು ಸಿದ್ಧಪಡಿಸಿ ತನಿಖಾಧಿಕಾರಿಗಳು ಸಹಿ ಮಾಡದೇ ಇರುವ ದೋಷಾರೋಪಣಾ ಪಟ್ಟಿಯನ್ನು ಪೊಲೀಸ್ ಐ.ಟಿ.ತಂತ್ರಾಂಶದಲ್ಲಿ ನಮೂದಿಸಿ ಸಬ್‌ಮಿಟ್ ಮಾಡಿ, ಕರ್ತವ್ಯದಲ್ಲಿ ತೀವ್ರತರವಾದ ಅಧಿಕಾರ ದುರುಪಯೋಗ, ಕರ್ತವ್ಯ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ , ನಿರ್ಲಕ್ಷತೆ, ಪ್ರದರ್ಶಿಸಿರುವ ಸಂಬಂಧ.	03/ಡಿ.ಇ/ಆರ್-6/ಡಿಸಿಪಿ.ಪ/2024,ದಿ: 30.03.2024	30.12.2024	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗುವಂತೆ ಮೂರು (03) ವರ್ಷ ಕಾಲ" ಮುಂದೂಡಿದೆ ಹಾಗೂ ಅಮಾನತ್ತಿನಲ್ಲಿ ಕಳೆದ ಅವಧಿ ಅಮಾನತ್ತೆಂದೇ ಪರಿಗಣಿಸಿ, ಅಮಾನತ್ತಿನಲ್ಲಿ ಪಡೆದಿರುವ ಜೀವನಾಧಾರ ಭತ್ಯೆಗೆ ಸೀಮಿತಗೊಳಿಸಿದೆ	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗುವಂತೆ ಮೂರು (03) ವರ್ಷ ಕಾಲ" ಮುಂದೂಡಿದೆ ಹಾಗೂ ಅಮಾನತ್ತಿನಲ್ಲಿ ಕಳೆದ ಅವಧಿ ಅಮಾನತ್ತೆಂದೇ ಪರಿಗಣಿಸಿ, ಅಮಾನತ್ತಿನಲ್ಲಿ ಪಡೆದಿರುವ ಜೀವನಾಧಾರ ಭತ್ಯೆಗೆ ಸೀಮಿತಗೊಳಿಸಿದೆ	-	ಮುಕ್ತಾಯಗೊಂಡಿದೆ

2.	ಶ್ರೀ, ವಿಜಯ್ ಕುಮಾರ್ ಹೆಚ್.ಸಿ. 9950, ಚಂದ್ರಲೇಔಟ್ ಪೊಲೀಸ್ ಠಾಣೆ	ಇಲಾಖೆಯ ಉನ್ನತ ಅಧಿಕಾರಿಗಳಿಗೆ ದೂರವಾಣಿ ಕರೆಮಾಡಿ ಅಗೌರವಯುತವಾಗಿ ಅನವಶ್ಯಕ ವಿಷಯಗಳ ಕುರಿತು ಮಾತನಾಡಿದ್ದು, ಯಾವುದೇ ಪೂರ್ವಾನುಮತಿಯನ್ನು ಪಡೆಯದೆ ಗೈರು ಹಾಜರಿ ಮುಂದುವರೆಸಿ ಕರ್ತವ್ಯದಲ್ಲಿ ತೀವ್ರತರವಾದ ಅಧಿಕಾರ ದುರುಪಯೋಗ, ಕರ್ತವ್ಯ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ , ನಿರ್ಲಕ್ಷತೆ, ಪ್ರದರ್ಶಿಸಿರುವ ಸಂಬಂಧ.	05/ಡಿ.ಇ/ಆರ್-6/ಡಿಸಿಪಿ.ಪ/2024,	24.12.2024	ದಿನಾಂಕ: 14.01.2026 ರಂದು ಸೇವೆಯಿಂದ ತೆಗೆದು ಹಾಕಲಾಗಿರುತ್ತದೆ.	ದಿನಾಂಕ: 14.01.2026 ರಂದು ಸೇವೆಯಿಂದ ತೆಗೆದು ಹಾಕಲಾಗಿರುತ್ತದೆ.	-	ಮುಕ್ತಾಯಗೊಂಡಿದೆ
3.	ಶ್ರೀ. ಶ್ರೀಧರ್ ಮಲಕೋಜಿ, ಪಿಸಿ-17946, ಕಲಾಸಿಪಾಳ್ಯ ಪೊಲೀಸ್ ಠಾಣೆ	ದಿ:03/04/2024ರಂದು ಯಾವುದೇ ಮಾಹಿತಿ ನೀಡದೆ, ಮೇಲಧಿಕಾರಿಗಳಿಂದ ಅನುಮತಿಯನ್ನು ಪಡೆದುಕೊಳ್ಳದೇ ಉದ್ದೇಶಪೂರ್ವಕವಾಗಿ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ, ಉದಾಸೀನತೆ ಮತ್ತು ಬೇಜವಾಬ್ದಾರಿತನ ತೋರಿರುವ ಬಗ್ಗೆ.,	07/ಡಿ.ಇ/ಆರ್-6/ಡಿಸಿಪಿ.ಪ/2024,ದಿ: 08.05.2024	12.12.2024	34 ದಿನಗಳ ಗೈರುಹಾಜರಿ ದಿನಗಳನ್ನು ವೇತನ ರಹಿತ ರಜೆ ಎಂದು ಪರಿಗಣಿಸಿದೆ. ಮತ್ತು 244 ದಿನಗಳು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದು ಪರಿಗಣಿಸಲಾಗಿದೆ	34 ದಿನಗಳ ಗೈರುಹಾಜರಿ ದಿನಗಳನ್ನು ವೇತನ ರಹಿತ ರಜೆ ಎಂದು ಪರಿಗಣಿಸಿದೆ. ಮತ್ತು 244 ದಿನಗಳು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದು ಪರಿಗಣಿಸಲಾಗಿದೆ	-	ಮುಕ್ತಾಯಗೊಂಡಿದೆ
4.	ಶ್ರೀ.ಮಂಜುನಾಥ್, ಎಂ. ಎ.ಎಸ್.ಐ, ಸಿಟಿ ಮಾರ್ಕೆಟ್ ಪೊಲೀಸ್ ಠಾಣೆ	ಹೊಯ್ಸಳ ಗಸ್ತು ವಾಹನದ ಉಸ್ತುವಾರಿ ಅಧಿಕಾರಿಯವರಿಗೆ ಪೊಲೀಸ್ ಮುಖ್ಯ ಕಛೇರಿಯ ವಾಹನಗಳ ಪ್ರಮಾಣೀಕೃತ ಕಾರ್ಯಾಚರಣೆಯ ವಿಧಾನ ಸ್ಥಾಯಿ ಆದೇಶ ಸಂಖ್ಯೆ 01 ಮತ್ತು 02 ರಲ್ಲಿ ನಮೂದಿಸಿರುವ ಸೂಚನೆಗಳ ಮೇರೆಗೆ ನೀವು ಕರ್ತವ್ಯ ನಿರ್ವಹಿಸಬೇಕಾಗಿದ್ದು, ಆ.ಪೊ.ಅ. ರವರು ಮೇಲಧಿಕಾರಿಗಳ ಸೂಚನೆಗಳನ್ನು ಪಾಲಿಸದೆ ಮತ್ತು ಪೊಲೀಸ್ ಮುಖ್ಯ ಕಛೇರಿಯ ಸ್ಥಾಯಿ ಆದೇಶವನ್ನು ಉಲ್ಲಂಘಿಸಿ, ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ತೋರಿರುವ	08/ಡಿ.ಇ/ಆರ್-6/ಡಿಸಿಪಿ.ಪ/2024,ದಿ: 13.05.2024	-	ವಾಗ್ದಂಡನೆ ವಿಧಿಸಲಾಗಿದೆ	ವಾಗ್ದಂಡನೆ ವಿಧಿಸಲಾಗಿದೆ	-	ಮುಕ್ತಾಯಗೊಂಡಿದೆ

		ಬಗ್ಗೆ.						
5.	ಶ್ರೀ.ಮಂಜುನಾಥ, ಎನ್, ಹೆಚ್.ಸಿ-7185, ಬಸವೇಶ್ವರನಗರ ಪೊಲೀಸ್ ಠಾಣೆ	ತನಿಖಾಧಿಕಾರಿಗಳಿಗೆ ಮಾಹಿತಿ ನೀಡದೆ, ಅರಿವಿಗೆ ಬಾರದಂತೆ ಸಂಗ್ರಹಿಸಿ ಸಿಡಿಆರ್ ಮಾಹಿತಿಯನ್ನು ಮೊಬೈಲ್ ವ್ಯಾಟ್ಸ್‌ಪ್ ಮೂಲಕ ಕಳುಹಿಸಿಕೊಟ್ಟು ತಮ್ಮ ಕರ್ತವ್ಯದಲ್ಲಿ ಲೋಪವೆಸಗಿ, ನಿರ್ಲಕ್ಷತೆ ಮತ್ತು ಅಶಿಸ್ತು ಪ್ರದರ್ಶಿಸಿರುತ್ತಾರೆ.	11/ಡಿ.ಇ/ಆರ್-6/ಡಿಸಿಪಿ.ಪ/2024,ದಿ: 27-06-2024	05-10-2024	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗುವಂತೆ ಒಂದು (01) ವರ್ಷ ಕಾಲ" ಮುಂದೂಡಿದೆ ಹಾಗೂ ಅಮಾನತ್ತಿನಲ್ಲಿ ಕಳೆದ ಅವಧಿ ಅಮಾನತ್ತೆಂದೇ ಪರಿಗಣಿಸಿದೆ	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗುವಂತೆ ಒಂದು (01) ವರ್ಷ ಕಾಲ" ಮುಂದೂಡಿದೆ ಹಾಗೂ ಅಮಾನತ್ತಿನಲ್ಲಿ ಕಳೆದ ಅವಧಿ ಅಮಾನತ್ತೆಂದೇ ಪರಿಗಣಿಸಿದೆ	--	ಮುಕ್ತಾಯವಾಗಿದೆ.
6.	ಶ್ರೀ.ಕೇಶವ, ಟಿ.ಎನ್. ಹೆಚ್.ಸಿ-11604, ಜ್ಞಾನಭಾರತಿ ಪೊಲೀಸ್ ಠಾಣೆ	ಚಂದ್ರಲೇಔಟ್ ಪೊಲೀಸ್ ಠಾಣೆ ಮೊ.ಸಂ.318/2024 ಕಲಂ 143, 144, 147, 148, 506, 427, 120(ಬಿ), 109, 307 ಸಹಿತ 149 ಐಪಿಸಿ ಪ್ರಕರಣದ ಎ-2 ಆರೋಪಿಯಾದ ಪೂರ್ಣೇಶ @ ಪೂರ್ಣ ಈತನೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಈತನು ಆರೋಪಿಯೆಂದು ತಿಳಿದಿದ್ದರೂ ಸಹ ಆರೋಪಿಯು ತಲೆ ಮರೆಸಿಕೊಳ್ಳಲು ಅನುವು ಮಾಡಿಕೊಟ್ಟು, ಅಧಿಕಾರ ದುರುಪಯೋಗಪಡಿಸಿಕೊಂಡು ಕರ್ತವ್ಯದಲ್ಲಿ ಲೋಪವೆಸಗಿರುತ್ತಾರೆ.	19/ಡಿ.ಇ/ಆರ್-6/ಡಿಸಿಪಿ.ಪ/2024,ದಿ: .2024					ವಾಗ್ದಂಡನೆ ವಿಧಿಸಲಾಗಿದೆ
7.	ಶ್ರೀ.ಕುಮಾರ್, ಹೆಚ.ಸಿ-8760 ವಿಜಯನಗರ ಪೊಲೀಸ್ ಠಾಣೆ	ಬ್ಯಾಟರಾಯನಪುರ ಪೊಲೀಸ್ ಠಾಣಾ ಮೊ.ಸಂ. 332/2024 ಕಲಂ 20(ಬಿ) ಎನ್.ಡಿ.ಪಿಎಸ್.ಕಾಯಿದೆ ಮತ್ತು ಮೊ.ಸಂ. 333/2024 ಕಲಂ 20(ಬಿ) ಎನ್.ಡಿ.ಪಿಎಸ್. ಕಾಯಿದೆ ಪ್ರಕರಣಗಳ ಆರೋಪಿಗಳಾದ ಶ್ರೀಮತಿ ಮೆಹರುನ್ನೀಸಾ @ ದೈವುನ್ನೀಸಾ @ ಕಾಳಿ @ ಕಾಳಿ ಪರೀಪ್ ಮತ್ತು ಸದರಿಯವರ ಮಕ್ಕಳಾದ ಚಾಂದ್ ಪಾಷ, ಅಕ್ಬರ್ ಶರೀಪ್, ಸುಲ್ತಾನ್ ಶರೀಪ್, ಮತ್ತು ಸುಲ್ತಾನ್	26/ಡಿ.ಇ/ಆರ್-6/ಡಿಸಿಪಿ.ಪ/2024,ದಿ: 16.12.2024	15.05.2025	ಡಿಸಿಪಿ, ಸಂಚಾರ ಪಶ್ಚಿಮ ರವರು ಸದರಿಯವರ ವಾ.ವೇ ಬಡ್ತಿಯನ್ನು 03 ವರ್ಷಗಳ ಮುಂದಿನ ಬಡ್ತಿಗೆ ಧಕ್ಕೆಯಾಗುವಂತೆ ಮುಂದೂಡಿದೆ.	ಡಿಸಿಪಿ, ಸಂಚಾರ ಪಶ್ಚಿಮ ರವರು ಸದರಿಯವರ ವಾ.ವೇ ಬಡ್ತಿಯನ್ನು 03 ವರ್ಷಗಳ ಮುಂದಿನ ಬಡ್ತಿಗೆ ಧಕ್ಕೆಯಾಗುವಂತೆ ಮುಂದೂಡಿದೆ.	-	ಮುಕ್ತಾಯಗೊಂಡಿದೆ

		ರವರುಗಳೊಂದಿಗೆ ಸಂಪರ್ಕ ಹೊಂದಿ, ತಲೆ ಮರೆಸಿಕೊಳ್ಳಲು ಸಹಕರಿಸಿ, ತಮ್ಮ ಕರ್ತವ್ಯದಲ್ಲಿ ಲೋಪವೆಸಗಿರುವ ಬಗ್ಗೆ.						
8.	ಶ್ರೀ.ಅಣ್ಣಪ್ಪ ಕಿತ್ತೂರ, ಪಿಸಿ-17960 ಜೆ.ಜೆ.ನಗರ ಪೊಲೀಸ್ ಠಾಣೆ	ಬ್ಯಾಟರಾಯನಪುರ ಪೊಲೀಸ್ ಠಾಣಾ ಮೊ.ಸಂ. 332/2024 ಕಲಂ 20(ಬಿ) ಎನ್.ಡಿ.ಪಿಎಸ್.ಕಾಯಿದೆ ಮತ್ತು ಮೊ.ಸಂ. 333/2024 ಕಲಂ 20(ಬಿ) ಎನ್.ಡಿ.ಪಿಎಸ್. ಕಾಯಿದೆ ಪ್ರಕರಣಗಳ ಆರೋಪಿಗಳಾದ ಶ್ರೀಮತಿ ಮೆಹರುನ್ನೀಸಾ @ ದೈವುನ್ನೀಸಾ @ ಕಾಳಿ @ ಕಾಳಿ ಷರೀಪ್ ಮತ್ತು ಸದರಿಯವರ ಮಕ್ಕಳಾದ ಚಾಂದ್ ಪಾಷ, ಅಕ್ಬರ್ ಶರೀಪ್, ಸುಲ್ತಾನ್ ಶರೀಪ್, ಮತ್ತು ಸುಲ್ತಾನ್ ರವರುಗಳೊಂದಿಗೆ ಸಂಪರ್ಕ ಹೊಂದಿ, ತಲೆ ಮರೆಸಿಕೊಳ್ಳಲು ಸಹಕರಿಸಿ, ತಮ್ಮ ಕರ್ತವ್ಯದಲ್ಲಿ ಲೋಪವೆಸಗಿರುವ ಬಗ್ಗೆ.	27/ಡಿ.ಇ/ಆರ್-6/ಡಿಸಿಪಿ.ಪ/2024, ದಿ:16.12 .2024	-	ಡಿಸಿಪಿ, ಸಂಚಾರ ಪಶ್ಚಿಮ ರವರು ಸದರಿಯವರ ವಾ.ವೇ ಬಡ್ತಿಯನ್ನು 03 ವರ್ಷಗಳ ಮುಂದಿನ ಬಡ್ತಿಗೆ ಧಕ್ಕೆಯಾಗುವಂತೆ ಮುಂದೂಡಿದೆ.	ಡಿಸಿಪಿ, ಸಂಚಾರ ಪಶ್ಚಿಮ ರವರು ಸದರಿಯವರ ವಾ.ವೇ ಬಡ್ತಿಯನ್ನು 03 ವರ್ಷಗಳ ಮುಂದಿನ ಬಡ್ತಿಗೆ ಧಕ್ಕೆಯಾಗುವಂತೆ ಮುಂದೂಡಿದೆ.	-	ಮುಕ್ತಾಯಗೊಂಡಿದೆ
9.	ಶ್ರೀ.ಗಂಗಪ್ಪ ಗಿಣ್ಣಿ, ಪಿಸಿ-19490 ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ	ಪಹರೆ ಕರ್ತವ್ಯದ ಸಿಬ್ಬಂದಿಯೊಂದಿಗೆ ಶಾಮೀಲಾಗಿ ಠಾಣಾ ಪಹರೆ ಕರ್ತವ್ಯಕ್ಕೆ ನಿಯೋಜಿಸಿರುವುದನ್ನು ಮರೆ ಮಾಚಿ ಮೇಲಧಿಕಾರಿಗಳಿಗೆ ತಪ್ಪು ಮಾಹಿತಿ ನೀಡಿರುವ ಆರೋಪ	ಆದೇಶ ಸಂಖ್ಯೆ: 05/ಡಿಇ/ಆರ್-6/ಡಿಸಿಪಿ/ಪ/2025 ದಿನಾಂಕ: 08.03.2025	16.04.2025	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗದಂತೆ 03 ತಿಂಗಳ ಕಾಲ ಮುಂದೂಡಿದೆ.	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗದಂತೆ 03 ತಿಂಗಳ ಕಾಲ ಮುಂದೂಡಿದೆ.	--	ಮುಕ್ತಾಯವಾಗಿದೆ.
10.	ಶ್ರೀ.ಸೋಮಶೇಖರ್ ಎ.ಎಸ್.ಐ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ	ಪಹರೆ ಕರ್ತವ್ಯದ ಸಿಬ್ಬಂದಿಯೊಂದಿಗೆ ಶಾಮೀಲಾಗಿ ಠಾಣಾ ಪಹರೆ ಕರ್ತವ್ಯಕ್ಕೆ ನಿಯೋಜಿಸಿರುವುದನ್ನು ಮರೆ ಮಾಚಿ ಮೇಲಧಿಕಾರಿಗಳಿಗೆ ತಪ್ಪು ಮಾಹಿತಿ ನೀಡಿರುವ ಆರೋಪ	ಆದೇಶ ಸಂಖ್ಯೆ: 05/ಡಿಇ/ಆರ್-6/ಡಿಸಿಪಿ/ಪ/2025 ದಿನಾಂಕ: 08.03.2025	16.04.2025	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗದಂತೆ 03 ತಿಂಗಳ ಕಾಲ ಮುಂದೂಡಿದೆ.	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗದಂತೆ 03 ತಿಂಗಳ ಕಾಲ ಮುಂದೂಡಿದೆ.	--	ಮುಕ್ತಾಯವಾಗಿದೆ.

ಡಿಸಿಪಿ ಉತ್ತರ

ನಮೂನೆ-1
ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ವಿವರಗಳು
ದಿನಾಂಕ:01-01-2024 ರಿಂದ 31-12-2024ರವರೆಗೆ

ಕ್ರ. ಸಂ.	ಅಪಾದಿತ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪ ವಿವರ	ಕರ್ತವ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ (ಲೋಕಾಯುಕ್ತ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಹೊರತ್ತು ಪಡಿಸಿ)	ಅಮಾನತ್ತು ಬಿಡುಗಡೆ ದಿನಾಂಕ:	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ/ಪ್ರಸ್ತುತ ಹಂತ	ಪ್ರಸ್ತುತ ಹಂತ
1	2	3	4	5	6	7	8	9

ದಿನಾಂಕ:01-01-2025 ರಿಂದ 31-12-2025ರವರೆಗೆ

1	ದಾದಾಪೀರ್, ಎ.ಎಸ್ಐ., ಮತ್ತು ಮಹಮ್ಮದ್, ಪಿ.ಸಿ.-17171. ಯಶವಂತಪುರ	ಮಾನ್ಯ ನ್ಯಾಯಾಲಯಕ್ಕೆ ಹಿಂದಿರುಗಿಸುವ ಸಮಯದಲ್ಲಿ ಜಾರಿ ಸಂಬಂಧ ಷರಾ ನಮೂದಿಸಿದ್ದು, ಸದರಿ ಷರಾದಲ್ಲಿ ಆದೇಶಿಕೆಯನ್ನು ದೂರವಾಣಿ ಮೂಲಕ ಜಾರಿ ಮಾಡಿರುವ ಬಗ್ಗೆ ನಮೂಸಿದ್ದರೂ ಸಹ ಮೇಲುಸ್ತುವಾರಿ ಅಧಿಕಾರಿಯಾಗಿ ಷರಾ ಪರಿಶೀಲಿಸದೆ ಶ್ರೀ ದಾದಾಪೀರ್ ಬಿ.ಕೆ, ಎಎಸ್ಐ ರವರು ಸಹಿ ಮಾಡಿ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ಮತ್ತು ಬೇಜವಾಬ್ದಾರಿತನವನ್ನು ತೋರಿರುವುದಾಗಿ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.	24-04-2025	15-07-2025	ಸದರಿಯವರು ಈ ಕಛೇರಿ ಆದೇಶದ ವಿರುದ್ದ ಮಾನ್ಯ ಕೆ.ಎಸ್.ಐ.ಟಿ ಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

3	ಮಲ್ಲನಗೌಡ ಪಿ.ಸಿ.19074 ರಾಜಾಜಿನಗರ ಪಿ.ಎಸ್.	ಈ ರೀತಿ ಒಬ್ಬ ಜವಾಬ್ದಾರಿಯುತ ಪೊಲೀಸ್ ಸಿಬ್ಬಂದಿಯಾಗಿದ್ದು ಸಾರ್ವಜನಿಕರೊಂದಿಗೆ ಉತ್ತಮ ರೀತಿಯಲ್ಲಿ ಸ್ಪಂದಿಸದೇ ಸಾರ್ವಜನಿಕವಾಗಿ ಜಗಳ ಮಾಡಿಕೊಂಡು ನಿಮ್ಮ ಕರ್ತವ್ಯದಲ್ಲಿ ಬೇಜವಾಬ್ದಾರಿತನ ಮತ್ತು ಅಶಿಸ್ತಿನಿಂದ ನಡೆದುಕೊಂಡು ತಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ ಮತ್ತು ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ	09-06-2025	25-07-2025	ರುಜುವತ್ತು ಆಗಿರುತ್ತದೆ.	ನಿಯಮ 7ರ ದೋಷಾರೋಪಣಾ ಪತ್ರಕ್ಕೆ ಸಮಜಾಯಿಷಿಯ ಬಗ್ಗೆ ವಿಚಾರಣಾ ವರದಿ ಬಂದಿದ್ದು ಅಂತಿಮ ಆದೇಶಕ್ಕಾಗಿ ಕಡತವನ್ನು ಮಂಡಿಸಿದೆ.

(ದಕ್ಷಿಣ ವಿಭಾಗ, ಬೆಂಗಳೂರು ನಗರ) 2024

	ಆಪಾದಿತ ಪೊಲೀಸ್ ಅಧಿಕಾರಿಯವರ ಹೆಸರು ಮತ್ತು ಹುದ್ದೆ	**ಆರೋಪ**	**ಅಮಾನತ್ತು ಗೊಂಡ ದಿನಾಂಕ**	**ಅಮಾನತ್ತು ಬಿಡುಗಡೆ ದಿನಾಂಕ**	**ರುಜುವಾತಾಗಿದ್ದಲ್ಲಿ ಐಗೊಂಡ ಕ್ರಮ**	**ಲೋಪ ರುಜುವಾತಾಗಿದ್ದಲ್ಲಿ ಮಾಹಿತಿ**	**ಕೈಗೊಂಡ ಕ್ರಮ**	**ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ ಪ್ರಸ್ತುತ ಹಂತ**
1.	ಶ್ರೀಮಹಾದೇವನಾಯ್ಕ, ಹೆಚ್‌ಸಿ 10614, ತಲಘಟ್ಟಪುರಪೊಲೀಸ್ ಠಾಣೆ ಹಾಲಿಕೆಜೆಹಳ್ಳಿಸಂಚಾರಪೊಲೀಸ್ ಠಾಣೆ	ಹಿರಿಯಅಧಿಕಾರಿಗಳಅನುಮತಿಇಲ್ಲದೇಅಥವಾತಲಘಟ್ಟಪುರಪೊಲೀಸ್ ಠಾಣೆಯ ಅಧಿಕಾರಿಗಳಿಗೂಸಹಮಾಹಿತಿನೀಡದೇನೈಜೀರಿಯಾದೇಶದ ಪ್ರಜೆಯನ್ನು ಅಕ್ರಮ ಸಂಪಾದನೆ ಮಾಡುವ ಉದ್ದೇಶದಿಂದಲೇ ಬನ್ನೇರುಘಟ್ಟ ಪೊಲೀಸ್ಠಾಣಾ ವ್ಯಾಪ್ತಿಗೆ ಬಲ ರಾಮ ಹಿಡಿದುಕೊಂಡು ವಿಚಾರಮಾಡಿ ಆತನನ್ನು ಎಂಬವ್ಯಕ್ತಿಯನ್ನು ಕರೆದುಕೊಂಡು ಹೋಗಿ ಅವೇಳೆಯಲ್ಲಿ ಮಾದಕ ದ್ರವ್ಯದ ವಿಚಾರಣೆ ನೆಪದಲ್ಲಿಅಕ್ರಮವಾಗಿತಲಘಟ್ಟಪುರಪೊಲೀಸ್ಠಾಣೆಗೆಕರೆದುಕೊಂಡುಬಂದುಹಿರಿಯಅಧಿಕಾರಿಗಳಿಗೆಒಪ್ಪಿಸಿವರದಿಮಾಡದೇಅದೇದಿನರಾತ್ರಿಅವೇಳೆಯಲ್ಲಿನೈಜೀರಿಯಾದೇಶದಪ್ರಜೆಯನ್ನುನಿರ್ಜನಪ್ರದೇಶದಲ್ಲಿಬಿಟ್ಟುಬಂದುಕರ್ತವ್ಯದಲ್ಲಿ.	13.6.2024	12.8.2024	೨೦೨೫ ರ ಅವಧಿ ನಿಯಮ ೬ ರಡಿಯಲ್ಲಿ ಶಿಸ್ತು ಕ್ರಮ ಜರುಗಿಸಿ	ರುಜುವಾತಾಗಿರುತ್ತದೆ	ಸೇವೆಯಿಂದ ವಜಾಗೊಳಿಸಲಾಗಿದೆ	ಇಲ್ಲಾ
2.	;ಲಕ್ಷ್ಮಣನಾರಾಯಣ ಸಿಪಿಸಿ೧೯೦೨೨	**ದೂರುದಾರರೊಡನೆ ಅಕ್ರಮ ಸಂಬಂಧ ಮಾಡಿ ಮದುವೆ ಆಗುವುದಾಗಿ ನಂಬಿಸಿ ದುರ್ನಡತೆ ಎಸಗಿರುವ ಬಗ್ಗೆ**	12.8.2024	19.11.2024	೨೦೨೪ ರ ಅವಧಿಯಲ್ಲಿ	ರುಜುವಾತಾಗಿರುತ್ತ	ಇವರ ವೇತನವನ್ನು ಪಿಸಿ ವೇತನಶ್ರೇಣಿಯ ಕನಿಷ್ಟ	ಇಲ್ಲಾ

	ತಲಗಟ್ಟಪುರ ಪೊಲೀಸ್ ಠಾಣೆ				ನಿಯಮ ೬ ರಡಿಯಲ್ಲಿ ಶಿಸ್ತು ಕ್ರಮ ಜರುಗಿಸಿ	ದೆ	ಹಂತಕ್ಕೆ ಇಳಿಸಿದೆ	
3.	ಚಿಕ್ಕಂಜನಾಮೂರ್ತಿ. ಹೆಚ್‌ಸಿ ೯೨೪೭ ಮತ್ತು ಶ್ರೀ ಮಂಜುನಾಥ್ ಎಎಸ್‌ಐ ಪುಟ್ಟೇನಹಳ್ಳಿ ಪೊಲೀಸ್ ಠಾಣೆ	ಒಬ್ಬರಿಗೊಬ್ಬರು ಅವಾಚ್ಯ ಶಬ್ದಗಳಿಂದ ನಿಂದಿಸಿ ದುರ್ನಡತೆ ಎಸಗಿರುವು ಬಗ್ಗೆ	18.7.2024	4.10.2024	೨೦೨೪ ರ ಅವಧಿಯಲ್ಲಿ ನಿಯಮ೬ ರಡಿಯಲ್ಲಿ ಶಿಸ್ತು ಕ್ರಮ ಜರುಗಿಸಿ	ರುಜುವಾತಾಗಿರುತ್ತದೆ	ವಾರ್ಷಿಕ ವೇತನ ಬಡ್ತಿಯನ್ನು೩ ತಿಂಗಳು ಕಾಲ ಮುಂದೂಡಿದೆ. ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದು ಪರಿಗಣಿಸಿದೆ	ಇಲ್ಲಾ
4.	ಶ್ರೀಧರ್ ಗುಗರಿ,ಪಿಎಸ್‌ಐ, ರಾಜು ಎಸ್‌ಕೆ. ಎಸ್‌ಐ, ತಿಮ್ಮಣ್ಣ ಪೂಜಾರಿ ಹೆಚ್.ಸಿ ೧೦೯೧೦ ಸುನಿಲ್ ಬಗಲಿ, ಪಿಸಿ ೨೦೩೩೮ ಬನಶಂಕರಿ ಪೊಲೀಸ್ ಠಾಣೆ	ಬನಶಂಕರಿ ಪೊಲೀಸ್ ಠಾಣೆ ಐಲ್ಲಿ ದಾಖಲಾದ ಮೊ ಸಂಖ್ಯೆ:೨೧೮\೨೦೨೪ ಪ್ರಣ ದಾಖಲು ಮಾಡುವ ಮುನ್ನವೇ ಆರೋಪಿಯೊಂದಿಗೆ ಕೃತ್ಯ ನಡೆದ ಸ್ಥಳದಲ್ಲಿ ಹಾಜರಾಗಿರುವ ಮೂಲ ಅಧಿಕಾರ ದುರುಪಯೋಗಪಡಿಸಿಕೊಂಡಿರುವ ಬಗ್ಗೆ.	20.9.2024	21.11.2024	೨೦೨೪ ರ ಅವಧಿಯಲ್ಲಿ ನಿಯಮ೬ ರಡಿಯಲ್ಲಿ ಶಿಸ್ತು ಕ್ರಮ ಜರುಗಿಸಿ	ರುಜುವಾತಾಗಿರುತ್ತದೆ	ರಾಜು ಎಸ್‌ಕೆ. ಎಸ್‌ಐ, ರವರವಾರ್ಷಿಕ ವೇತನ ಬಡ್ತಿಯನ್ನು೧ ತಿಂಗಳು ಕಾಲ ಮುಂದೂಡಿದೆ. ತಿಮ್ಮಣ್ಣ ಪೂಜಾರಿ ಹೆಚ್ .ಸಿ ೧೦೯೧೦ಸುನಿಲ್ ಬಗಲಿ, ಪಿಸಿ ೨೦೩೩೮ ರವರಿಗೆ ವಾಗದಂಡನೆ ವಿಧಿಸಿದೆ. ಶ್ರೀಧರ್ ಗುಗರಿ,ಪಿಎಸ್‌ಐ ಶಿಸ್ತು ಕ್ರಮದಿಂದ ಕೈಬಿಡಲಾಗಿದೆ. ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದು ಪರಿಗಣಿಸಿದೆ	ಇಲ್ಲಾ
5.	ಅಜ್ಜಪ್ಪಭಾವಿ ಹೆಚ್‌ಸಿ ೧೦೯೨೨ ಬಸವನಗುಡಿ ಮಹಿಳಾ ಪೊಲೀಸ್ ಠಾಣೆ	ಠಾಣೆಯಲ್ಲಿನ ಮಹಿಳಾ ಸಿಬ್ಬವಂದಿಗಳೊಂದಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಬಗ್ಗೆ	19.2.2024	8.4.2024	೨೦೨೪ ರ ಅವಧಿಯಲ್ಲಿ ನಿಯಮ ೬ ರಡಿಯಲ್ಲಿ ಶಿಸ್ತು ಕ್ರಮ ಜರುಗಿಸಿ	ರುಜುವಾತಾಗಿರುತ್ತದೆ	ಸೇವೆಯಿಂದ ವಜಾಗೊಳಿಸಲಾಗಿದೆ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದು ಪರಿಗಣಿಸಿದೆ	ಇಲ್ಲಾ

6.	ರವಿ ಕುಮಾರ್ ಬಿರಾದಾರ ಹೆಚ್ ಸಿ 12952 ತಲಘಟ್ಟಪುರ ಪೊಲೀಸ್ ಠಾಣೆ	**ಸರ್ವಾಜನಿಕರಿಗೆ ಕೆ ಪಿ ಅಕ್ಟ 92ರ ಆಡಿಯಲ್ಲಿ ನೋಟಿಸ್ ನೀಡದೇ ಅವರಿಂದ 250ರೂ ಗಳನ್ನು ಪಡೆದಿರುವ ಬಗ್ಗೆ**	17.2.2025	27.32025	೨೦೨೪ ರ ಅವಧಿಯಲ್ಲಿ ನಿಯಮ ೭ರಡಿಯಲ್ಲಿ ಶಿಸ್ತು ಕ್ರಮ ಜರುಗಿಸಿ.	ರುಜುವಾತಾಗಿರುತ್ತದೆ	ವಾರ್ಷಿಕ ವೇತನ ಬಡ್ತಿಯನ್ನು 3 ತಿಂಗಳು ಕಾಲ ಮುಂದೂಡಿದೆ	ಇಲ್ಲಾ
7.	ವಿಜಯ್ ಕುಮಾರ್ ದಂಡಾವತಿ ಹೆಚ್ ಸಿ 11040 ಬನಶಂಕರಿ	**ಬನಶಂಕರಿ ಠಾಣೆಯಲ್ಲಿನ ನ್ಯಾಯಲಾಯದ 960 NBW ಗಳನ್ನು ಸ್ವೀಕರಿಸಿದ್ದು ಜಾರಿ ಮಾಡದೇ ಕರ್ತವ್ಯ ಲೋಪ ಎಸಗಿರುವ ಬಗ್ಗೆ.**	1.32025	20.3.2025	೨೦೨೪ ರ ಅವಧಿಯಲ್ಲಿನಿಯಮ 7 ರಡಿಯಲ್ಲಿ ಶಿಸ್ತು ಕ್ರಮ ಜರುಗಿಸಲಾಗಿರುತ್ತತದೆ	ರುಜುವಾತಾಗಿರುತ್ತದೆ	ವಾಗ್ದಂಡನೆ ವಿಧಿಸಲಾಗಿದೆ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದು ಪರಿಗಣಿಸಿದೆ	ಇಲ್ಲಾ

ಡಿಸಿಪಿ ಕೇಂದ್ರ ವಿಭಾಗ

3.	ಶ್ರೀ. ಮುನಿರಾಜು, ಪಿ.ಸಿ.-13137,	ಮನೆಯ ಕಾಂಪೌಂಡ್ ಗೋಡೆಯ ಮೇಲೆ ಬರೆದಿರುವ ಬರಹವು ಮುಸ್ಲೀಂ ಕೋಮು ಮತ್ತು ಇತರೆ ಕೋಮುಗಳ ನಡುವೆ ಮತೀಯ ಅಸೌಹಾರ್ಧತೆಯನ್ನು ಅಥವಾ ವೈರತ್ವ ದ್ವೇಷ ಅಥವಾ ವೈಮನಸ್ಯದ ಭಾವನೆಗಳನ್ನು ಉಂಟು ಮಾಡುವಂತಹ ಬರಹಗಳಾಗಿರುತ್ತದೆ.	**02.05.2024**	**14.10.2024**	ರುಜುವಾತಾಗಿರುತ್ತದೆ	ಸೇವೆಯಿಂದ ಅಮಾನತ್ತು ಗೊಳಿಸಲಾಗಿರುತ್ತದೆ.	**--**	ಇಲಾಖಾ ವಿಚಾರಣೆ ನಡೆಸಿ ಸದರಿ ರವರ ಆರೋಪಗಳು ಸಾಬೀತಾಗಿರುವುದರಿಂದ ,ಶ್ರೀ. ಮುನಿರಾಜು, ರವರ ''ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ದಕ್ಕೆಯಾಗದಂತೆ 01(ಒಂದು) ವರ್ಷಗಳ ಕಾಲ ಮುಂದೂಡಲಾಗಿದೆ ಹಾಗೂ ಸದರಿ ರವರ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದೆ'' ಎಂದು ಆದೇಶಿಸಲಾಗಿರುತ್ತದೆ.
2025								
7.	ಶ್ರೀ ಮಹೇಶ್, ಪಿ.ಸಿ-18243	ಹೈಗ್ರೌಂಡ್ಸ್ ಪೊಲೀಸ್ ಠಾಣಾ ಪಿ.ಐ. ರವರಿಗೆ ಫೂನ್ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ಏಕವಚನದಲ್ಲಿ ಮಾತನಾಡಿ, ಬೆದರಿಕೆ ಹಾಕಿರುತ್ತಾರೆ	**20.11.2025**	**09.01.2026**	ರುಜುವಾತಾಗಿರುತ್ತದೆ	ಸೇವೆಯಿಂದ ಅಮಾನತ್ತು ಗೊಳಿಸಲಾಗಿರುತ್ತದೆ.	--	ಸದರಿ ರವರ ಆರೋಪಗಳು ಸಾಬೀತಾಗಿರುವುದರಿಂದ ,ಶ್ರೀ ಮಹೇಶ್, ಪಿ.ಸಿ-18243, ರವರ ''ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ದಕ್ಕೆಯಾಗದಂತೆ 01(ಒಂದು) ವರ್ಷಗಳ ಕಾಲ ಮುಂದೂಡಲಾಗಿದೆ ಹಾಗೂ ಸದರಿ ರವರ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದೆ'' ಎಂದು ಆದೇಶಿಸಲಾಗಿರುತ್ತದೆ.

ವೈಟ್‌ಫೀಲ್ಡ್ ವಿಭಾಗ, ನಮೂನೆ-1
(ದಿ:01/01/2024 ರಿಂದ 31/12/2024 ರ ವರೆಗೆ

ಕ್ರ. ಸಂ:	ಆಪಾದಿತ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪದ ವಿವರ	ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ (ಲೋಕಾಯುಕ್ತ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಹೊರತುಪಡಿಸಿ)	ಅಮಾನತ್ತು ಬಿಡುಗಡೆ ದಿನಾಂಕ	ಕರ್ತವ್ಯ ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣದಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣದ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ/ಪ್ರಸ್ತುತ ಹಂತ	ಪ್ರಸ್ತುತ ಹಂತ
01	ಶ್ರೀ ಪ್ರಸಾದ್, ಎ.ಎಸ್.ಐ. ಮತ್ತು ಶ್ರೀ ಬಸಪ್ಪ ಮೇಟಿ, ಸಿ.ಪಿ.ಸಿ.20967	ದಿ:11/02/2024 ರಂದು ರಾತ್ರಿ ಸುಮಾರು 11.00 ಗಂಟೆ ಸಮಯದಲ್ಲಿ ಶ್ರೀ ಸಿದ್ದಯ್ಯ ಹಿರೇಮಠ, ಶ್ರೀ ಶಿವಲಿಂಗ ಸ್ವಾಮಿ ದೇವಸ್ಥಾನದ ಬಳಿ, ಬೆಂಗಳೂರು ರವರ ಬಳಿ ಹೋಗಿ ನೀನು ಮಹಿಳೆಗೆ ಆಶ್ರಯ ನೀಡಿರುತ್ತೀಯಾ. ನಿನ್ನ ಮೇಲೆ ಕೇಸ್ ಮಾಡಿ ಜೈಲಿಗೆ ಹಾಕುವುದಾಗಿ ಬೆದರಿಸಿರುತ್ತಾರೆ.	12/02/2024	22/03/2024	ರುಜುವಾತು ಆಗಿರುತ್ತದೆ.	ದಿ:04/07/2024ರಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಪರಿಣಾಮ ಬೀರದಂತೆ 06 (ಆರು) ತಿಂಗಳು ಮುಂದೂಡಿದ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅರ್ಹ ರಜೆ ಎಂದು ಪರಿಗಣಿಸಿದೆ.	-	-
02	ಶ್ರೀ ನಾರಾಯಣಸ್ವಾಮಿ, ಎ.ಎಸ್.ಐ	ಶ್ರೀ ವಿಶೇಶ್ ಶ್ರೀವತ್ಸಾವ್ ಮತ್ತು ಅವರ ಸ್ನೇಹಿತ ರವರುಗಳು ದಿ:29/08/2024 ರಂದು ಬೆಳಗಿನ ಜಾವ 02.00 ಗಂಟೆ ಸಮಯದಲ್ಲಿ ನಲ್ಲೂರಹಳ್ಳಿಯಲ್ಲಿರುವ ಸನ್‌ರೈಸ್ ಬಾರ್ ಮುಂಭಾಗ ತಮ್ಮ ಕಾರಿನ ಮುಂದೆ ನಿಂತಿರುವಾಗ ಆ.ಪೊ.ಅ. ರವರು ಅಲ್ಲಿಗೆ ಹೋಗಿ ಶ್ರೀ ವಿಶೇಶ್ ಶ್ರೀವತ್ಸಾವ್ ರವರ ಸ್ನೇಹಿತನಿಗೆ ಮಧ್ಯಪಾನ ಮಾಡಿದ್ದೀಯಾ ಎಂದು ಕೆನ್ನೆಗೆ ಹೊಡೆದಿರುತ್ತಾರೆ. ಮಧ್ಯಪಾನ ಮಾಡಿಲ್ಲವೆಂದು ತಿಳಿಸಿದ್ದರೂ ಸಹ ನೀವು ಕೇಳಿರುವುದಿಲ್ಲ. ನಂತರ ರೂ.10,000=00 ಗಳನ್ನು ಕೊಡುವಂತೆ ಬೇಡಿಕೆ ಇಟ್ಟು ಅವರ ಬಳಿ ಇದ್ದ ರೂ.1,000=00 ಗಳನ್ನು ಕೊಟ್ಟ ನಂತರ ಅವರನ್ನು ಅಲ್ಲಿಂದ ಬಿಟ್ಟು ಕಳುಹಿಸಿರುತ್ತಾರೆ.	30/08/2024	19/09/2024	ರುಜುವಾತು ಆಗಿರುವುದಿಲ್ಲ.	ದಿ:14/10/2024 ರಲ್ಲಿ ವಾಗ್ದಂಡನೆ ವಿಧಿಸಿದೆ. ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅರ್ಹ ರಜೆ ಎಂದು ಪರಿಗಣಿಸಿದೆ.	-	-

.

(ದಿ:01/01/2025 ರಿಂದ 15/011/2026 ರ ವರೆಗೆ

ಕ್ರ. ಸಂ:	ಆಪಾದಿತ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪದ ವಿವರ	ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತು ಗೊಳಿಸಿರುವ ದಿನಾಂಕ (ಲೋಕಾಯುಕ್ತ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಹೊರತುಪಡಿಸಿ)	ಅಮಾನತ್ತು ಬಿಡುಗಡೆ ದಿನಾಂಕ	ಕರ್ತವ್ಯ ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣದಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣದ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ/ಪ್ರಸ್ತುತ ಹಂತ	ಪ್ರಸ್ತುತ ಹಂತ
01	ಶ್ರೀ ಬಸವರಾಜ ಸವದತ್ತಿ, ಸಿ.ಪಿ.ಸಿ.22047	ದಿ:10/02/2025 ರಂದು ರಾತ್ರಿ ಕರ್ತವ್ಯದಲ್ಲಿದ್ದಾಗ ಸೈಫ್ ಗಾರ್ಡನ್ ಹತ್ತಿರ ಮಧು ಎಂಬ ಮಹಿಳೆಯೊಂದಿಗೆ ಗಲಾಟೆ ಮಾಡಿಕೊಂಡು ಅಸಭ್ಯವಾಗಿ ವರ್ತಿಸಿರುತ್ತಾರೆ.	11/03/2025	31/03/2025	ರುಜುವಾತು ಆಗಿರುತ್ತದೆ.	ದಿ:13/05/2025 ರಲ್ಲಿ ವಾರ್ಷಿಕ ವೇತನ ಬಡ್ತಿಯನ್ನು 06 (ಆರು) ತಿಂಗಳು ಮುಂದೂಡಿದೆ ಹಾಗೂ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದೆ.	-	-
02	ಶ್ರೀ ಸಂತೋಷ್ ಕೆ, ಪಿ.ಎಸ್.ಐ.,	ಶ್ರೀ ಶಿವಕುಮಾರ್ ಕೆ ರವರ ಮಗಳು ಅಕ್ಷಯಾ ಶಿವಕುಮಾರ್, 34 ವರ್ಷ ರವರು ದಿ:18/09/2025 ರಂದು ಮನೆಯಲ್ಲಿಯೇ ಬ್ರೇನ್ ಹೆಮರೇಜ್‌ನಿಂದ ಮೃತಪಟ್ಟಿರುತ್ತಾರೆ. ಈ ಬಗ್ಗೆ ದಿ:19/10/2025 ರಂದು ಬೆಳಿಗ್ಗೆ ತಮ್ಮ ಸಂಬಂಧಿ ಸುಂದರೇಶನ್ ಎಂಬುವರ ಜೊತೆ ಬೆಳ್ಳಂದೂರು ಪೊಲೀಸ್ ಠಾಣೆಗೆ ದೂರು ನೀಡಲು ಹೋದಾಗ ಬೆಳ್ಳಂದೂರು ಪೊಲೀಸ್ ಠಾಣೆಯ ಯು.ಡಿ.ಆರ್. ನಂ:75/2025, ಕಲಂ.194 ಬಿ.ಎನ್.ಎಸ್.ಎಸ್. ಪ್ರಕರಣ ದಾಖಲಿಸಿತ್ತಾರೆ. ನೊಂದ ದೂರುದಾರರೊಂದಿಗೆ ಸೌಜನ್ಯತೆಯಿಂದ ನಡೆದುಕೊಳ್ಳದೇ ಅನುಚಿತವಾಗಿ	30/10/2025	19/11/2025	ರುಜುವಾತು ಆಗಿರುವುದಿಲ್ಲ.	ದಿ:31/12/2025ರ ಆದೇಶದಲ್ಲಿ **"ವಾಗ್ದಂಡನೆ"** ವಿಧಿಸಿದೆ ಹಾಗೂ ಅಮಾನತ್ತಿನಲ್ಲಿ ಕಳೆದ ಅವಧಿ ದಿ:30/10/2025 ರಿಂದ 19/11/2025 ರ ವರೆಗೆ 20 ದಿನಗಳು ಪರಿವರ್ತಿತ ರಜೆ ಎಂದು ಪರಿಗಣಿಸಿದೆ.	-	-

		ವರ್ತಿಸಿರುತ್ತಾರೆ.						
03	ಶ್ರೀ ಸಂಜಯ್ ರಾಥೋಡ್, ಸಿ.ಪಿ.ಸಿ.17875, ಶ್ರೀ ಸಂತೋಷ್ ಕುದುರೆ, ಸಿ.ಪಿ.ಸಿ.16139, ಕು. ಅರ್ಚನಾ, ಮ.ಪಿ.ಸಿ.22702,	ಶ್ರೀಮತಿ ಪ್ರಿಯಾಂಕಾ ಜಮ್ಮಾಲ್ ರವರು ಮನೆ ಕೆಲಸದಾಕೆ ಶ್ರೀಮತಿ ಸುಂದರಿ ಬೀಬಿ ರವರು ವಜ್ರದ ಉಂಗುರು ಕಳುವಾಗಿದೆ ಎಂದು ದೂರು ನೀಡಿದ್ದು, ಈ ಬಗ್ಗೆ ವರ್ತೂರು ಪೊಲೀಸ್ ಠಾಣೆಯಲ್ಲಿ ಎನ್.ಸಿ. ನಂ:637/2025 ದೂರ ದಾಖಲಾಗಿದ್ದು, ಶ್ರೀಮತಿ ಸುಂದರಿ ಬೀಬಿ ರವರನ್ನು ವಿಚಾರಣೆ ನೆಪದಲ್ಲಿ ಅಮಾನುಷವಾಗಿ ಹಲ್ಲೆ ಮಾಡಿರುವ ಬಗ್ಗೆ	04/11/2025	05/12/2025	ರುಜುವಾತು ಆಗಿರುವುದಿಲ್ಲ.	ದಿ:31/12/2025ರ ಆದೇಶದಲ್ಲಿ **"ವಾಗ್ದಂಡನೆ"** ವಿಧಿಸಿದೆ ಹಾಗೂ ಅಮಾನತ್ತಿನಲ್ಲಿ ಕಳೆದ ಅವಧಿ ದಿ:30/10/2025 ರಿಂದ 19/11/2025 ರ ವರೆಗೆ 20 ದಿನಗಳು ಪರಿವರ್ತಿತ ರಜೆ ಎಂದು ಪರಿಗಣಿಸಿದೆ.	-	-

ಡಿಸಿಪಿ ಈಶಾನ್ಯ ವಿಭಾಗ
ನಮೂನೆ-1
ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ವಿವರಗಳು
ದಿನಾಂಕ:01-01-2024 ರಿಂದ 15-01-2026 ರವರೆಗೆ

ಕ್ರ. ಸಂ.	ಅಪಾದಿತ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪ ವಿವರ	ಕರ್ತವ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ (ಲೋಕಾಯುಕ್ತ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಹೊರತ್ತು ಪಡಿಸಿ)	ಅಮಾನತ್ತು ಬಿಡುಗಡೆ ದಿನಾಂಕ:	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ/ಪ್ರಸ್ತುತ ಹಂತ	ಪ್ರಸ್ತುತ ಹಂತ
1	2	3	4	5	6	7	8	9
01	ಶ್ರೀ. ಜಾವಿದ್ ಮಿಯಾ, ಹೆಚ್‌ಸಿ-10685, ಹಾಗೂ ಶ್ರೀ. ಈಶ್ವರಪ್ಪ, ಪಿಸಿ-20609, ಸಂಪಿಗೆಹಳ್ಳಿ	ರಾತ್ರಿ ಸಮಯದಲ್ಲಿ ಒಡಾಡುತ್ತಿದ್ದ ಸೌಮ್ಯಜಿತ್ ದಾಸಗುಪ್ತ ಮತ್ತು ಅರ್ಜಿತ್ ಕುಮಾರ ಎಂಬ ಯವಕರನ್ನು ತಡೆದು ಪ್ರಶ್ನಿಸಿ ಈ ಸಮಯದಲ್ಲಿ ಒಡಾಡಬಾರದು ಎಂದು ಪೊಲೀಸ್ ವಾಹನ ಕರೆಯಿಸಿ ಕ್ರಮ ಜರುಗಿಸುತ್ತೇವೆ ಎಂದು ಬೆದರಿಸಿ 8310388606 ಗೆ 600 ರೂಗಳನ್ನು ವರ್ಗಾಹಿಸಿಕೊಂಡಿರುತ್ತಾರೆ. ಎಂಬ ಆರೋಪ	02.01.2024	09.07.2024	ರುಜುವಾತ್ತು ಆಗಿರುತ್ತದೆ.	ಸದರಿಯವರ ವಾ.ವೇ.ಬಡ್ತಿಯನ್ನು 02 ವರ್ಷಗಳ ಕಾಲ ಮುಂದಿನ ವಾ.ವೇ.ಬಡ್ತಿಗೆ ಧಕ್ಕೆಯಾಗುವಂತೆ ಮಂದೂಡಿದೆ. ಹಾಗೂ ಅಮಾನತ್ತಿನ ಅವಧಿಯನ್ನು ಅಮಾನತ್ತೇಂದೆ ಪರಿಗಣಿಸಿದೆ.	-	-

ಡಿಸಿಪಿ ಆಗ್ನೇಯ ವಿಭಾಗ
ನಮೂನೆ-1
ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ವಿವರಗಳು
ದಿನಾಂಕ:01-01-2024 ರಿಂದ 31-12-2024ರವರೆಗೆ

ದಿನಾಂಕ:01-01-2025 ರಿಂದ 31-12-2025 ರವರೆಗೆ

ಕ್ರ. ಸಂ.	ಅಪಾದಿತ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪ ವಿವರ	ಕರ್ತವ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ (ಲೋಕಾಯುಕ್ತ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಹೊರತ್ತು ಪಡಿಸಿ)	ಅಮಾನತ್ತು ಬಿಡುಗಡೆ ದಿನಾಂಕ:	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ/ಪ್ರಸ್ತುತ ಹಂತ	ಪ್ರಸ್ತುತ ಹಂತ
1)	ಶ್ರೀ ಮಂಜುನಾಥ ಯು., ಎ.ಎಸ್ .ಐ., ಬೊಮ್ಮನಹಳ್ಳಿ ಪೊಲೀಸ್ ಠಾಣೆ	ದಿನಾಂಕ:13/12/2024 ರಂದು ಹಗಲು ಪಾಳಿಯಲ್ಲಿ ಠಾಣಾ ಎಸ್.ಓ ಕರ್ತವ್ಯದಲ್ಲಿದ್ದ ಶ್ರೀ ಮಂಜುನಾಥ ಯು., ಎಎಸ್ಐ ರವರು ಪಿರ್ಯಾದಿ ಶ್ರೀಮತಿ ಅನಿತಾ ಕೋಂ ಲೇಟ್ ಬಸವರಾಜ, ಹೇಳಿದಂತೆ ವಿವರವಾಗಿ ದೂರು ಪಡೆದು, ಪಿಐ/ಪಿಎಸ್ಐ ರವರಿಗೆ ಮಾಹಿತಿ ನೀಡಿ, ಸಂಜ್ಞೇಯ ಪ್ರಕರಣ ದಾಖಲಿಸದೇ, ತಮಗೆ ತೋಚಿದಂತೆ ಖುದ್ದಾಗಿ/ಇತರೆ ಸಿಬ್ಬಂದಿಗಳಿಂದ ದೂರನ್ನು ಬರೆದು, ಪಿರ್ಯಾದಿಯಿಂದ ಸಹಿ ಮಾಡಿಕೊಂಡು ನೈಜ ಅಪರಾಧ ಕೃತ್ಯವನ್ನು ಮುಚ್ಚಿಹಾಕುವ ಪ್ರಯತ್ನ ಮಾಡಿರುವುದು ಕಂಡುಬಂದಿರತ್ತದೆ.	21/02/2025	30/05/2025	ರುಜುವಾತು ಆಗಿರುವುದಿಲ್ಲ	ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿಯೆಂದು ಆದೇಶಿಸಿದೆ.	-	ಮುಕ್ತಾಯಗೊಂಡಿರುತ್ತದೆ.

ಡಿಸಿಪಿ ಸಂಚಾರ ಪೂರ್ವ ವಿಭಾಗ

ನಮೂನೆ-1

ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ವಿವರಗಳು

ಕ್ರಮ ಸಂ ಖ್ಯೆ	ಆಪಾದಿತ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪ ವಿವರ	ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ	ಅಮಾನತ್ತು ಬಿಡುಗಡೆ ದಿನಾಂಕ	ಲೋಪ ರುಜುವಾತು ಅಗಿದ್ದಲಿ ಮಾಹಿತಿ	ರುಜುವಾತು ಅಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕೆಯ ವಿವರ/ಪ್ರಸ್ತುತ ಹಂತ	ಪ್ರಸ್ತುತ ಹಂತ
1	ಶ್ರೀ ವಿನಯ್ ಕುಮಾರ್ ಎನ್	ಡಿಇ ಶಾಖೆಯ ವಿಷಯ ನಿರ್ವಾಹಕರಾಗಿದ್ದಾಗ ಹಿರಿಯ ಅಧಿಕಾರಿಗಳ ಅದೇಶವನ್ನು ಮಾರ್ಪಾಡು ಮಾಡಿರುವ ಬಗ್ಗೆ	16.08.2024	21.02.2025	ಎ.ಸಿ.ಪಿ ಸಂಚಾರ & ಯೋಜನೆ ರವರ ವಿಚಾರಣಾ ವರದಿಯಲ್ಲಿ ಆರೋಪ ರುಜುವಾಗಿರುತ್ತದೆ.	ಆದೇಶ ಸಂ:5/ಸಿಬ್ಬಂದಿ-2/ಆರ್-11/ಡಿಇ/ಡಿಸಿಪಿ/ಸಂಪೂ/2024, ದಿ:29.03.2025 ರಲ್ಲಿ ಸೇವೆಯಿಂದ ವಜಾಗೊಳಿಸಲಾಗಿದೆ	-	ಮುಕ್ತಾಯಗೊಂಡಿರುತ್ತದೆ.

ಸಂಚಾರ ಪಶ್ಚಿಮ ವಿಭಾಗ

ನಮೂನೆ-1

ಕ್ರ.ಸಂ	ಆಪಾದಿತ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪದ ವಿವರ	ಕರ್ತವ್ಯ ಲೋಪದಡಿಯಲ್ಲಿ ಅಮಾನತುಗೊಳಿಸಿರುವ ದಿನಾಂಕ: (ಲೋಕಾಯುಕ್ತ & ಕ್ರಿಮಿನಲ್ ಪ್ರಕರಣಗಳನ್ನು ಹೊರತುಪಡಿಸಿ)	ಅಮಾನತು ಬಿಡುಗಡೆ ದಿನಾಂಕ:	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ ಪ್ರಸ್ತುತ ಹಂತ	ಪ್ರಸ್ತುತ ಹಂತ
1.	ವಸಂತಕುಮಾರ್, ಹೆಚ್.ಸಿ.10272, ಸಿಟಿ ಮಾರ್ಕೆಟ್ ಸಂಚಾರ	ವಾಹನ ಸವಾರರಿಂದ ಅಕ್ರಮವಾಗಿ ಹಣ ವಸೂಲು ಮಾಡುತ್ತಿದ್ದ ಬಗ್ಗೆ.	10.06.2024	02.09.2024		ಇವರ ವಾ.ವೇ.ಬಡ್ತಿಯನ್ನು ಮುಂ.ವಾ.ವೇ ಬಡ್ತಿಗೆ ಧಕ್ಕೆಯಾಗುವಂತೆ 03 ವರ್ಷ ಮುಂದೂಡಿ, ಇವರ ಅಮಾನತ್ತಿನ ಅವಧಿ ದಿ:10.06.2024 ರಿಂದ 02.09.2024ರ ವರೆಗಿನ ಅವಧಿಯನ್ನು ಅಮಾನತ್ತಿನ ಅವಧಿ ಎಂದು ಪರಿಗಣಿಸಿದೆ.	-	ಮುಕ್ತಾಯ
2.	ನಾಗೇಶ್‌ರಾವ್, ಎ.ಎಸ್.ಐ	ಇವರು ಈ ಹಿಂದೆ ವಿಜಯನಗರ ಸಂಚಾರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಠಾಣಾಧಿಕಾರಿಯವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ ಆರೋಪಕ್ಕಾಗಿ.	27.09.2024	05.12.2024		ಇವರ ವಿರುದ್ಧ ನಿಯಮ-7 ರಡಿಯಲ್ಲಿ ಕ್ರಮಕ್ಕೆಗೊಂಡು "ವಾಗ್ದಂಡನೆ" ವಿಧಿಸಿ ಅಮಾನತ್ತಿನ ಅವಧಿ ದಿ:27.09.2024 ರಿಂದ 05.12.2024ರ ವರೆಗಿನ 70 ದಿನಗಳನ್ನು ಅಮಾನತ್ತೆಂದು ಪರಿಗಣಿಸಿದೆ.	-	ಮುಕ್ತಾಯ

ಸಂಚಾರ ಉತ್ತರ ವಿಭಾಗ

ನಮೂನೆ-1

(ದಿ:01.01.2024 ರಿಂದ 31.12.2024ವರೆಗೆ)

ಕ್ರ. ಸಂ.	ಆಪಾಧಿತ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪ ವಿವರ	ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ (ಲೋಕಾಯುಕ್ತ & ಕ್ರಿಮಿನಲ್ ಪ್ರಕರಣಗಳನ್ನು ಹೊರತು ಪಡಿಸಿ	ಅಮಾನತ್ತು ಬಿಡುಗಡೆ ದಿನಾಂಕ	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವಪ್ರಕರಣಗಳಲ್ಲಿ ಕೈಗೊಂಡಿರುವ ಕ್ರಮದ ವಿವರ	ಕ್ರಿಮಿನಲ್ ಪ್ರಕರಣದಲ್ಲಿ ದಾಖಲಾಗಿದ್ದಲ್ಲಿ ಶಿಕ್ಷೆ ವಿವರ/ಪ್ರಸ್ತುತ ಹಂತ	ಪ್ರಸ್ತುತ ಹಂತ
1	ಮಿಥನ್, ಪಿಸಿ 18484	ಪಿಐ ರವರಿಗೆ ಏಕವಚನದಲ್ಲಿ ಮಾತನಾಡಿರುವ ಬಗ್ಗೆ	02.07.2024	14.08.2024	ರುಜುವತ್ತಾಗಿರುತ್ತದೆ.	1 ವಾಷಿಕ ವೇತನ ಬಡ್ತಿಯನ್ನು ಮುಂದಿನ ವಾಷಿಕ ವೇತನ್ ಬಡ್ತಿಗಳಿಗೆ ಧಕ್ಕೆಯಾಗದಂತೆ ಮೂಂಡೂಡಲಾಗಿದೆ. ಇವರ ಅಮಾನತ್ತಿನ ಅವಧಿಯನ್ನು ಅಮಾನತ್ತೇಂದು ಪರಿಗಣಿಸಿದೆ. ಮುಂದಿನ ದಿನಗಳಲ್ಲಿ ಶಸ್ತ್ರ, ಮತು ಮದ್ದು ಗುಂಡುಗಳ ಸಂಬಂಧಿಸಿದ ಕರ್ತವ್ಯಗಳಿಗೆ ನಿಯೋಜಿಸುವುದು ಸೂಕ್ತಬವಾಗಿರುವುದಿಲ್ಲ.	-	-

ಡಿಸಿಪಿ ಸಂಚಾರ ದಕ್ಷಿಣ ವಿಭಾಗ
ನಮೂನೆ-1

ಕ್ರಮ ಸಂಖ್ಯೆ	ಅಪಾದಿತ ಪೊಲೀಸ್ ಅಧಿಕಾರಿ/ಸಿಬ್ಬಂದಿಯ ಹೆಸರಿ	ಆರೋಪ ವಿವರ	ಕರ್ತವ್ಯ ಲೋಪದಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ	ಅಮಾನತ್ತು ಬಿಡುಗಡೆ ದಿನಾಂಕ	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ/ಪ್ರಸುತ ಹಂತ	ಪ್ರಸ್ತುತ ಹಂತ
01	ಶಿವಕುಮಾರ್ ಹೆಚ್.ಸಿ-11454 ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆ (ಈ ಹಿಂದೆ ವಿ.ವಿ.ಪುರಂ ಸಂಚಾರ ಪೊಲೀಸ್ ಠಾಣೆ)	ಮೋಟಾರ್ ಸೈಕಲ್ ಸಂ.ಕೆಎ33-ಇಸಿ-8989ರ ಸವಾರನನ್ನು ತಡೆಗಟ್ಟಿ ಆತನ ಬಳಿ 200/- ಗಳನ್ನು ಪಡೆದುಕೊಂಡಿರುವ ಬಗ್ಗೆ	23-11-23	02-12-24	ರುಜುವಾತು ಆಗಿರುತ್ತದೆ	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗುವಂತೆ ಮೂರು (03) ವರ್ಷಗಳ ಕಾಲ ಮುಂದೂಡಿದೆ. ಹಾಗೂ ಅಮಾನತ್ತಿನ ಅವಧಿ ಅಮಾನತ್ತೆಂದೆ ಪರಿಗಣಿಸಿದೆ.	-	-
02	ಶ್ರೀ. ಭರತೇಶ ಹೆಚ್‌ಸಿ-9008 ಸಿದ್ದಾಪುರ ಪೊಲೀಸ್ ಠಾಣೆ (ಈ ಹಿಂದೆ ಮೈಕೋಲೇಔಟ್ ಸಂಚಾರ ಪೊಲೀಸ್ ಠಾಣೆ)	ಮಪಿಸಿ-22471 ರವರ ಮೊಬೈಲ್ ಫೋನ್‌ಗೆ ಕರೆ ಮಾಡಿ ವಾಕಿಟಾಕಿ ವಿಷಯಕ್ಕೆ ಸಂಬಂಧಿಸಿದಂತೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಬಗ್ಗೆ	13-06-2024	20-09-2024	ರುಜುವಾತು ಆಗಿರುತ್ತದೆ	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗುವಂತೆ ಮೂರು (03) ವರ್ಷಗಳ ಕಾಲ ಮುಂದೂಡಿದೆ. ಅಮಾನತ್ತಿನ ಅವಧಿ ಅಮಾನತ್ತೆಂದೆ ಪರಿಗಣಿಸಿದೆ.	-	-
03	ಶ್ರೀ.ಆನಂದ್.ಕೆ ಹೆಚ್‌ಸಿ-9529 (ಈ ಹಿಂದೆ ಮಡಿವಾಳ ಸಂಚಾರ ಪೊಲೀಸ್ ಠಾಣೆ) ಹಾಲಿ ಮೈಕೋಲೇಔಟ್ ಸಂ. ಪೊಲೀಸ್ ಠಾಣೆ	ಇಲಾಖೆಯ ಸಂಪೂರ್ಣ ಸಮವಸ್ತ್ರ ಧರಿಸದೇ ಸಮವಸ್ತ್ರದ ಮೇಲೆ ಖಾಸಗಿ ಜರ್ಕಿನ್ ಧರಿಸಿ ಸಾರ್ವಜನಿಕರಿಂದ ಕಾನೂನು ಬಾಹಿರವಾಗಿ ಹಣ ವಸೂಲಿ ಮಾಡಿರುವ ಬಗ್ಗೆ	12-08-2024	20-09-2024	ರುಜುವಾತು ಆಗಿರುತ್ತದೆ	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗುವಂತೆ ಎರಡು (02) ವರ್ಷಗಳ ಕಾಲ ಮುಂದೂಡಿದೆ. ಅಮಾನತ್ತಿನ ಅವಧಿ ಅಮಾನತ್ತೆಂದೆ ಪರಿಗಣಿಸಿದೆ	-	-
04	ಶ್ರೀ ಚಂದ್ರೇಗೌಡ ಹೆಚ್.ಸಿ-9484 ವೈಟ್ ಪೀಲ್ಡ್ ಸಂಚಾರ ಪೊಲೀಸ್ ಠಾಣೆ	ಠಾಣಾ ಅಧಿಕೃತ ವಾಟ್ಸಪ್ ಗ್ರೂಪ್ ನಲ್ಲಿ ಜಾತಿಯ ಬಗ್ಗೆ ಮೆಸೇಜ್ ಮಾಡಿ ಠಾಣೆಯ ಸೌಹಾರ್ದಯುತ	13-08-2024	25-09-2024	ರುಜುವಾತು ಆಗಿರುತ್ತದೆ.	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ	-	-

	(ಈ ಹಿಂದೆ ಜಯನಗರ ಸಂಚಾರ ಪೊಲೀಸ್ ಠಾಣೆ)	ವಾತಾವರಣವನ್ನು ಹಾಳು ಮಾಡಲು ಪ್ರಚೋದನೆ ನೀಡಿ ಕರ್ತವ್ಯದಲಿ ದುರ್ನಡತೆ ತೋರಿರುವ ಬಗ್ಗೆ				ಧಕ್ಕೆಯಾಗುವಂತೆ ಎರಡು (02) ವರ್ಷಗಳ ಕಾಲ ಮುಂದೂಡಿದೆ. ಅಮಾನತ್ತಿನ ಅವಧಿ ಅಮಾನತ್ತೆಂದೆ ಪರಿಗಣಿಸಿದೆ		
05	ಶ್ರೀ ಸುಧಾಕರ್ ಪಿಸಿ-18329 ಇಂದಿರಾನಗರ ಪೊಲೀಸ್ ಠಾಣೆ (ಈ ಹಿಂದೆ ಜಯನಗರ ಸಂಚಾರ ಪೊಲೀಸ್ ಠಾಣೆ)	ಡಿಡಿ ಪ್ರಕರಣದಲ್ಲಿ ಒರಿಜನಲ್ ಡಿ ಎಲ್ ಅನ್ನು ಆರ್ ಟಿ ಓ ಕಛೇರಿಗೆ ಕಳುಹಿಸದೆ ಕಲರ್ ಜೆರಾಕ್ಸ್ ಕಳುಹಿಸಿ ಒರಿಜಿನಲ್ ಡಿ ಎಲ್ ಅನ್ನು ಶ್ರೀ ಹಿತೈಷ್ ರವರಿಗೆ ವಾಪಸ್ಸು ಕೊಟ್ಟಿರುವುದಾಗಿ ಕಂಡುಬಂದಿರುತ್ತದೆ	13-08-2024	25-09-2024	ರುಜುವಾತು ಆಗಿರುತ್ತದೆ	ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗುವಂತೆ ಎರಡು (02) ವರ್ಷಗಳ ಕಾಲ ಮುಂದೂಡಿದೆ. ಅಮಾನತ್ತಿನ ಅವಧಿ ಅಮಾನತ್ತೆಂದೆ ಪರಿಗಣಿಸಿದೆ	-	-
06	ಶ್ರೀ ವೆಂಕಟೇಶ್ ಕೆ ಹೆಚ್ - 7593 (ಈ ಹಿಂದೆ ಆಡುಗೋಡಿ ಸಂಚಾರ ಪೊಲೀಸ್ ಠಾಣೆ) ಹಾಲಿ ಕೆ.ಜಿ.ನಗರ ಪೊಲೀಸ್ ಠಾಣೆ	ಮದ್ಯ ಸೇವನೆ ಮಾಡಿರುವ ಬಗ್ಗೆ ಅನುಮಾನ ಬಂದ ಮೇರೆಗೆ ಅವರನ್ನುಠಾಣೆಯಲ್ಲಿದ್ದ ಮದ್ಯಪಾನ ತಪಾಸಣೆ ಯಂತ್ರದ ಮೂಲಕ ತಪಾಸಣೆ ಮಾಡಲಾಗಿ 163mg/100ml ಫಲಿತಾಂಶ ಬಂದಿದ್ದು ಮದ್ಯಪಾನ ಮಾಡಿರುವ ಬಗ್ಗೆ	13-08-2024	07-11-2024	ರುಜುವಾತು ಆಗಿರುತ್ತದೆ	ವಾರ್ಷಿಕ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗುವಂತೆ ಎರಡು (02) ವರ್ಷಗಳ ಕಾಲ ಮುಂದೂಡಿದೆ. ಅಮಾನತ್ತಿನ ಅವಧಿ ಅಮಾನತ್ತೆಂದೆ ಪರಿಗಣಿಸಿದೆ	-	-
07	ಶ್ರೀ ಅಣ್ಣಪ್ಪ ನಾಯಕ್ ಎನ್ ಹೆಚ್.ಸಿ-12847 ಬೆಳ್ಳಂದೂರು ಸಂಚಾರ ಹಾಲಿ ಬಂಡೇಪಾಳ್ಯ ಪಿ.ಎಸ್	ಮೈಸೂರು ಬಂದೋಬಸ್ತ್ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದಾಗಿ ಯಾವುದೇ ಮಾಹಿತಿ ನೀಡದೆ ಕರ್ತವ್ಯಕ್ಕೆ ವರದಿ ಮಾಡದೇ ಅನಧೀಕೃತ ಗೈರುಹಾಜರಲ್ಲಿಯೇ ಮುಂದುವರೆದಿರುವುದು ಕಂಡುಬಂದಿರುತ್ತದೆ.	23-10-2024	05-01-2025	ರುಜುವಾತು ಆಗಿರುತ್ತದೆ	ಅಂತಿಮ ಆದೇಶ ಬಾಕಿ ಇದೆ	-	311ನೋಟಿಸ್ ನೀಡಿದೆ
2025								
08	ಶ್ರೀ ಕೆಂಪರಾಜು ಟಿ ಹೆಚ್‌ಸಿ-8710 ತಲ್ಲಘಟ್ಟಪುರ ಸಂಚಾರ ಹಾಲಿ ಹಲಸೂರು ಸಂಚಾರ ಪಿ.ಎಸ್	ಪೊಲೀಸ್ ಠಾಣೆಯ ಅಧಿಕಾರಿಗಳಿಂದ ಸಂಗ್ರಹಿಸಿದ್ದ ದಂಡಶುಲ್ಕದ ನಗದು ಹಣ ವನ್ನು ನಿಗದಿತ ಸಮಯದಲ್ಲಿ ಬ್ಯಾಂಕಿಗೆ ಜಮಾ ಮಾಡದೇ ಇರುವುದು ಕಂಡುಬಂದಿರುತ್ತದೆ	08-04-2025	30-08-2025	ರುಜುವಾತು ಆಗಿರುತ್ತದೆ	ಅಂತಿಮ ಆದೇಶ ಬಾಕಿ ಇದೆ	-	311ನೋಟಿಸ್ ನೀಡಿದೆ
09	ಶ್ರೀ.ಮಹೇಶ ಪಿಸಿ-18243 ಹುಳಿಮಾವು ಸಂಚಾರ	ಎಸ್‌ಓ ಹೆಚ್‌ಸಿ-9922 ಪ್ರಸಾದ್ ರವರಿಗೆ ಹಲವು ಬಾರಿ ಕರೆ ಮಾಡಿ	05-05-2025	10-08-2025	ರುಜುವಾತು ಆಗಿರುತ್ತದೆ	ಅಂತಿಮ ಆದೇಶ ಬಾಕಿ ಇದೆ	-	311ನೋಟಿಸ್ ನೀಡಿದೆ

		ಸೇವಾಪರಿತ್ಯಜನಾ ನೋಟೀಸ್ ನೀಡಿದ್ದು, ಸದರಿ ನೋಟೀಸ್‌ನ್ನು ದಿನಾಂಕ:24-03-2025ರಂದು ಸ್ವೀಕರಿಸಿದರೂ ಸಹ ಕರ್ತವ್ಯಕ್ಕೆ ಹಾಜರಾಗದೇ 49 ದಿನಗಳ ನಂತರ ತಡವಾಗಿ ಅಂದರೆ ದಿನಾಂಕ:13-05-2025ರಂದು ಕರ್ತವ್ಯಕ್ಕೆ ನೇಮಕ ಮಾಡಿಕೊಳ್ಳುವಂತೆ ಈ ಕಛೇರಿಯಲ್ಲಿ ಹಾಜರಾಗಿರುತ್ತೀರಿ. ಆದರೆ ನೀವು ಒಬ್ಬ ಜವಾಬ್ದಾರಿಯುತ ಪೊಲೀಸ್ ಕಾನ್ಸಟೇಬಲ್ ಆಗಿದ್ದು, ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನೀವು ರಜೆಯ ಮೇಲೆ ತೆರಳಬೇಕಾದ ಸಮಯದಲ್ಲಿ ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ನೀಡದೇ ಅಥವಾ ರಜಾ ಪ್ರಪತ್ರವನ್ನು ಸಲ್ಲಿಸದೇ ಅಥವಾ ರಹದಾರಿ ಪತ್ರವನ್ನು ಸಹ ಪಡೆದುಕೊಂಡು ಹೋಗದೇ, ದಿನಾಂಕ:30-01-2025 ರಿಂದ 13-05-2025ರವರೆಗೆ ಒಟ್ಟು 71 ದಿನಗಳು ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿ ನಿಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಹಾಗೂ ಬೇಜಾವಬ್ದಾರಿತನ ಪ್ರದರ್ಶಿಸಿರುವ ಆರೋಪ				2025 ರಿಂದ 28-05-2025ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೇಂದು ಪರಿಗಣಿಸಿದೆ.		
05	ಶ್ರೀ ಕೃಷ್ಣಮೂರ್ತಿ, ಸಿಹೆಚ್‌ಸಿ-282	ಸಿಪಿಐ ಸಂಡೂರು ವೃತ್ತ ಇವರು ದಿನಾಂಕ:02-05-2025ರಂದು ತೋರಣಗಲ್ಲು ಪೊಲೀಸ್ ಠಾಣೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಮೇಲಾಧಿಕಾರಿಗಳಿಗೆ ಯಾವುದೇ ಮಾಹಿತಿಯನ್ನು ನೀಡದೇ ನೀವು ಮಫ್ತಿಯಲ್ಲಿ ಠಾಣೆಯ ಕರ್ತವ್ಯಕ್ಕೆ ತಡವಾಗಿ ಬಂದ ಬಗ್ಗೆ ಸಿಪಿಐರವರು ವಿಚಾರಿಸಲಾಗಿ ಸಮರ್ಪಕವಾದ ಉತ್ತರವನ್ನುನೀಡದೇ ಏರು	28-05-2025	25-06-2025	-	ಶ್ರೀ ಎಲ್.ಕೃಷ್ಣಮೂರ್ತಿ., ಸಿಹೆಚ್‌ಸಿ-282, ಡಿ.ಸಿ.ಆರ್.ಇ ಘಟಕ, (ಈ ಹಿಂದೆ ತೋರಣಗಲ್ಲು ಪೊಲೀಸ್ ಠಾಣೆ) ಬಳ್ಳಾರಿ ಜಿಲ್ಲೆ ಆದ ನಿಮಗೆ ಮುಂಬರುವ ವಾರ್ಷಿಕ ವೇತನ ಬಡ್ತಿಯನ್ನು ಭವಿಷ್ಯದ ವಾರ್ಷಿಕ ವೇತನ ಬಡ್ತಿಯ ಮೇಲೆ ಪರಿಣಾಮ ಬೀರದಂತೆ 06 ತಿಂಗಳ ಕಾಲ ಮುಂದೂಡಲಾಗಿದೆ. ಮತ್ತು	-	-

		ಧ್ವನಿಯಲ್ಲಿ, ಬೆರಳು ತೋರಿಸಿತ್ತಾ ನೀವು ವಿನಾಕಾರಣ ನನಗೆ ತೊಂದರೆಯನ್ನು ಕೊಡುತ್ತೀರಿ ಎಂದು ಸಿಪಿಐರವರೊಂದಿಗೆ ಆಸಿಸ್ತಿನಿಂದ ವರ್ತಿಸಿರುತ್ತೀರಿ. ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಗಳಿಗೆ ಮೇಲಾಧಿಕಾರಿಗಳು ಕೆಲಸದ ಬಗ್ಗೆ ಕೇಳುವ ಅಧಿಕಾರ ಇರುತ್ತದೆ. ಶಿಸ್ತಿನ ಇಲಾಖೆಯಲ್ಲಿದ್ದು ಮೇಲಾಧಿಕಾರಿಗಳೊಂದಿಗೆ ಅಶಿಸ್ತಿನಿಂದ ವರ್ತಿಸುವುದು ಸರಿಯಿಲ್ಲವೆಂದು ಸಿಪಿಐರವರು ಹೇಳಿದಾಗ್ಯೂ ಅದೇ ಅಶಿಸ್ತಿನ ವರ್ತನೆಯನ್ನು ಮುಂದುವರೆಸಿರುತ್ತೀರಿ. ನಂತರದಲ್ಲಿ ಠಾಣೆಯ ಎಸ್.ಹೆಚ್.ಓ ಕರ್ತವ್ಯಕ್ಕೆ ನೇಮಕ ಮಾಡಿದ್ದು, ಆದರೆ ನೇಮಕ ಮಾಡಿದ ಕರ್ತವ್ಯಕ್ಕೆ ಬಾರದೇ ದಿನಾಂಕ:03-05-2025 ರಿಂದ ಠಾಣಾಧಿಕಾರಿಗಳಿಗೆ, ಮೇಲಾಧಿಕಾರಿಗಳಿಗೆ ಆಗಲೀ ಯಾವುದೇ ಮಾಹಿತಿ ನೀಡದೇ ಕರ್ತವ್ಯಕ್ಕೆ ಗೈರು ಹಾಜರಾಗಿ ನಿಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತ ಹಾಗೂ ಬೇಜವಬ್ದಾರಿತನ ಪ್ರದರ್ಶಿಸಿರುವ ಆರೋಪ				ದಿನಾಂಕ:03-05-2025 ರಿಂದ 27-05-2025ರವರೆಗೆ ಒಟ್ಟು 25 ದಿನಗಳ ಅನಧಿಕೃತ ಗೈರು ಹಾಜರಿ ಅವಧಿಯನ್ನು ಅವರ ಹಕ್ಕಿನಲ್ಲಿರುವ ಪರಿವರ್ತಿತ ರಜೆಯನ್ನಾಗಿ ಮಂಜೂರು ಮಾಡಿದೆ. ಹಾಗೂ ದಿನಾಂಕ:28-05-2025 ರಿಂದ 25-06-2025ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೇಂದು ಪರಿಗಣಿಸಿದೆ		
06	ಶ್ರೀ ಮುದುಕನ ಗೌಡ, ಸಿಪಿಸಿ-315	ದಿನಾಂಕ:06-10-2024ರಂದು ಮಾನ್ಯ ಮುಖ್ಯಮಂತ್ರಿಗಳ ಬಂದೋಬಸ್ತ್ ಕರ್ತವ್ಯಕ್ಕೆ ಹೋಗುವ ಸಮಯದಲ್ಲಿ ಬೈಕ್ ಸ್ಕಿಡ್ ಆಗಿ ಬಿದ್ದಿದ್ದು, ನಂತರ ಮಾನವಿ ಪಟ್ಟಣದ ಲಕ್ಕ್ಷ್ಮೀ ಮಲ್ಟಿ ಸ್ಪೇಷಾಲಿಟಿ ಆಸ್ಪತ್ರೆಯಲ್ಲಿ ಹೊರ ರೋಗಿಯಾಗಿ ಚಿಕಿತ್ಸೆ ಪಡೆದಿದ್ದು, ಆದರೆ ವೈದ್ಯರು Take rest for sixty days ಎಂದು ಶಿಫಾರಸ್ಸು	28-05-2025	26-06-2025	ಸಿಪಿಐ ಸಿರುಗುಪ್ಪ ಇವರ ವಿಚಾರಣಾ ವರದಿಯಲ್ಲಿ ಆರೋಪ ಸಾಬೀತಾಗಿರುತ್ತದೆ.	ಶ್ರೀ ಮುದಕನಗೌಡ., ಸಿಪಿಸಿ-315, ಕೌಲ್‌ಬಜಾರ್ ಪೊಲೀಸ್ ಠಾಣೆ, ಬಳ್ಳಾರಿ ಜಿಲ್ಲೆ ಆದ ನಿಮಗೆ ಮುಂಬರುವ 01 ವಾರ್ಷಿಕ ವೇತನ ಬಡ್ತಿಯನ್ನು ಭವಿಷ್ಯದ ವಾರ್ಷಿಕ ವೇತನ ಬಡ್ತಿಯ ಮೇಲೆ ಪರಿಣಾಮ ಬೀರದಂತೆ 06 ತಿಂಗಳ ಕಾಲ ಮುಂದೂಡಲಾಗಿದೆ ಮತ್ತು ದಿನಾಂಕ:08-10-2024 ರಿಂದ 19-12-2024ರವರೆಗೆ ಒಟ್ಟು	-	-

		ಮಾಡಿರುವುದಿಲ್ಲ. ಆದರೆ ಮಾನವಿ ಪಟ್ಟಣದ ಲಕ್ಷ್ಮೀ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದ ಚೀಟಿಯಲ್ಲಿ Take rest for sixty days ಎಂದು ನಮೂದಿಸಿ ಇಲಾಖೆಯ ಮೇಲಾಧಿಕಾರಿಗಳಿಗೆ ಸುಳ್ಳು ಮಾಹಿತಿಯನ್ನು ನೀಡಿ ನಿಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತ ಹಾಗೂ ಬೇಜವಬ್ದಾರಿತನ ಪ್ರದರ್ಶಿಸಿರು				72 ದಿನಗಳ ಅನಧಿಕೃತ ಗೈರು ಹಾಜರಿ ಅವಧಿಯನ್ನು ಅವರ ಹಕ್ಕಿನಲ್ಲಿರುವ ಸಂಯುಕ್ತ ರಜೆಯನ್ನಾಗಿ ಮಂಜೂರು ಮಾಡಿದೆ. ಹಾಗೂ ದಿನಾಂಕ:28-05-2025 ರಿಂದ 26-06-2025ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೇಂದು ಪರಿಗಣಿಸಿದೆ.		
07	ಶ್ರೀ ವೈ.ಶಂಕ್ರಪ್ಪ., ಎಎಸ್ಐ	ದಿನಾಂಕ:11-11-2025ರಂದು ಯಾವೂದೋ ಒಂದು ಸ್ಥಳದಲ್ಲಿ 03 ಜನ ಸಾರ್ವಜನಿಕರನ್ನು ಯಾವುದೋ ವಿಚಾರಕ್ಕೆ ತಡೆದು ನಿಲ್ಲಿಸಿ ಅವರೊಂದಿಗೆ ಏರು ಧ್ವನಿಯಲ್ಲಿ ಅಸಭ್ಯವಾಗಿ ಮಾತನಾಡಿರುವುದಿಲ್ಲದೇ ಯಾವೂದೋ ಒಂದು ಕಾರಣಕ್ಕೆ ಅವರಿಂದ ಹಣ ಸ್ವೀಕರಿಸುತ್ತಿರುವ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಮೂಡಿಬಂದಿರುವುದಲ್ಲದೇ ಸಾರ್ವಜನಿಕರಲ್ಲಿ ಪೊಲೀಸ್ ಇಲಾಖೆ ಬಗ್ಗೆ ಕೆಟ್ಟ ಅಭಿಪ್ರಾಯ ಬರುವಂತೆ ಕಾರಣರಾಗಿ ನಿಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತ ಹಾಗೂ ಬೇಜವಬ್ದಾರಿತನ ಪ್ರದರ್ಶಿಸಿರುವ ಆರೋಪ	15-11-2025	-	-	-	-	-

ವಿಜಯನಗರ ಜಿಲ್ಲೆ

ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ವಿವರಗಳು
01-01-2024 ರಿಂದ 31-12-2024 ರವರೆಗೆ

ಕ್ರಮ ಸಂಖ್ಯೆ	ಆಪಾದಿತ ಪೊಲೀಸ್	ಆರೋಪ ವಿವರ	ಕರ್ತವ್ಯ ಲೋಪದಡಿಯಲ್ಲಿ	ಅಮಾನತ್ತು ಬಿಡುಗಡೆ	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ	ಕ್ರಿಮಿನಲ್ ಪ್ರಕರಣ	ಪ್ರಸ್ತುತ ಹಂತ

	ಅಧಿಕಾರಿ / ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ		ಅಮಾನತ್ತುಗೊಳಿಸಿರುವ ದಿನಾಂಕ(ಲೋಕಾಯುಕ್ತ & ಕ್ರಿಮಿನಲ್ ಪ್ರಕರಣಗಳನ್ನು ಹೊರತುಪಡಿಸಿ)	ದಿನಾಂಕ		ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ / ಪ್ರಸ್ತುತ ಹಂತ	
01	ಶ್ರೀ ಮಂಜುನಾಥ ಕೆ. **ಸಿ.ಹೆಚ್.ಸಿ-136, ಕೊಟ್ಟೂರು ಪೊಲೀಸ್ ಠಾಣೆ**	**ಮಧ್ಯಪಾನ ಸೇವನೆಮಾಡಿಕೊಂಡು ತೂರಾಡುತ್ತಾ ಠಾಣೆಗೆ ಬಂದು ಎಸ್.ಹೆಚ್.ಓ ರವರ ಟೇಬಲ್ ಬಳಿ ಬಂದು ಎ.ಎಸ್.ಐ ಚಂದ್ರಶೇಖರ್ ರವರಿಗೆ ಬೈಯುತ್ತಾ ಹೊಡೆಯಲು ಹೋಗಿರುವ ಬಗ್ಗೆ.**	02-01-2024	14-02-2024	-	**06 ತಿಂಗಳ ವಾರ್ಷಿಕ ವೇತನ ಬಡ್ತಿಯನ್ನು ಮುಂದೂಡಿ ಆದೇಶಿಸಲಾಗಿದೆ. ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.**	-	-
05	**ಕೆ.ಜಿ. ಶರಣಪ್ಪ ಸಿ.ಹೆಚ್.ಸಿ-134 ಹೂವಿನ ಹಡಗಲಿ ಪೊಲೀಸ್ ಠಾಣೆ**	**ದಿನಾಂಕ :23/03/2024 ರಂದು 09-ಬಳ್ಳಾರಿ ಲೋಕಸಭಾ ಚುನಾವಣೆಯ ಹಿನ್ನಲೆಯಲ್ಲಿ ಹೊಸಪೇಟೆಯ ಎಂ.ಪಿ.ಪ್ರಕಾಶ್ ನಗರದ ವೇರ್ ಹೌಸ್ ಗೋದಾಮು ಸಂಖ್ಯೆ-06 ರಲ್ಲಿ ಶೇಖರಿಸಿಟ್ಟಿರುವ ಇ.ವಿ.ಎಂ ಮಷೀನ್‌ಗಳನ್ನು 90-ಹೊಸಪೇಟೆ ವಿಧಾನಸಭಾ ಕ್ಷೇತ್ರದಿಂದ 88-ಹೂವಿನಹಡಗಲಿ ವಿಧಾನಸಭಾ ಕ್ಷೇತ್ರಕ್ಕೆ ಸಾಗಿಸುವ ಕುರಿತು ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜನೆ ಮಾಡಿದ್ದು, ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜನೆಗೊಂಡ ಸದರಿಯವರು ಜವಾಬ್ದಾರಿಯುತ ಕರ್ತವ್ಯದಲ್ಲಿ ದ್ವೇವೆಂಬುದನ್ನು ಮರೆತು ಕರ್ತವ್ಯದ ಅವಧಿಯಲ್ಲಿ ಮಧ್ಯಪಾನ ಮಾಡಿರುವ ಬಗ್ಗೆ.**	25-03-2024	22-04-2024	ನಿಯಮ 07 ರಡಿಯಲ್ಲಿ ಸದರಿ ರವರ ವಿರುದ್ಧ ಕರ್ತವ್ಯ ಲೋಪ ರುಜುವಾತಾಗಿರುತ್ತದೆ.	**01 ವರ್ಷಗಳ ತಿಂಗಳ ವಾರ್ಷಿಕ ವೇತನ ಬಡ್ತಿಯನ್ನು ಮುಂದೂಡಿ ಆದೇಶಿಸಲಾಗಿದೆ. ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.**	-	-
06	**ನಾಗರಾಜ ನಾಯ್ಕ್ ಸಿ.ಪಿ.ಸಿ-470 ಹೂವಿನ ಹಡಗಲಿ ಪೊಲೀಸ್ ಠಾಣೆ**							
08	**ಹೆಚ್.ಕೆ ಮಂಜುನಾಥ ಸಿ.ಹೆಚ್.ಸಿ-277**							
09	**ಚಂದ್ರಪ್ಪ ಸಿ.ಪಿ.ಸಿ-205**							

ನಮೂನೆ-1

ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ವಿವರಗಳು

01-01-2025 ರಿಂದ 15-01-2026 ರವರೆಗೆ

ಕ್ರಮ ಸಂಖ್ಯೆ	ಆಪಾದಿತ ಪೊಲೀಸ್ ಅಧಿಕಾರಿ / ಸಿಬ್ಬಂದಿಯವರ	ಆರೋಪ ವಿವರ	ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರು	ಅಮಾನತ್ತು ಬಿಡುಗಡೆ ದಿನಾಂಕ	ಲೋಪ ರುಜುವಾತು ಆಗಿದ್ದಲ್ಲಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ	ಕ್ರಿಮಿನಲ್ ಪ್ರಕರಣ ದಾಖಲಾಗಿ	ಪ್ರಸ್ತುತ ಹಂತ

	ಹೆಸರು ಮತ್ತು ಹುದ್ದೆ		ವ ದಿನಾಂಕ(ಲೋಕಾಯುಕ್ತ & ಕ್ರಿಮಿನಲ್ ಪ್ರಕರಣಗಳನ್ನು ಹೊರತುಪಡಿಸಿ)		ಮಾಹಿತಿ	ಕೈಗೊಂಡ ಕ್ರಮದ ವಿವರ	ದ್ದಲ್ಲಿ ಶಿಕ್ಷೆಯ ವಿವರ / ಪ್ರಸ್ತುತ ಹಂತ	

ಕಮಾಂಡೆಂಟ್, 4ನೇ ಪಡೆ, ಕೆ.ಎಸ್.ಆರ್.ಪಿ, ಬೆಂಗಳೂರು

ಕ್ರ.ಸ.	ಆಪಾದಿತ ಪೊಲೀಸ್ ಅಧಿಕಾರಿ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪದ ವಿವರ	ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ (ಲೋಕಾಯುಕ್ತ & ಕ್ರಿಮಿನಲ್ ಪ್ರಕರಣಗಳನ್ನು ಹೊರೆತುಪಡಿಸಿ)	ಅಮಾನತು ಬಿಡುಗಡೆ ದಿನಾಂಕ	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ/ಪ್ರಸ್ತುತ ಹಂತ	ಪ್ರಸ್ತುತ ಹಂತ
1	**ಶ್ರೀ ಅಭಿಮನ್ಯು ಕಾಂಬಳೆ, ಸ್ಪೆ.ಆರ್‌ಹೆಚ್‌ಸಿ-45, ''ಎ'ದಳ,** **<u>2024</u>**	***ಶ್ರೀ ಅಭಿಮನ್ಯು ಕಾಂಬಳೆ, ಸ್ಪೆ.ಆರ್‌ಹೆಚ್ -45, ''ಎ'ದಳ, 4ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು ಇವರನ್ನು ಇಂಡಿಯಾ ರಿಸರ್ವ್ ಬೆಟಾಲಿಯನ್ ಅರಕೇರಿ, ವಿಜಯಪುರ ಜಿಲ್ಲೆ ರವರ ಪತ್ರ ಸಂಖ್ಯೆ:ಸಿಬ್ಬಂದಿ-3/341/2023 ದಿನಾಂಕ:01/01/ 2024ರಲ್ಲಿ ಶ್ರೀ ಅಭಿಮನ್ಯು ಕಾಂಬಳೆ, ಸ್ಪೆ.ಆರ್‌ಹೆಚ್‌ಸಿ-45, ''ಎ'' ದಳ, ರವರನ್ನು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಬೆಳಗಾವಿ ಜಿಲ್ಲೆ, ಗೋಕಾಕ ನಗರಕ್ಕೆ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಿದ್ದಾಗ ಮದ್ಯಪಾನ ಮಾಡಿ ಕಾನೂನು ಬಾಹಿರವಾಗಿ ಹಣ ವಸೂಲಿ ಮಾಡಿದ ಆರೋಪದ ಮೇಲೆ ಇವರನ್ನು ಅಮಾನತ್ತಿನಲ್ಲಿರಿಸಲಾಗಿದೆ.***</u>	**06/11/2023**	**06/01/2024**	ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲಾಗಿದೆ	ಶ್ರೀ ಅಭಿಮನ್ಯು ಕಾಂಬಳೆ, ಸ್ಪೆ.ಆರ್‌ಹೆಚ್‌ಸಿ-45, ''ಎ'ದಳ 4ನೇ ಪಡೆ ಕೆ.ಎಸ್.ಆರ್.ಪಿ. ಬೆಂಗಳೂರು ರವರ ವಿರುದ್ಧ ಹೊರಡಿಸಲಾದ ದೋಷಾರೋಪಣೆಯು ನಡೆಸಲಾದ ಇಲಾಖಾ ವಿಚಾರಣೆಯಿಂದ ಸಾಬೀತಾಗಿರುತ್ತದೆ"	**-**	ಶ್ರೀ ಅಭಿಮನ್ಯು ಕಾಂಬಳೆ, ಸ್ಪೆ.ಆರ್‌ಹೆಚ್ -45, ''ಎ'' ದಳ, 4ನೇ ಪಡೆ, ಕೆ.ಎಸ್.ಆರ್.ಪಿ, ಬೆಂಗಳೂರು. ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವುದರಿಂದ ಹಾಗೂ ಆರೋಪಿತ ಪೊಲೀಸ್ ಅಧಿಕಾರಿಯವರು ಆರೋಪವನ್ನು ಒಪ್ಪಿಕೊಂಡಿರುವುದರಿಂದ ಇವರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗುವಂತೆ ಮೂರು (03) ವರ್ಷ ಮುಂದೂಡಿ ಆದೇಶಿಸಲಾಗಿದೆ.
2	***ಶ್ರೀ.ಸತೀಶ್***	***<u>ದೋಷಾರೋಪಣೆ :-</u>***	18/03/2024	23/4/2024	-	-	-	*ಶ್ರೀ ಸತೀಶ್ ಕುಮಾರ್,*

	ಕುಮಾರ್ ಸ್ಪೆ.ಆರ್.ಹೆಚ್‌ಸಿ-234, **2024**	ಶ್ರೀ.ಸತೀಶ್ ಕುಮಾರ್ ಸ್ಪೆ.ಆರ್.ಹೆಚ್‌ಸಿ-234, 4ನೇ ಪಡೆ ಕೆ.ಎಸ್.ಆರ್.ಪಿ. ಬೆಂಗಳೂರು (ಅನ್ಯ ಕರ್ತವ್ಯದ ಆಧಾರದ ಮೇಲೆ ಕೆ.ಎಸ್.ಪಿ.ಎಸ್.ಪಿ.ಬಿ) ರವರು ಪೊಲೀಸ್ ಪ್ರಧಾನ ಕಛೇರಿಯಲ್ಲಿನ ಕ್ರೀಡಾ ಶಾಖೆಯಲ್ಲಿ ಸಹಾಯಕರಾಗಿ ಹಾಗೂ ಗಣಕಯಂತ್ರ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, 16ನೇ ಅಖಿಲ ಭಾರತ ಪೊಲೀಸ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್-2023 ಅನ್ನು ತೆಲಂಗಾಣದಲ್ಲಿ ದಿನಾಂಕ:17/03/2024 ರಿಂದ 23/03/2024 ರವರೆಗೆ ಆಯೋಜಿಸಲಾಗಿದ್ದು, ಈ ಸಂಬಂಧ ತೆಲಂಗಾಣ ಪೊಲೀಸ್ ಇಲಾಖೆಯ ವತಿಯಿಂದ ಹೊರಡಿಸಲಾದ ಸೇರುವಿಕೆ ಸೂಚನೆಗಳನ್ವಯ ಕರ್ನಾಟಕ ರಾಜ್ಯ ಪೋಲಿಸ್ ಬ್ಯಾಡ್ಮಿಂಟನ್ ತಂಡದ ನೊಂದಣಿಯನ್ನು ದಿನಾಂಕ:26/02/2024 ರೊಳಗಾಗಿ ಸಲ್ಲಿಸಬೇಕಾಗಿದ್ದು, ಆದರೆ ಇವರು ತಂಡದ ನೊಂದಣಿಯನ್ನು ದಿನಾಂಕ:05/03/2024 ರಂದು ಇ-ಮೇಲ್ ಮೂಲಕ ವಿಳಂಬವಾಗಿ ಕಳುಹಿಸಿರುತ್ತಾರೆ. ಈ ನೊಂದಣಿ ಬಗ್ಗೆ ತೆಲಂಗಾಣ ರಾಜ್ಯ ಪೊಲೀಸ್ ಕಛೇರಿಗೆ ಕರೆ ಮಾಡಿ ವಿಚಾರಿಸಿದಾಗ ನೊಂದಣಿಯನ್ನು ವಿಳಂಬವಾಗಿ ಕಳುಹಿಸಿರುವುದರಿಂದ ಕರ್ನಾಟಕ ರಾಜ್ಯ ಪೊಲೀಸ್ ಬ್ಯಾಡ್ಮಿಂಟನ್ ತಂಡದ ನೋಂದಣಿಯನ್ನು ತಿರಸ್ಕರಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಚಾಂಪಿಯನ್‌ಷಿಪ್ ಸಂಬಂಧ ವಿವಿಧ ಘಟಕಗಳಿಂದ						ಸ್ಪೆ.ಆರ್‌ಹೆಚ್‌ಸಿ-234, 'ಸಿ' ದಳ, 4ನೇ ಪಡೆ, ಕೆ.ಎಸ್.ಆರ್.ಪಿ, ಬೆಂಗಳೂರು ಇವರಿಗೆ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿ, ಇನ್ನು ಮುಂದೆ ಈ ರೀತಿ ವರ್ತಿಸದಂತೆ, ಸೂಚಿಸುತ್ತಾ, '' ವಾಗ್ದಂಡನೆ '' ವಿಧಿಸಿ ಆದೇಶಿಸಲಾಗಿದೆ

		ಆಯ್ಕೆಯಾದ ಕ್ರೀಡಾಪಟುಗಳು ಪೂರ್ವಭಾವಿ ತರಬೇತಿಯಲ್ಲಿ ತೊಡಗಿರುತ್ತಾರೆ. ಆದರೆ, ತಂಡದ ನೋಂದಣಿಯನ್ನು ರದ್ದುಗೊಳಿಸಿರುವುದರಿಂದ, ಸದರಿ ಚಾಂಪಿಯನ್‌ಷಿಪ್ ನಿಯೋಜನೆಯಿಂದ ಕೆ.ಎಸ್.ಪಿ. ತಂಡವನ್ನು ಕೈಬಿಡಲಾಗಿರುತ್ತದೆ ಈ ಕಾರಣಗಳಿಂದ ನಿಮ್ಮ ವಿರುದ್ಧ ಉಲ್ಲೇಖಿತ ಜ್ಞಾಪನದಲ್ಲಿ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ. ***ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯ, ಅಶಿಸ್ತು ಮತ್ತು ದುರ್ನಡತೆ ಪ್ರದರ್ಶಿಸಿರುವ ಕಾರಣ ಕೆಎಸ್‌ಪಿ (ಶಿಸ್ತುನಡವಳಿ)(ತಿದ್ದುಪಡಿ) ನಿಯಮಾವಳಿಗಳು 2022ರ ಅನ್ವಯ, ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿರಿಸಲಾಗಿದೆ.***						
3	***ಶ್ರೀ.ಅನಿಲ್ ರಾಥೋಡ್, ಸ್ಪೆ.ಆರ್. ಹೆಚ್ ಸಿ-214 ''ಬಿ'' ದಳ*** 2025	***<u>ದೋಷಾರೋಪಣೆ :-</u>*** ***ಶ್ರೀ.ಅನಿಲ್ ರಾಥೋಡ್, ಸ್ಪೆ.ಆರ್. ಹೆಚ್ ಸಿ-214 ''ಬಿ'' ದಳ 4ನೇ ಪಡೆ, ಕೆ.ಎಸ್. ಆರ್.ಪಿ. ಬೆಂಗಳೂರು ರವರನ್ನು ರಾತ್ರಿ ನಗರ ಕರ್ತವ್ಯಕ್ಕೆ ತೆರಳಿದ ಸಮಯದಲ್ಲಿ ಅಲ್ಲಿಂದ ಗೈರುಹಾಜರಾಗಿ ಪಡೆಯ ವಸತಿ ಸಮುಚ್ಚಯಕ್ಕೆ ಬಂದು ಶ್ರೀ ವಿಜಯಕುಮಾರ್, ಆರ್ ಸ್ಪೆ.ಆರ್. ಪಿಸಿ-176 ರವರು ಇಲ್ಲದ ಸಮಯ ನೋಡಿ ರಾತ್ರಿ 12.30 ಗಂಟೆಗೆ ಇವರ ವಸತಿ ಗೃಹದ ಮನೆಯ ಬಾಗಿಲನ್ನು ಬಡೆದು ಇವರ ಪತ್ನಿಯೊಂದಿಗೆ ಅಸಭ್ಯ ರೀತಿಯಲ್ಲಿ ತೊಂದರೆ ಉಂಟು ಮಾಡಲು ಯತ್ನಿಸಿ. ಸದರಿಯವರ ಪತ್ನಿಯು 7 ತಿಂಗಳ ಗರ್ಭಿಣಿಯಾಗಿದ್ದು, ಬಾಗಿಲನ್ನು ಜೋರಾಗಿ ತಳ್ಳಿ ಮನೆಗೆ ನುಗ್ಗಲು ಯತ್ನಿಸಿ, ಶ್ರೀ ವಿಜಯಕುಮಾರ್,***	07/01/2025	20/02/2025	ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲಾಗಿದೆ	*ಕರ್ನಾಟಕ ರಾಜ್ಯ ನಾಗರೀಕ ಸೇವಾ (ನಡತೆ) ನಿಯಮಗಳು, 2021ರ ನಿಯಮ 33ರ ಉಪನಿಯಮ (ಎ) ಮತ್ತು (ಬಿ) ಉಲ್ಲಂಘಿಸಿರುವುದು ಅಭಿಯೋಗ ಸಾಕ್ಷಿ-1, 2, 3, 4 ಮತ್ತು 5 ರವರುಗಳ ಹೇಳಿಕೆಯಿಂದ ಹಾಗೂ ಅಭಿಯೋಗ ದಾಖಲೆ – 1, 2, 3, 4, 5, 6 ಮತ್ತು 7 ಎಂದು ಗುರುತಿಸಿದ ದಾಖಲೆಗಳಿಂದ ದೃಢಪಟ್ಟಿರುತ್ತದೆ.*	-	*ಅನಿಲ್ ರಾಥೋಡ್, ಸ್ಪೆ.ಆರ್.ಹೆಚ್.ಸಿ-214, 'ಬಿ' ದಳ, 4ನೇ ಪಡೆ, ಕೆ.ಎಸ್.ಆರ್.ಪಿ, ಬೆಂಗಳೂರು. ಇವರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗುವಂತೆ ಎರಡು (02) ವರ್ಷ ಮುಂದೂಡಿ ಆದೇಶಿಸಲಾಗಿ*

		ಆರ್ ಸ್ಪೆ.ಆರ್. ಪಿಸಿ-176, 'ಎ' ದಳ ರವರ ಪತ್ನಿ ಶ್ರೀಮತಿ. ಶೃತಿ ಯವರ ಹೊಟ್ಟೆಗೆ ತಾಗಿ ನೋವುಂಟು ಮಾಡಿರುವ ಮೂಲಕ ಅಸಭ್ಯ ವರ್ತನೆ ತೋರಿರುತ್ತೀರಿ. ***ಶ್ರೀ.ಅನಿಲ್ ರಾಥೋಡ್, ಸ್ಪೆ.ಆರ್. ಹೆಚ್ ಸಿ-214 ''ಬಿ ದಳ 4ನೇ ಪಡೆ, ರವರು ಕರ್ತವ್ಯದಲ್ಲಿ ತೀವ್ರ ಅಶಿಸ್ತು ಮತ್ತು ದುರ್ನಡತೆ ಪ್ರದರ್ಶಿಸಿರುವ ಕಾರಣ ಕೆಎಸ್‌ಪಿ (ಶಿಸ್ತುನಡವಳಿ)(ತಿದ್ದುಪಡಿ) ನಿಯಮಾವಳಿಗಳು 2022ರ ಅನ್ವಯ, ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ದಿನಾಂಕ:07/01/2025 ರಿಂದ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿರಿಸಲಾಗಿದೆ.***						

ಕಮಾಂಡೆಂಟ್, 10ನೇ ಪಡೆ, ಕೆ.ಎಸ್.ಆರ್.ಪಿ, ಶಿಗ್ಗಾಂವಿ

ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ವಿವರಗಳು

ಕ್ರ. ಸಂ	ಆಪಾದಿತ ಪೋಲೀಸ್ ಅಧಿಕಅರಿ/ಸಿಬ್ಬಂದಿಯವರ ಹೆಸರು & ಹುದ್ದೆ	ಆರೋಪ ವಿವರ	ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ (ಲೋಕಾಯುಕ್ತ & ಕ್ರೀಮಿನಲ್ ಪ್ರಕರಣಗಳನ್ನು ಹೊರತುಪಡಿಸಿ)	ಅಮಾನತ್ತು ಬಿಡುಗಡೆ ದಿನಾಂಕ	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ/ಪ್ರಸ್ತುತ ಹಂತ	ಪ್ರಸ್ತುತ ಹಂತ
1	ಶ್ರೀ ಎಸ್.ಸಿ.ಒಂಟೊಗೋಡಿ, ಆರ್‌ಹೆಚ್‌ಸಿ-101	ಶ್ರೀ ಎಸ್ ಸಿ ಒಂಟಿಗೋಡಿಮಠ, ಸ್ಪೆ.ಆರ್‌ಹೆಚ್‌ಸಿ-101 'ಸಿ' ದಳ (ಆಪಾಧಿತ ಪೊಲೀಸ್ ನೌಕರ) 10ನೇ ಪಡೆ ಕೆಎಸ್‌ಆರ್‌ಪಿ, ಶಿಗ್ಗಾಂವಿ ರವರು ಶ್ರೀ ಎಸ್ ಐ ಬಾರಕೇರ, ಅನು/ಜಮೇದಾರ-01 ರವರ ಮೊದಲನೇ ಹೆಣ್ಣು ಮಗಳಾದ ಶ್ರೀಮತಿ ಈರಮ್ಮ	08-10-2024	19-11-2024	ಶ್ರೀ ರಾಜಶೇಖರ ಪಾಟೀಲ, ಸ್ಪೆ,ಆರ್‌ಪಿಐ, ಎ ದಳ, ರವರು ಪ್ರಾಥಮಿಕ ವಿಚಾರಣೆ ಕೈಗೊಂಡು "ಸಾಕ್ಷಿದಾರರ & ಹೇಳಿಕೆದಾರರ ಹೇಳಿಕೆಯನ್ನು ಪರಿಶೀಲಿಸಲಾಗಿ ಶ್ರೀ ಎಸ್ ಸಿ ಒಂಟಿಗೋಡಿಮಠ ಸ್ಪೆ,ಆರ್ ಹೆಚ್‌ಸಿ-101 'ಸಿ' ದಳ ರವರು	ಶ್ರೀ ಎಸ್ ಸಿ ಒಂಟಿಗೋಡಿ, ಸ್ಪೆ.ಆರ್‌ಹೆಚ್‌ಸಿ-101 'ಸಿ' ದಳ, 10ನೇ ಪಡೆ, ಕೆ.ಎಸ್.ಆರ್.ಪಿ, ಶಿಗ್ಗಾಂವಿ ಇವರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗದಂತೆ 06 ತಿಂಗಳ	-	-

		ರವರು ದಿನಾಂಕ:26-09-2024 ರಂದು ಕೆಲಸಕ್ಕೆ ಹೋಗುವಾಗ ಧರ್ಮಸ್ಥಳದ ಬ್ಯಾಂಕಿನ ಸಾಲದ ಬಗ್ಗೆ ವಿಚಾರಿಸಿ, ನನ್ನನ್ನು ಮದುವೆಯಾಗುತ್ತಿಯಾ ಎಂದು ಏರುಧ್ವನಿಯಲ್ಲಿ ಕೇಳಿ, ಮಾನಸಿಕ ಕಿರುಕುಳ ನೀಡಿ, ಕೆಲಸಕ್ಕೆ ಹೊಸೂರಿಗೆ ಬಿಟ್ಟು ಬರುತ್ತೇನೆಂದು ಕಾಡಿಸಿ ಹಾಗೂ ಎರಡನೇ ಹೆಣ್ಣು ಮಗಳಾದ ಕು||ಸವಿತಾ ಬಾರಕೇರ ರವರು ಶಿಗ್ಗಾವಿಯ ಹೊಂಡಾ ಶೊರೂಂನಲ್ಲಿ ಕೆಲಸ ಮಾಡುತ್ತಿರುವ ಸಮಯದಲ್ಲಿ ಅದೇ ದಿನಾಂಕಃ24-09-2024 ರಂದು ಸಮಯ 13:30 ಗಂಟೆಗೆ ಸದರಿ ಎಸ್ ಸಿ ಒಂಟಿಗೋಡಿಮಠ ರವರು ನಿಮ್ಮ ಅಕ್ಕನ ನಂಬರ್ ಕೊಡು, ಅವಳಿಗೆ ಮದುವೆಯಾಗಿದಿಯಾ, ಅವಳನ್ನು ದುವೆಯಾಗುತ್ತೇನೆಂದು ಹೇಳಿರುತ್ತಾರೆ.			ಎಸ್ ಐ ಬಾರಕೇರ ಮೊದಲನೆ ಹೆಣ್ಣು ಮಗಳಾದ ಈರಮ್ಮ ರವರಿಗೆ ದಿ:26-09-2024 ರಂದು ಕೆಲಸಕ್ಕೆ ಹೋಗುವಾಗ ಮಾನಸಿಕ ಕಿರುಕುಳ ನೀಡಿದ್ದು ಶಿಗ್ಗಾವಿಯ ಹೋಂಡಾ ಶೋರೂಂನಲ್ಲಿ ಕೆಲಸ ಮಾಡುತ್ತಿರುವ ಸದರಿಯವರ ತಂಗಿಗೆ ನಿಮ್ಮ ಅಕ್ಕನನ್ನು ಮದುವೆ ಆಗುತ್ತೇನೆಂದು ಹೇಳಿದ್ದು ಅದರಂತೆ ಎಸ್ ಸಿ ಒಂಟಿಗೋಡಿಮಠ ರವರು ಸದರಿಯವರ ಮನೆಗೆ ಹೋಗಿ ತಮಾಷೆ ಮಾಡಿದೆನೆಂದು ಹೇಳಿದ್ದು ಬೇಜವಾಬ್ದಾರಿತನ, ಅಶಿಸ್ತು, ಮತ್ತು ಅತೀವ ದುರ್ನಡತೆಯನ್ನು ಪ್ರದರ್ಶಿಸಿರುವುದು ಸಾಕ್ಷಿದಾರರ & ಹೇಳಿಕೆದಾರರ ಹೇಳಿಕೆಯನ್ವಯ ಸ್ಪಷ್ಟ ಅಭಿಪ್ರಾಯದೊಂದಿಗೆ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ" ಎಂದು ಅಭಿಪ್ರಾಯ ವರದಿ ಸಲ್ಲಿಸಿರುತ್ತಾರೆ.	(ಆರು ತಿಂಗಳ) ಅವಧಿಗೆ ಮುಂದೂಡಲಾಗಿದೆ. ಹಾಗೂ ದಿನಾಂಕ:08-10-2024 ರಿಂದ 18-11-2024 ರವರೆಗೆ ಒಟ್ಟು 42 ದಿನಗಳ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿ ಆದೇಶಿಸಲಾಗಿದೆ.		

ಕಮಾಂಡೆಂಟ್ ರವರ ಕಛೇರಿ, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು

ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ವಿವರಗಳು

ಕ್ರ. ಸಂ	ಆಪಾದಿತ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪದ ವಿವರ	ಕರ್ತವ್ಯ ಲೋಪದ ಅಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ (ಲೋಕಾಯುಕ್ತ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಹೊರತುಪಡಿಸಿ)	ಅಮಾನತ್ತು ಬಿಡುಗಡೆ ದಿನಾಂಕ	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಶಿಕ್ಷೆಯ ವಿವರ/ ಪ್ರಸ್ತುತ ಹಂತ	ಪ್ರಸ್ತುತ ಹಂತ
4	ಶ್ರೀ ಪೃಥ್ವಿರಾಜ್. ಎಂ. ಎನ್. ಆರ್.ಪಿ.ಸಿ-115	ಡಿ-ಸ್ಕ್ವಾಟ್ ತರಬೇತಿಯಿಂದ ದಿನಾಂಕಃ 06-04-2025 ರಂದು ರಾತ್ರಿ 7-00 ಗಂಟೆಯಿಂದ ಅನಧಿಕೃತ ಗೈರು ಹಾಜರಾದ ಬಗ್ಗೆ	08-04-2025	21-05-2025	ಡಿ-ಸ್ಕ್ವಾಟ್ ತರಬೇತಿಯಿಂದ ಅನಧಿಕೃತ ಗೈರು ಹಾಜರಾಗಿರುವ ಬಗ್ಗೆ ರುಜುವಾತು ಆಗಿರುತ್ತದೆ.	ಇವರಿಗೆ ವಾಗ್ದಂಡನೆ ವಿಧಿಸಿದೆ ಹಾಗೂ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಿದೆ.	--	--
5	ಶ್ರೀ ಆನಂದ ಎಂ. ಆರ್.ಪಿ.ಸಿ-370	ಡಿ-ಸ್ಕ್ವಾಟ್ ತರಬೇತಿಯಿಂದ ದಿನಾಂಕಃ 06-04-2025 ರಂದು ರಾತ್ರಿ 8-00 ಗಂಟೆಯಿಂದ ಅನಧಿಕೃತ ಗೈರು ಹಾಜರಾದ ಬಗ್ಗೆ	08-04-2025	02-05-2025	ಡಿ-ಸ್ಕ್ವಾಟ್ ತರಬೇತಿಯಿಂದ ಅನಧಿಕೃತ ಗೈರು ಹಾಜರಾಗಿರುವ ಬಗ್ಗೆ ರುಜುವಾತು ಆಗಿರುತ್ತದೆ.	ಇವರಿಗೆ ವಾಗ್ದಂಡನೆ ವಿಧಿಸಿದೆ ಹಾಗೂ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಿದೆ.	--	--
6	ಶ್ರೀ ಹೆಚ್. ವಿ. ಚೇತನ್, ಆರ್.ಪಿ.ಸಿ-115	ಡಿ-ಸ್ಕ್ವಾಟ್ ತರಬೇತಿಯಿಂದ ದಿನಾಂಕಃ 06-04-2025 ರಂದು ರಾತ್ರಿ 8-00 ಗಂಟೆಯಿಂದ ಅನಧಿಕೃತ ಗೈರು ಹಾಜರಾದ ಬಗ್ಗೆ	08-04-2025	18-07-2025	ಡಿ-ಸ್ಕ್ವಾಟ್ ತರಬೇತಿಯಿಂದ ಅನಧಿಕೃತ ಗೈರು ಹಾಜರಾಗಿರುವ	ಇವರ ಒಂದು ವಾರ್ಷಿಕ ವೇತನ ಬಡ್ತಿಯ	--	--

					ಬಗ್ಗೆ ರುಜುವಾತು ಆಗಿರುತ್ತದೆ.	ನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗ ದಂತೆ ಆರು ತಿಂಗಳ ಕಾಲ ಮುಂದೂ ಡಿದೆ. ಹಾಗೂ ಅಮಾನತ್ತಿ ನ ಅವಧಿಯ ನ್ನು ಅಮಾನ ತ್ತಂದು ಪರಿಗಣಿಸಿದ .		

ಪೊಲೀಸ್ ಅಧೀಕ್ಷರು, ಆಡಳಿತ, ರಾಜ್ಯ ಗುಪ್ತವಾರ್ತೆ, ಬೆಂಗಳೂರು.

ಕ್ರ. ಸಂ	ಆಪಾದಿತ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಆರೋಪ ವಿವರ	ಕರ್ತವ್ಯ ಲೋಪದಡಿಯಲ್ಲಿ ಅಮಾನತ್ತುಗೊಳಿಸಿರುವ ದಿನಾಂಕ	ಅಮಾನತ್ತು ಬಿಡುಗಡೆ ದಿನಾಂಕ	ಲೋಪ ರುಜುವಾತು ಆಗಿದ್ದಲ್ಲಿ ಮಾಹಿತಿ	ರುಜುವಾತು ಆಗಿರುವ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ	ಕ್ರಿಮಿನಲ್ ಪ್ರಕರಣದ್ದಲ್ಲಿ ಶಿಕ್ಷೆಯ ವಿವರ/ಪ್ರಸ್ತುತ ಹಂತ	ಪ್ರಸ್ತುತ ಹಂತ
01.01.2024 ರಿಂದ 31.12.2024 ರವರೆಗೆ								
01	ಶ್ರೀ ಲಿಂಗಯ್ಯ, ಹೆಚ್, ಪಿ.ಎಸ್. ಐ, ವಿ.ಐ.ಪಿ ಭದ್ರತೆ, ರಾಜ್ಯ ಗುಪ್ತವಾರ್ತೆ, ಬೆಂಗಳೂರು.	ಪಿ.ಎಸ್.ಐ ಸ್ಕ್ಯಾಂನಲ್ಲಿ ಅನುಮಾನಾಸ್ಪದ ವ್ಯಕ್ತಿಗಳ ಬಗ್ಗೆ ಮಾಹಿತಿ ಕಲೆ ಹಾಕಲು ಮತ್ತು ಜನವರಿ 2024 ರ ಮಾಹೆಯಲ್ಲಿ ನಡೆದ ಪಿ.ಎಸ್.ಐ ಮತ್ತು ವಾಣಿಜ್ಯ ತೆರಿಗೆ ಇಲಾಖೆಯ ಸಿ.ಟಿ.ಐ ಹುದ್ದೆಗಳ ನೇಮಕಾತಿಯ ಅಕ್ರಮದ ಅನುಮಾನಾಸ್ಪದ ವ್ಯಕ್ತಿಗಳ ಬಗ್ಗೆ ಮಾಹಿತಿ ಕಲೆ ಹಾಕುವ ಕಾರ್ಯಕೈಗೊಂಡಿದ್ದು, ನೀವು ಸಂಗ್ರಹಿಸುವ ಅಥವಾ ಸಂಗ್ರಹಿಸಿದ ಮಾಹಿತಿಗಳ ವಿಷಯವನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ಆಗಿಂದ್ದಾಗೆ ತರದೇ, ಸಾಮಾಜಿಕ ಜಾಲತಾಣಗಳಲ್ಲಿ ನಿಮ್ಮ ಬಗ್ಗೆ ಮಾಹಿತಿ ಬಿತ್ತರಗೊಂಡ ನಂತರ, ಈ ಘಟನೆಯಿಂದ ನಿಮಗೆ ಸಮಸ್ಯೆ ಎದುರಾಗಬಹುದು ಎಂದು ಭಾವಿಸಿ, ನಿಮ್ಮ ಮೇಲಿನ ಆರೋಪದಿಂದ ತಪ್ಪಿಸಿಕೊಳ್ಳುವ ದುರುದ್ದೇಶದಿಂದ ನೀವು ತಡವಾಗಿ ಹಿರಿಯ ಅಧಿಕಾರಿಗಳ ಗಮನಕ್ಕೆ ಮಾಹಿತಿ ತಿಳಿಸಿರುವುದಾಗಿ ಕಂಡು ಬಂದಿರುತ್ತದೆ.	06.02.2024	22.04.2024	ಲೋಪ ರುಜುವಾತಾಗಿರುತ್ತದೆ.	ಸದರಿಯವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರರದ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ, ಒಂದು (01) ವರ್ಷದ ಕಾಲ ಮುಂದೂಡಲಾಗಿದೆ ಮತ್ತು ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಆದೇಸಿಲಾಗಿದೆ.	-	-
03	ಶ್ರೀ ಸಾಗರ್ , ಪಿ.ಎಸ್.ಐ,	ಸದರಿಯವರು ಕರ್ತವ್ಯಕ್ಕೆ	06.06.2024	18.10.2024	ಲೋಪ	ಸದರಿಯವರಿಗೆ ವಾಗ್ದಂಡನೆ	-	-

	ರಾಜ್ಯ ಗುಪ್ತವಾರ್ತೆ, ರಾಯಚೂರು ಘಟಕ	ಅನಧಿಕೃತವಾಗಿ ಗೈರು ಹಾಜರಾಗಿರುವುದು ಕಂಡುಬಂದಿರುತ್ತದೆ.			ರುಜುವಾತಾಗಿರುತ್ತದೆ.	ವಿಧಿಸಲಾಗಿದೆ ಮತ್ತು ಸದರಿಯವರ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಮತ್ತು ಗೈರು ಹಾಜರಾದ ಅವಧಿಯನ್ನು ವೇತನ ರಹಿತ ರಜೆಯೆಂದು ಆದೇಶಿಸಲಾಗಿದೆ.		
04	ಶ್ರೀ ಸಿದ್ದರಾಮಪ್ಪ, ಹೆಚ್.ಸಿ, ವಿಐಪಿ ಭದ್ರತೆ, ರಾಜ್ಯ ಗುಪ್ತವಾರ್ತೆ, ಬೆಂಗಳೂರು	ಮಾನ್ಯ ಮುಖ್ಯ ಮಂತ್ರಿಗಳ ಭದ್ರತಾ ಕರ್ತವ್ಯದಲ್ಲಿ ಲೋಪ ವೆಸಗಿರುವುದು ಕಂಡು ಬಂದಿರುತ್ತದೆ.	18.04.2024	29.04.2024	ಲೋಪ ರುಜುವಾತಾಗಿರುತ್ತದೆ.	ಸದರಿಯವರಿಗೆ ವಾಗ್ದಂಡನೆ ವಿಧಿಸಲಾಗಿದೆ ಮತ್ತು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದು ಆದೇಶಿಸಲಾಗಿದೆ.	-	-
05	ಶ್ರೀ ರಂಜಿತ್, ಹೆಚ್.ಸಿ, ವಿಐಪಿ ಭದ್ರತೆ, ರಾಜ್ಯ ಗುಪ್ತವಾರ್ತೆ, ಬೆಂಗಳೂರು	ಮಾನ್ಯ ಮುಖ್ಯ ಮಂತ್ರಿಗಳ ಭದ್ರತಾ ಕರ್ತವ್ಯದಲ್ಲಿ ಲೋಪ ವೆಸಗಿರುವುದು ಕಂಡು ಬಂದಿರುತ್ತದೆ.	18.04.2024	29.04.2024	ಲೋಪ ರುಜುವಾತಾಗಿರುತ್ತದೆ.	ಸದರಿಯವರಿಗೆ ವಾಗ್ದಂಡನೆ ವಿಧಿಸಲಾಗಿದೆ ಮತ್ತು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದು ಆದೇಶಿಸಲಾಗಿದೆ.	-	-
06	ಶ್ರೀ ಸಿ.ಮಂಜುನಾಥ್, ಹೆಚ್.ಸಿ, ವಿಐಪಿ ಭದ್ರತೆ, ರಾಜ್ಯ ಗುಪ್ತವಾರ್ತೆ, ಬೆಂಗಳೂರು	ಮಾನ್ಯ ಮುಖ್ಯ ಮಂತ್ರಿಗಳ ಭದ್ರತಾ ಕರ್ತವ್ಯದಲ್ಲಿ ಲೋಪ ವೆಸಗಿರುವುದು ಕಂಡು ಬಂದಿರುತ್ತದೆ.	18.04.2024	29.04.2024	ಲೋಪ ರುಜುವಾತಾಗಿರುತ್ತದೆ.	ಸದರಿಯವರಿಗೆ ವಾಗ್ದಂಡನೆ ವಿಧಿಸಲಾಗಿದೆ ಮತ್ತು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದು ಆದೇಶಿಸಲಾಗಿದೆ.	-	-
07	ಶ್ರೀ ಕಿರಣ್ ಬಡಿಗೇರ, ಪಿ.ಸಿ, ವಿಐಪಿ ಭದ್ರತೆ, ರಾಜ್ಯ ಗುಪ್ತವಾರ್ತೆ, ಬೆಂಗಳೂರು	ಮಾನ್ಯ ಮುಖ್ಯ ಮಂತ್ರಿಗಳ ಭದ್ರತಾ ಕರ್ತವ್ಯದಲ್ಲಿ ಲೋಪ ವೆಸಗಿರುವುದು ಕಂಡು ಬಂದಿರುತ್ತದೆ.	18.04.2024	29.04.2024	ಲೋಪ ರುಜುವಾತಾಗಿರುತ್ತದೆ.	ಸದರಿಯವರಿಗೆ ವಾಗ್ದಂಡನೆ ವಿಧಿಸಲಾಗಿದೆ ಮತ್ತು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದು ಆದೇಶಿಸಲಾಗಿದೆ.	-	-

ಕರ್ನಾಟಕ ಸರ್ಕಾರ

ಪೊಲೀಸ್ ಇಲಾಖೆ

ಸಂಖ್ಯೆ: ಹೆಚ್‌ಆರ್‌ಎಂ–1(5)/69/2025–26

ಮಹಾನಿರ್ದೇಶಕರು ಮತ್ತು ಆರಕ್ಷಕ
ಮಹಾನಿರೀಕ್ಷಕರವರ ಕಛೇರಿ,
ನೃಪತುಂಗ ರಸ್ತೆ, ಬೆಂಗಳೂರು,
ದಿನಾಂಕ:೩೫.01.2026.

ಗೆ,
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು
ಒಳಾಡಳಿತ ಇಲಾಖೆ, ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ. ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 403 ಕ್ಕೆ ಉತ್ತರಿಸುವ ಕುರಿತು

* * *

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ. ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 403 ಕ್ಕೆ ಉತ್ತರ ಕೆಳಕಂಡಂತಿರುತ್ತದೆ.

ಕ್ರಸಂ	ಪ್ರಶ್ನೆ	ಉತ್ತರ
ಅ)	ಕಳೆದ 2 ವರ್ಷಗಳಲ್ಲಿ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ಲೋಪ ಮತ್ತು ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಅಮಾನತುಗೊಂಡವರ ಸಂಖ್ಯೆ ಎಷ್ಟು; (ಅವರುಗಳ ಹುದ್ದೆಗಳೊಂದಿಗೆ ಪ್ರಕರಣಗಳ ವಿವರ, ಜಿಲ್ಲಾವಾರು ವಿವರಗಳೊಂದಿಗೆ ಮಾಹಿತಿ ಒದಗಿಸುವುದು)	ಕಳೆದ 2 ವರ್ಷಗಳಲ್ಲಿ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ಲೋಪ ಮತ್ತು ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಅಮಾನತ್ತುಗೊಂಡ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ (ಪಿ.ಸಿ. ಯಿಂದ ಡಿವೈಎಸ್‌ಪಿ) ಅಂಕಿ ಅಂಶವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.
ಆ)	ಆ ಪೈಕಿ ಲೋಪ ರುಜುವಾತು ಆಗಿರುವ ಪ್ರಕರಣಗಳೆಷ್ಟು? ಅವರುಗಳ ಮೇಲೆ ಕೈಗೊಂಡ ಕಠಿಣ ಕಾನೂನು ಕ್ರಮಗಳೇನು? (ವಿವರಗಳೊಂದಿಗೆ ಮಾಹಿತಿ ಒದಗಿಸುವುದು)	ಅನುಬಂಧ–1 ರಲ್ಲಿ ನಮೂದಿಸಿರುವ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಬಹುತೇಕ ಪ್ರಕರಣಗಳಲ್ಲಿ ತನಿಖೆ/ ಇಲಾಖಾ ವಿಚಾರಣೆ ಪ್ರಗತಿಯಲ್ಲಿದ್ದು, ಉಳಿದಂತೆ ಶಿಸ್ತು ಕ್ರಮ ಕೈಗೊಂಡು ಕರ್ತವ್ಯ ಲೋಪ ರುಜುವಾತು ಆಗಿರುವ ಪ್ರಕರಣಗಳ ಮಾಹಿತಿಯನ್ನು ಅನುಬಂಧ–2 ಮತ್ತು ಅನುಬಂಧ–3 ರಲ್ಲಿ ಲಗತ್ತಿಸಿದೆ.
ಇ)	ಶಿಸ್ತು/ ದಕ್ಷತೆ/ ಪ್ರಮಾಣಿಕತೆಯಿಂದ ಇರಬೇಕಾದ ಪೊಲೀಸರು ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಕರ್ತವ್ಯ ಲೋಪ ಎದುರಿಸಲು ಕಾರಣಗಳೇನು; ಇದನ್ನು ನಿವಾರಿಸಲು ಇಲಾಖೆಯು ಕೈಗೊಂಡ ಕ್ರಮಗಳೇನು? (ವಿವರಗಳೊಂದಿಗೆ ಮಾಹಿತಿ ಒದಗಿಸಿ)	ಒಂದೇ ಸ್ಥಳದಲ್ಲಿ ಅಧಿಕ ವರ್ಷಗಳಿಂದ ಕಾರ್ಯ ನಿರ್ವಹಿಸಿ, ಸಹವಾಸ ಪ್ರೇರಣೆ, ಅತೀವಿಶ್ವಾಸ, ವೈಯಕ್ತಿಕ ಲಾಭ, ದುರಾಸೆ ಇತ್ಯಾದಿಗಳಿಂದಾಗಿ ಶಿಸ್ತು ಇಲಾಖೆಯಲ್ಲಿನ ಸಿಬ್ಬಂದಿಗಳ ಪೈಕಿ ಕೆಲವು ಸಿಬ್ಬಂದಿಗಳು ಭ್ರಷ್ಟಾಚಾರದಡಿ ಸಿಲುಕಿರುವ ಸಾಧ್ಯತೆಗಳ ಇರುತ್ತದೆ. ಇಲಾಖೆಯಲ್ಲಿ ಕರ್ತವ್ಯ ನಿರ್ವಹಣೆಯ ಕುರಿತು ನಿರಂತರವಾಗಿ ತರಬೇತಿ/ ಕಾರ್ಯಾಗಾರಗಳನ್ನು ಕೈಗೊಂಡು, ಕರ್ತವ್ಯ ನಿರ್ವಹಣೆ ಬಗ್ಗೆ ಹಾಗೂ ನಡತೆಯ ಬಗ್ಗೆ ತಿಳುವಳಿಕೆಗಳನ್ನು ನೀಡಲಾಗುತ್ತಿರುತ್ತದೆ. ಈ ಬಗ್ಗೆ ಕಛೇರಿ ಜ್ಞಾಪನ ಸಂಖ್ಯೆ: ಹೆಚ್‌ಆರ್‌ಎಂ–1(8)/55/2023–24, ದಿನಾಂಕ: 05.12.2025 ರಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ದುರ್ನಡತೆಯನ್ನು ಸಮರ್ಥವಾಗಿ ತಡೆಯುವ ಬಗ್ಗೆ ಎಲ್ಲಾ ಘಟಕಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ)

...2

		ಅಲ್ಲದೇ ಒಂದೇ ಸ್ಥಳದಲ್ಲಿ ಅಧಿಕ ಸಮಯದಿಂದ ಕಾರ್ಯನಿರ್ವಹಿಸುವ ಅಧಿಕಾರಿ/ ಸಿಬ್ಬಂದಿಗಳ ಸ್ಥಾನಪಲ್ಲಟನೆಯಂತಹ ಕ್ರಮಗಳನ್ನು ಹಾಗೂ ಶಿಸ್ತು ಕ್ರಮಗಳನ್ನು ಅನುಸರಿಸುವ ಕ್ರಮಗಳನ್ನು ಜರುಗಿಸಲಾಗುತ್ತಿರುತ್ತದೆ. ಮುಂದುವರೆದು, ಸಮಾಜದಲ್ಲಿ ಪೊಲೀಸ್ ಇಲಾಖೆಯ ಬಗ್ಗೆ ಉತ್ತಮ ಅಭಿಪ್ರಾಯವನ್ನು ಮೂಡಿಸಲು ಪೊಲೀಸ್ ಅಧಿಕಾರಿ / ಸಿಬ್ಬಂದಿಯವರುಗಳು ಕರ್ತವ್ಯ ನಿರ್ವಹಿಸುವಾಗ ಪಾರದರ್ಶಕತೆ, ಸೌಜನ್ಯ ವರ್ತನೆ ಮತ್ತು ನಿಷ್ಪೆಯನ್ನು ಕಾಯ್ದುಕೊಳ್ಳುವ ಬಗ್ಗೆ ಈಗಾಗಲೇ ಈ ಕಛೇರಿಯಿಂದ ಕಾಲಕಾಲಕ್ಕೆ ಸಲಹೆ ಸೂಚನೆಗಳನ್ನು ನೀಡಲಾಗಿದ್ದು, ಇತ್ತೀಚೆಗೂ ಕೂಡ ದಿನಾಂಕ: 21.10.2025 ರ ಸುತ್ತೋಲೆಯಲ್ಲಿ ಸೂಕ್ತ ಮಾರ್ಗ ಸೂಚಿಗಳನ್ನು ಹೊರಡಿಸಲಾಗಿದೆ. (ಪ್ರತಿ ಲಗತ್ತಿಸಿದೆ)

"ಡಿಜಿಪಿ ಮತ್ತು ಐಜಿಪಿ ರವರಿಂದ ಅನುಮೋದಿಸಲ್ಪಪಟ್ಟಿದೆ"

ತಮ್ಮ ವಿಶ್ವಾಸಿ,

(ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಐ.ಪಿ.ಎಸ್)
ಡಿ.ಐ.ಜಿ.ಪಿ (ಆಡಳಿತ)
ಮಹಾ ನಿರ್ದೇಶಕರು ಮತ್ತು ಆರಕ್ಷಕ
ಮಹಾ ನಿರೀಕ್ಷಕರು ರವರ ಪರವಾಗಿ.

ಪ್ರತಿಯನ್ನು ಮಾಹಿತಿಗಾಗಿ:
ಶಾಖಾಧೀಕ್ಷಕರು, ಪಿ & ಸಿ ಶಾಖೆ, ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು.

ಡೈರಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್
ಆಫ್ ಪೊಲೀಸ್‌ರವರ ಕಾರ್ಯಾಲಯ
ಕರ್ನಾಟಕ ರಾಜ್ಯ, ನೃಪತುಂಗ ರಸ್ತೆ
ಬೆಂಗಳೂರು - ೫೬೦ ೦೦೧.

ಸಂ: ಹೆಚ್‌ಆರ್‌ಎಂ-1(8)/55/2023-24

ಮಹಾನಿರ್ದೇಶಕರು ಹಾಗೂ,
ಪೊಲೀಸ್ ಮಹಾನಿರೀಕ್ಷಕರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು.
ದಿನಾಂಕ: 05.12.2025.

ಜ್ಞಾಪನ

ವಿಷಯ: ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ದುರ್ನಡತೆಯನ್ನು ಸಮರ್ಥವಾಗಿ ತಡೆಯುವ ಬಗ್ಗೆ.

* * *

ಇತ್ತೀಚೆಗೆ ಕೆಲವು ದರೋಡೆ, ಕಳ್ಳತನ ಮತ್ತು ವಂಚನೆ ಕೃತ್ಯಗಳಲ್ಲಿ ಕೆಲವು ಪೊಲೀಸ್ ಸಿಬ್ಬಂದಿಯವರುಗಳ ಹೆಸರುಗಳು ತಳಕು ಹಾಕಿಕೊಂಡಿರುವುದು ತೀರಾ ಕಳವಳಕಾರಿ ಬೆಳವಣಿಗೆಯಾಗಿದೆ. ಇಂತಹ ಪ್ರವೃತ್ತಿಗಳು ಪೊಲೀಸ್ ಇಲಾಖೆಯ ಮೇಲಿನ ವಿಶ್ವಾಸಾರ್ಹತೆಗೆ ಧಕ್ಕೆಯಾಗುವುದರೊಂದಿಗೆ ಇಲಾಖೆಯನ್ನು ಅಪಕೀರ್ತಿಗೆ ಗುರಿ ಮಾಡುತ್ತವೆ. ಈ ರೀತಿಯ ದುಷ್ಕೃತ್ಯಗಳು ಸಾರ್ವಜನಿಕರಿಗೆ ಪೊಲೀಸರ ಮೇಲಿನ ನಂಬಿಕೆಯನ್ನು ಕುಂದಿಸುವುದಲ್ಲದೆ, ಕಾನೂನು ಜಾರಿಯ ಸಂಪೂರ್ಣ ವ್ಯವಸ್ಥೆಯ ಮೂಲ ಸಿದ್ಧಾಂತಗಳನ್ನೇ ಸಂಶಯಾಸ್ಪದವಾಗಿ ನೋಡುವಂತಹ ಸನ್ನಿವೇಶವನ್ನು ನಿರ್ಮಾಣ ಮಾಡುತ್ತದೆ. ಆದ್ದರಿಂದ ಇಂತಹ ಘಟನೆಗಳನ್ನು ಸಮರ್ಥವಾಗಿ ತಡೆಗಟ್ಟಿ, ಹೊಣೆಗಾರಿಕೆಯನ್ನು ನಿಗಧಿಪಡಿಸುವ ಮೂಲಕ ಪೊಲೀಸ್ ಇಲಾಖೆಯ ಸಮಗ್ರತೆಯನ್ನು ಪುನರ್ನಿರ್ಮಿಸುವ ಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆ ಇದೆ.

ಇತ್ತೀಚೆಗೆ ದಾವಣಗೆರೆಯಲ್ಲಿ ಒಬ್ಬ ಚಿನ್ನದ ವ್ಯಾಪಾರಿಯ ಮೇಲೆ ದರೋಡೆ ನಡೆಸಿದ ಆರೋಪದಲ್ಲಿ ಇಬ್ಬರು ಪೊಲೀಸ್ ಉಪನಿರೀಕ್ಷಕರನ್ನು ದಸ್ತಗಿರಿ ಮಾಡಲಾಗಿದೆ. ಅವರು ಸಂತ್ರಸ್ತ ವ್ಯಕ್ತಿಗೆ ತಾವಿಬ್ಬರೂ ಐಜಿ ಸ್ಕ್ವಾಡ್ ಅಧಿಕಾರಿಗಳೆಂದು ಸುಳ್ಳು ಹೇಳಿ, ಬಸ್ ನಿಲ್ದಾಣದಲ್ಲಿ ಆತನನ್ನು ವಶಕ್ಕೆ ಪಡೆದುಕೊಂಡು, ನಕಲಿ ಬಂದೂಕಿನಿಂದ ಸಂತ್ರಸ್ತ ವ್ಯಕ್ತಿಯನ್ನು ಬೆದರಿಸಿ, ಆತನಿಂದ ಸುಮಾರು 80 ಗ್ರಾಂ ಬೆಲೆಬಾಳುವ ಚಿನ್ನಾಭರಣಗಳನ್ನು ದೋಚಿ, ನಂತರ ಅದೇ ಬಸ್ ನಿಲ್ದಾಣದಲ್ಲಿ ಆತನನ್ನು ಬಿಟ್ಟು ಹೋಗಿರುತ್ತಾರೆ. ಸಂತ್ರಸ್ತ ವ್ಯಕ್ತಿಯ ಆಪ್ತ ವಲಯದ ಅಕ್ಕಸಾಲಿಗರೊಬ್ಬರ ಸಹಾಯದೊಂದಿಗೆ ಒಳಸಂಚು ರೂಪಿಸುವ ಮೂಲಕ ಈ ದರೋಡೆಯನ್ನು ಯೋಜಿತವಾಗಿತ್ತು ಎನ್ನಲಾಗಿದೆ.

ಇತ್ತೀಚೆಗೆ ಬೆಂಗಳೂರು ನಗರದಲ್ಲಿ ನಗದು ನಿರ್ವಹಣಾ ಸೇವೆಯ (ಕ್ಯಾಷ್ ಮ್ಯಾನೇಜ್‌ಮೆಂಟ್ ಸರ್ವಿಸಸ್) ಮಾಜಿ ಸಿಬ್ಬಂದಿಯೊಂದಿಗೆ ಅತ್ಯಂತ ಕರಾರುವಕ್ಕಾಗಿ ಒಳಸಂಚು ರೂಪಿಸಿ ಕೋಟ್ಯಂತರ ರೂಪಾಯಿಗಳ ದರೋಡೆ ಮಾಡಿರುವ ಪ್ರಕರಣದಲ್ಲಿ ಬೆಂಗಳೂರು ನಗರದ ಗೋವಿಂದಪುರ ಪೊಲೀಸ್ ಠಾಣೆಯ ಪೊಲೀಸ್ ಕಾನ್ಸ್‌ಟೇಬಲ್ ಒಬ್ಬಾತನನ್ನು ಬಂಧಿಸಲಾಗಿದೆ. ಅತ್ಯಂತ ಎಚ್ಚರಿಕೆಯಿಂದ ಒಳಸಂಚು

...2

ರೂಪಿಸಿ, ಅತಿ ಹೆಚ್ಚು ಮೌಲ್ಯದ ನಗದು ದರೋಡೆ ಕೃತ್ಯದಲ್ಲಿ ಪೊಲೀಸರ ಸಹಭಾಗಿತ್ವವಿರುವ ಈ ಪ್ರಕರಣವು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿರುತ್ತದೆ.

ಅದೇ ರೀತಿ ಬಿ.ಪಿ.ಓ ಸಂಸ್ಥೆಯ ಮ್ಯಾನೇಜರ್‌ನ ಅಪಹರಣ, ಹಣದ ಸುಲಿಗೆ ಯತ್ನದ ಪ್ರಕರಣದಲ್ಲಿ ಮಾಲೂರಿನ ಹೆಡ್ ಕಾನ್ಸ್‌ಟೇಬಲ್ ಒಬ್ಬರನ್ನು ಶಂಕಿಸಿ, ಆತನನ್ನು ದಸ್ತಗಿರಿ ಮಾಡಲಾಗಿದೆ.

ಇಂತಹ ಅಪರಾಧ ಪ್ರಕರಣಗಳಲ್ಲಿ ಮತ್ತು ಅಕ್ರಮ ಚಟುವಟಿಕೆಗಳಲ್ಲಿ ಪೊಲೀಸರು ಒಳಗೊಂಡಿರುವುದು ಯಾವುದೇ ಕಾರಣಕ್ಕೂ ಒಪ್ಪಲಾಗದು. ಇಡೀ ಪೊಲೀಸ್ ಇಲಾಖೆಯ ಅಪಕೀರ್ತಿಗೆ ಕಾರಣವಾಗುವ ಇಂತಹ ಸನ್ನಿವೇಶಗಳು ಸಾರ್ವಜನಿಕರಲ್ಲಿ ಪೊಲೀಸರ ಮೇಲಿನ ವಿಶ್ವಾಸಾರ್ಹತೆಗೆ ತೀವ್ರತರವಾದ ಹಾನಿ ಮಾಡುತ್ತವೆ ಮತ್ತು ಕಾನೂನು ಜಾರಿಯ ಸಂಪೂರ್ಣ ವ್ಯವಸ್ಥೆಯ ಮೂಲ ಸಿದ್ಧಾಂತಗಳನ್ನೇ ಸಂಶಯಾಸ್ಪದವಾಗಿ ನೋಡುವಂತಹ ಸನ್ನಿವೇಶವನ್ನು ನಿರ್ಮಾಣ ಮಾಡುತ್ತದೆ.

ಅಪರಾಧ ಕೃತ್ಯಗಳಲ್ಲಿ ತೊಡಗಿಕೊಳ್ಳುವ ಪೊಲೀಸ್ ಇಲಾಖೆಯ ಪ್ರತಿಯೊಬ್ಬ ಅಧಿಕಾರಿ/ಸಿಬ್ಬಂದಿಯವರುಗಳಿಗೆ ತೀವ್ರತರವಾದ ಶಿಸ್ತಿನ ಕ್ರಮಗಳನ್ನು ಎದುರಿಸಬೇಕಾಗುತ್ತದೆ ಎಂಬ ಕಠಿಣ ಎಚ್ಚರಿಕೆಯನ್ನು ಈ ಜ್ಞಾಪನದ ಮೂಲಕ ನೀಡಲಾಗಿದೆ.

ಘಟಕಾಧಿಕಾರಿಗಳು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದು:-

- ಘಟಕದ ಎಲ್ಲಾ ಅಧಿಕಾರಿಗಳು ಅಧೀನದ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರುಗಳ ಪೂರ್ವಾಪರಗಳ ಪರಿಶೀಲನೆ ಮತ್ತು ಸಮಗ್ರತೆಯ ಮೌಲ್ಯಮಾಪನಗಳನ್ನು ನಿಯತವಾಗಿ ನಡೆಸುವುದು.
- ನೈತಿಕ ಮಾನದಂಡಗಳು, ಕಾನೂನುಬದ್ಧ ಕರ್ತವ್ಯಗಳು, ಮತ್ತು ಭ್ರಷ್ಟಾಚಾರ/ಅಪರಾಧಗಳ ಗಂಭೀರ ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವುದು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ದುರ್ವರ್ತನೆ, ಅಕ್ರಮ ಚಟುವಟಿಕೆಗಳು ಹಾಗೂ ಅಪರಾಧಿಕ ಕೃತ್ಯಗಳಲ್ಲಿ ತೊಡಗಿರುವ ಮಾಹಿತಿಗಳನ್ನು ತಕ್ಷಣವೇ ಪೊಲೀಸ್ ಪ್ರಧಾನ ಕಛೇರಿಗೆ ವರದಿ ಮಾಡುವುದು.
- ಇಲಾಖೆಯ ಘನತೆಯನ್ನು ಕಾಪಾಡುವ ಹೊಣೆಗಾರಿಕೆ ಮತ್ತು ಸಮಗ್ರತೆಯ ಸಂಸ್ಕೃತಿಯು ಎಲ್ಲಾ ಹಂತದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಸಮಾನ ಹೊಣೆಗಾರಿಕೆ ಎಂಬುದನ್ನು ಸಾರಿ ಹೇಳುವುದು.

...3

- ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಮನೋಬಲ ಕಗ್ಗುವಿಕೆಯನ್ನು ಮತ್ತು ಇತರ ನೈತಿಕ ಲೋಪದೋಷಗಳಿಗೆ ಕಾರಣವಾಗುವ ಅಂಶಗಳಿಗೆ ಸೂಕ್ತವಾಗಿ ಮತ್ತು ಸೂಕ್ಷ್ಮವಾಗಿ ಸ್ಪಂದಿಸಿ, ಪರಿಹರಿಸಲು ಅಗತ್ಯ ಮಾರ್ಗದರ್ಶನ ಮತ್ತು ಸಲಹಾ ಕಾರ್ಯಕ್ರಮಗಳನ್ನು ಉತ್ತೇಜಿಸುವುದು.
- ಪ್ರಸ್ತುತ ಜಾರಿಯಲ್ಲಿರುವ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು ಮತ್ತು ಈ ಸಂಹಿತೆಯ ಅಡ್ಡದಾರಿಗಳಿಗೆ ಆಸ್ಪದವಾಗದಂತೆ ಕ್ರಮವಹಿಸುವುದು.

ಇಲಾಖೆಯಲ್ಲಿ ದುರ್ನಡತೆಯನ್ನು ತಡೆಯುವ ಮೇಲ್ಕಂಡ ಎಲ್ಲಾ ಕ್ರಮಗಳನ್ನು ಸ್ವಯಂಪ್ರೇರಿತರಾಗಿ ಅನುಷ್ಠಾನಗೊಳಿಸುವಲ್ಲಿ ವಿಫಲರಾಗುವ ಘಟಕಾಧಿಕಾರಿಗಳ ವಿರುದ್ಧ ಘೋರ ನಿರ್ಲಕ್ಷತೆ ಎಂದು ಪರಿಗಣಿಸಿ ಅವರುಗಳನ್ನು ಇಲಾಖಾ ಶಿಸ್ತಿನ ಕ್ರಮಕ್ಕೆ ಗುರಿಪಡಿಸಲಾಗುವುದು. ಪೊಲೀಸ್ ಇಲಾಖೆಯ ಘನತೆ, ಗೌರವ ಮತ್ತು ಸಮಗ್ರತೆಗಳಲ್ಲಿನ ರಾಜಿ ಸಮಂಜಸವಲ್ಲ ಮತ್ತು ಸಹಿಸಲು ಸಾಧ್ಯವಿಲ್ಲ.

ಪೊಲೀಸ್ ಇಲಾಖೆಯ ಹಿರಿಮೆ ಮತ್ತು ಗೌರವಾದರಗಳನ್ನು ಹೆಚ್ಚಿಸುವ ಶಿಸ್ತುಬದ್ಧ ಜವಾಬ್ದಾರಿಗಳು ಘಟಕಾಧಿಕಾರಿಗಳದ್ದಾಗಿವೆ. ಈ ಸಂಸ್ಥೆಯ ಗೌರವವನ್ನು ಕಾಪಾಡುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ ಎಂಬುದನ್ನು ನಾವಾರೂ ಮರೆಯಕೂಡದು.

(ಡಾ॥ ಎಂ. ಎ. ಸಲೀಂ ಐ.ಪಿ.ಎಸ್)
ಮಹಾನಿರ್ದೇಶಕರು ಹಾಗೂ
ಪೊಲೀಸ್ ಮಹಾನಿರೀಕ್ಷಕರು,
ಕರ್ನಾಟಕ ರಾಜ್ಯ, ಬೆಂಗಳೂರು

ಗೆ:

1. ಎಲ್ಲಾ ಪೊಲೀಸ್ ಆಯುಕ್ತರು.
2. ಎಲ್ಲಾ ವಲಯದ ಪೊಲೀಸ್ ಮಹಾನಿರೀಕ್ಷಕರು.
3. ಎಲ್ಲಾ ಜಿಲ್ಲೆಗಳ ಪೊಲೀಸ್ ಅಧೀಕ್ಷಕರು.

DGP CONTROL ROOM, BENGALURU
O/o. the DG & ICP, N.T.Road, Bengaluru
Out Messages Received for Transmission
NR No. 502 TIME 1735
Date 05/12/2014 Sign

ಸಂ.ಕಾಮತ್ತುಸು/ಮಿಶ್ರ/167/2025

ಮಹಾನಿರ್ದೇಶಕರು ಮತ್ತು
ಪೊಲೀಸ್ ಮಹಾನಿರೀಕ್ಷಕರವರ ಕಛೇರಿ,
ಕರ್ನಾಟಕ ರಾಜ್ಯ, ನೃಪತುಂಗ ರಸ್ತೆ,
ಬೆಂಗಳೂರು, ದಿನಾಂಕ 21.10.2025.

ಸುತ್ತೋಲೆ

ವಿಷಯ: ಸಮಾಜದಲ್ಲಿ ಪೊಲೀಸ್ ಇಲಾಖೆಯ ಬಗ್ಗೆ ಉತ್ತಮ ಅಭಿಪ್ರಾಯವನ್ನು ಮೂಡಿಸಲು, ಪೊಲೀಸ್ ಅಧಿಕಾರಿ / ಸಿಬ್ಬಂದಿಯವರುಗಳು ಕರ್ತವ್ಯ ನಿರ್ವಹಿಸುವಾಗ ಪಾರದರ್ಶಕತೆ, ಸೌಜನ್ಯದ ವರ್ತನೆ ಮತ್ತು ನಿಷ್ಠೆಯನ್ನು ಕಾಯ್ದುಕೊಳ್ಳುವ ಬಗ್ಗೆ.

** ** **

ಪೊಲೀಸ್ ಅಧಿಕಾರಿಗಳು ಸಾರ್ವಜನಿಕರೊಂದಿಗೆ ವರ್ತಿಸುವ ರೀತಿಯು ಪರಿಣಾಮಕಾರಿ ಕಾನೂನು ಜಾರಿ ಮತ್ತು ಸಮುದಾಯದ ಜೊತೆಗಿನ ಉತ್ತಮ ಸಂಬಂಧವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಅತ್ಯಂತ ಮುಖ್ಯವಾಗಿದೆ. ಪೊಲೀಸ್ ಅಧಿಕಾರಿಗಳು ತಮ್ಮ ಅಧಿಕಾರವನ್ನು ಚಲಾಯಿಸುವಾಗ ನಾಗರೀಕರೊಂದಿಗೆ ಸೌಜನ್ಯದಿಂದ ಮತ್ತು ಗೌರವದಿಂದ ವರ್ತಿಸಬೇಕು. ಪೊಲೀಸರ ನಡವಳಿಕೆಯಲ್ಲಿ ಸೌಜನ್ಯ ಮತ್ತು ಘನತೆ ಎದ್ದು ಕಾಣಬೇಕು. ಸಕಾರಾತ್ಮಕ ಮತ್ತು ವೃತ್ತಿಪರ ನಡವಳಿಕೆಯು ಸಾರ್ವಜನಿಕರಲ್ಲಿ ಪೊಲೀಸ್ ಇಲಾಖೆಯ ಮೇಲಿನ ನಂಬಿಕೆ ಮತ್ತು ಸಹಕಾರವನ್ನು ಹೆಚ್ಚಿಸುತ್ತದೆ. ಪೊಲೀಸ್ ಅಧಿಕಾರಿಗಳ ಸಾರ್ವಜನಿಕರೊಂದಿಗಿನ ನಡವಳಿಕೆಯು ಅಪರಾಧ ತಡೆಗಟ್ಟುವಿಕೆ ಮತ್ತು ಅಪರಾಧ ನಿಯಂತ್ರಣ ಕಾರ್ಯವು ಹೆಚ್ಚು ಪರಿಣಾಮಕಾರಿಯಾಗುವಲ್ಲಿ ಸಹಕರಿಸುತ್ತದೆ. ಅಧಿಕಾರ ದುರುಪಯೋಗಪಡಿಸಿಕೊಂಡು ಸಾರ್ವಜನಿಕರ ಮೇಲೆ ಅನಗತ್ಯ ಬಲ ಪ್ರಯೋಗ ಮಾಡುವುದು ಅಥವಾ ದರ್ಪದಿಂದ ವರ್ತಿಸುವುದು ಇಲಾಖೆಯ ಘನತೆಗೆ ತಕ್ಕುದಾದ ನಡವಳಿಕೆಯಲ್ಲ. ನಾಗರೀಕರ ಹಕ್ಕುಗಳಿಗೆ ಗೌರವವನ್ನು ನೀಡುವುದು ಮತ್ತು ಸಂಯಮದಿಂದ ಅವರೊಡನೆ ವರ್ತಿಸುವುದು ಇಲಾಖೆಯ ಘನತೆಯನ್ನು ಹೆಚ್ಚಿಸಿ ಸಾರ್ವಜನಿಕರಲ್ಲಿ ಪೊಲೀಸರ ಬಗ್ಗೆ ಗೌರವ ಮೂಡುವಂತೆ ಮಾಡುತ್ತದೆ.

ಸಾರ್ವಜನಿಕರೊಂದಿಗಿನ ಎಲ್ಲಾ ವ್ಯವಹಾರಗಳಲ್ಲಿ ಎಲ್ಲಾ ಪೊಲೀಸ್ ಅಧಿಕಾರಿಗಳು ಗರಿಷ್ಠ ಮಟ್ಟದ ವೃತ್ತಿಪರತೆ, ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವಂತೆ ಸೂಚಿಸಲಾಗಿದೆ. ಪೊಲೀಸ್ ಇಲಾಖೆಯ ಮೇಲಿನ ಗೌರವ ಹಾಗೂ ನಂಬಿಕೆಗಳು ಸಮಗ್ರವಾಗಿ ಪ್ರತಿ ಅಧಿಕಾರಿಯು ಯಾವ ರೀತಿ

ನಡೆದುಕೊಳ್ಳುತ್ತಾನೆ ಎಂಬುದರ ಮೇಲೆ (ಸಮವಸ್ತ್ರ ಧರಿಸಿದ್ದಾಗ ಅಥವಾ ಮಫ್ತಿಯಲ್ಲಿರುವಾಗ) ಅವಲಂಬಿತವಾಗಿದೆ ಎಂಬುದನ್ನು ಮರೆಯಬಾರದು.

ಈ ನಿಟ್ಟಿನಲ್ಲಿ ಕೆಳಕಂಡ ಮಾರ್ಗಸೂಚಿಗಳನ್ನು ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಕಟ್ಟುನಿಟ್ಟಾಗಿ ಪಾಲಿಸುವುದು:

1. ಇಲಾಖೆಯ ಎಲ್ಲಾ ಅಧಿಕೃತ ವ್ಯವಹಾರಗಳು ಮತ್ತು ಕಾರ್ಯವಿಧಾನಗಳಲ್ಲಿ ಸಂಪೂರ್ಣ ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕು. ಪೊಲೀಸ್ ಠಾಣೆಗೆ ಭೇಟಿ ನೀಡುವ ಯಾವುದೇ ವ್ಯಕ್ತಿಯ ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆಯನ್ನು ಗಮನಿಸದೇ ಎಲ್ಲರನ್ನೂ ಸಮಾನವಾಗಿ ಪರಿಗಣಿಸಬೇಕು.

2. ಸಾರ್ವಜನಿಕರ ಕುಂದುಕೊರತೆಗಳನ್ನು ತಾಳ್ಮೆಯಿಂದ ಆಲಿಸಿ ಮತ್ತು ಕಾನೂನಿನ ಪ್ರಕಾರ ಅನಗತ್ಯ ಕಾಲವಿಳಂಬವಿಲ್ಲದೇ ದೂರುಗಳನ್ನು ದಾಖಲಿಸುವುದು.

3. ಸಾರ್ವಜನಿಕರೊಂದಿಗೆ ಮಾತನಾಡುವಾಗ ಒರಟು ಭಾಷೆ ಅಥವಾ ವರ್ತನೆಯನ್ನು ತೋರದೆ ಯಾವಾಗಲೂ ಸೌಜನ್ಯ ಮತ್ತು ಘನತೆಯಿಂದ ವರ್ತಿಸಿ ಕಾನೂನು ಜಾರಿಗೊಳಿಸುವಲ್ಲಿ ದೃಢತೆಯನ್ನು ಪ್ರದರ್ಶಿಸುವುದು.

4. ಯಾವುದೇ ಸಂದರ್ಭದಲ್ಲೂ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳಿಂದ, ಯಾವುದೇ ರೀತಿಯ ಬೇಡಿಕೆ ಇಡುವುದರಿಂದ ಅಥವಾ ಯಾವುದೇ ಅಕ್ರಮ ಸಹಾಯ/ಲಾಭವನ್ನು ಸ್ವೀಕರಿಸುವುದರಿಂದ ಸಂಪೂರ್ಣವಾಗಿ ದೂರವಿರಬೇಕು.

5. ಕರ್ತವ್ಯದ ಸಮಯದಲ್ಲಿ/ಕರ್ತವ್ಯ ಮುಗಿದ ನಂತರವೂ ನೈತಿಕವಾಗಿ ಇತರರಿಗೆ ಮಾದರಿಯಾಗುವಂತೆ ಇದ್ದು ಇಲಾಖೆಯ ನೀತಿ ನಿಯಮಗಳನ್ನು ಎತ್ತಿಹಿಡಿಯಬೇಕು.

6. ಸ್ಟೇಷನ್ ಹೌಸ್ ಡೈರಿಗಳು ಮತ್ತು ಕೇಸ್ ಫೈಲ್ ಗಳಲ್ಲಿ ನಿಖರ ಮತ್ತು ಇಂದೀಕರಿಸಿದ ದಾಖಲೆಗಳನ್ನು ಕಾಯ್ದುಕೊಳ್ಳಬೇಕು ಮತ್ತು ಸಮಗ್ರವಾಗಿ ನಿರ್ವಹಿಸಬೇಕು.

7. ತನಿಖಾ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದು ಮತ್ತು ಪ್ರತಿ ಹಂತದಲ್ಲೂ ಜವಾಬ್ದಾರಿಯಿಂದ ಕಾರ್ಯನಿರ್ವಹಣೆ ಮಾಡಬೇಕು. ಯಾವುದೇ ನಾಗರೀಕರಿಗೆ ಅನಗತ್ಯವಾಗಿ ತೊಂದರೆ ನೀಡಬಾರದು.

8. ಸಂತ್ರಸ್ಥರು, ಮಹಿಳೆಯರು, ಹಿರಿಯ ನಾಗರೀಕರು ಮತ್ತು ಮಕ್ಕಳೊಂದಿಗೆ ವಿಶೇಷ ಕಾಳಜಿಯಿಂದ ಮತ್ತು ಸೂಕ್ಷ್ಮತೆಯಿಂದ ವರ್ತಿಸಬೇಕು.

9. ಸಾರ್ವಜನಿಕರ ದೂರುಗಳ ಸ್ಥಿತಿ ಮತ್ತು ಬಾಕಿ ಇರುವ ಪ್ರಕರಣಗಳ ಕುರಿತು ನಾಗರೀಕರಿಗೆ ಮಾಹಿತಿ ನೀಡಬೇಕು. ಕರ್ತವ್ಯಕ್ಕೆ ಹಾಜರಾಗುವುದು ಮತ್ತು ಅಧಿಕೃತ ಕಾರ್ಯಗಳನ್ನು ನಿರ್ವಹಿಸುವಲ್ಲಿ ಶಿಸ್ತಿನಿಂದ ಸಮಯ ಪಾಲನೆ ಮಾಡಬೇಕು.

10. ಪೊಲೀಸ್–ಸಾರ್ವಜನಿಕ ಸಂವಹನದಲ್ಲಿ ನ್ಯಾಯಸಮ್ಮತೆಯನ್ನು ಎತ್ತಿಹಿಡಿಯಲು ಸಮವಸ್ತ್ರದ ಮೇಲೆ ಧರಿಸುವ ಕ್ಯಾಮೆರಾಗಳನ್ನು ಮತ್ತು ಲಭ್ಯವಿರುವ ತಂತ್ರಜ್ಞಾನಗಳನ್ನು ಜವಾಬ್ದಾರಿಯುತವಾಗಿ ಬಳಸಿಕೊಳ್ಳಬೇಕು.
11. ಎಲ್ಲಾ ಅಧಿಕೃತ ವಿಷಯಗಳಲ್ಲಿ ನ್ಯಾಯಾಂಗ ಮತ್ತು ಆಡಳಿತಾತ್ಮಕ ಅಧಿಕಾರಿಗಳಿಗೆ ಪೂರ್ಣ ಸಹಕಾರವನ್ನು ನೀಡಿ, ಶೋಧ, ಬಂಧನ ಅಥವಾ ವಿಚಾರಣೆಯ ಸಮಯದಲ್ಲಿ ಸಾರ್ವಜನಿಕರ ಖಾಸಗಿತನ ಮತ್ತು ಘನತೆಯನ್ನು ಗೌರವಿಸಿ, ಅಧಿಕಾರದ ದುರುಪಯೋಗ ಅಥವಾ ದೌರ್ಜನ್ಯದಿಂದ ದೂರವಿರಿ ಮತ್ತು ಸದ್ವರ್ತನೆಗೆ ಮಾದರಿಯಾಗಿರಿ.
12. ಸಮುದಾಯದಲ್ಲಿ ಸಕ್ರಿಯವಾಗಿ ಭಾಗವಹಿಸಿ ಮತ್ತು ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ, ಪಾರದರ್ಶಕ, ಕಾನೂನುಬದ್ಧ ಮತ್ತು ಸಹಾನುಭೂತಿಯ ಪೊಲೀಸಿಂಗ್ ಅಭ್ಯಾಸಗಳ ಮೂಲಕ ಸಾರ್ವಜನಿಕರ ವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದು.
13. ಪೊಲೀಸ್ ಕಾರ್ಯಗಳ ಮೇಲೆ ಪ್ರಭಾವ ಬೀರುವ ಅಥವಾ ಭ್ರಷ್ಟಗೊಳಿಸುವ ಯಾವುದೇ ಪ್ರಯತ್ನಗಳು ಕಂಡುಬಂದಲ್ಲಿ ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡುತ್ತಿರಿ.
14. ಬೇರೆ ಠಾಣಾ ವ್ಯಾಪ್ತಿಯ ದೂರು ಬಂದಲ್ಲಿ ದೂರುದಾರರನ್ನು ಸಂಬಂಧಿಸಿದ ಠಾಣೆಗೆ ಹೋಗಿ ದೂರು ನೀಡುವಂತೆ ಹೇಳದೇ, ಠಾಣೆಯಲ್ಲಿ ಶೂನ್ಯ ಪ್ರ.ವ. ವರದಿಯನ್ನು ದಾಖಲಿಸಿ ಆ ನಂತರ ವ್ಯಾಪ್ತಿಯ ಆಧಾರದ ಮೇಲೆ ಸಂಬಂಧಪಟ್ಟ ಠಾಣೆಗೆ ದೂರನ್ನು ವರ್ಗಾಯಿಸುವುದು.
15. ಮಹಿಳೆಯರನ್ನು ಸಂಜೆ 06:00 ಗಂಟೆಯ ನಂತರ ಪೊಲೀಸ್ ಠಾಣೆಗೆ ವಿಚಾರಣೆಗಾಗಿ ಅಥವಾ ಹೇಳಿಕೆಯನ್ನು ನೀಡಲು ಕರೆತರಬಾರದು.
16. ಮಹಿಳೆಯು ಒಂದು ವೇಳೆ ಸಂತ್ರಸ್ಥೆಯಾಗಿದ್ದಲ್ಲಿ ಆಕೆಯನ್ನು ಮಹಿಳಾ ಪೊಲೀಸ್ ಅಧಿಕಾರಿಯ ನೆರವಿನೊಂದಿಗೆ, ಮಹಿಳೆಯ ವಾಸದ ಸ್ಥಳ/ಮನೆಯ ಬಳಿಯಲ್ಲಿಯೇ ವಿಚಾರಣೆ ಮಾಡಬೇಕು.
17. ಕ್ರಿಮಿನಲ್ ಪ್ರಕರಣಗಳಲ್ಲಿ ಮಹಿಳೆಯರು ಭಾಗಿಯಾದಾಗ ಅವರನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಅವರಿಗೆ ಯಾವುದೇ ಅವಮಾನಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕು ಮತ್ತು ಅವರನ್ನು ಸಂಜೆ 06.00 ಗಂಟೆಯ ನಂತರ ಪೊಲೀಸ್ ಠಾಣೆಯಲ್ಲಿ ಇರಿಸಬಾರದು, ಬದಲಿಗೆ ಅವರನ್ನು ರಾಜ್ಯ ಗೃಹ (ಸ್ಟೇಟ್ ಹೋಮ್) ಆಶ್ರಯ ತಾಣಗಳಲ್ಲಿ ಇರಿಸಬೇಕು.
18. ಉತ್ತಮವಾಗಿ ನೀಟಾದ ಸಮವಸ್ತ್ರವನ್ನು/ಮಫ್ತಿ ಬಟ್ಟೆಗಳನ್ನು ಧರಿಸುವ ಪೊಲೀಸ್ ಅಧಿಕಾರಿಯು ಸಾರ್ವಜನಿಕರಿಂದ ಉತ್ತಮ ಗೌರವವನ್ನು ಪಡೆಯುತ್ತಾನೆ. ಅಧಿಕಾರಿ ಮತ್ತು ಸಿಬ್ಬಂದಿಗಳು ನೀಟಾದ Turn out ಹೊಂದಿರಬೇಕು. ಇದು ಪೊಲೀಸ್ ಅಧಿಕಾರಿಯ ವ್ಯಕ್ತಿತ್ವ ಹಾಗೂ ಕಾರ್ಯದಕ್ಷತೆಗಳನ್ನು

ಉತ್ತೇಜಿಸುತ್ತದೆ. ನೀಟಾದ ಸಮವಸ್ತ್ರವು ವೃತ್ತಿಪರತೆ ಮತ್ತು ಶಿಸ್ತಿನ ಪ್ರತಿಬಿಂಬ ಅಷ್ಟೇ ಅಲ್ಲ ಪರಿಣಾಮಕಾರಿ ಪೊಲೀಸ್ ಕಾರ್ಯನಿರ್ವಹಣೆಗೆ ಅತ್ಯಗತ್ಯ.

ಪ್ರತಿಯೊಬ್ಬ ಅಧಿಕಾರಿಯು ಸಾರ್ವಜನಿಕರ ವಿಶ್ವಾಸವು ಪೊಲೀಸ್ ಇಲಾಖೆಯ ಅತ್ಯಂತ ಮೌಲ್ಯಯುತ ಆಸ್ತಿಯೆಂಬುದನ್ನು ನೆನಪಿಟ್ಟುಕೊಳ್ಳಬೇಕು. ಈ ಸೂಚನೆಗಳಿಂದ ಯಾವುದೇ ವಿಚಲನವನ್ನು ಗಂಭೀರವಾಗಿ ಪರಿಗಣಿಸಲಾಗುವುದು ಮತ್ತು ಇಲಾಖಾ ನಿಯಮಗಳ ಪ್ರಕಾರ ವ್ಯವಹರಿಸಲಾಗುವುದು.

ಎಲ್ಲಾ ಘಟಕಾಧಿಕಾರಿಗಳು ಈ ಸುತ್ತೋಲೆಯ ಅಂಶಗಳನ್ನು ತಮ್ಮ ಅಧೀನದಲ್ಲಿ ಇರುವ ಎಲ್ಲಾ ಸಿಬ್ಬಂದಿಗಳಿಗೆ ತಿಳಿಸಬೇಕು ಮತ್ತು ಕಟ್ಟುನಿಟ್ಟಾದ ಅನುಸರಣೆಯನ್ನು ಖಚಿತಪಡಿಸಿಕೊಳ್ಳಬೇಕು.

13/10/25

(ಡಾ॥ ಎಂ.ಎ. ಸಲೀಂ, ಐ.ಪಿ.ಎಸ್)
ಮಹಾನಿರ್ದೇಶಕರು ಮತ್ತು
ಪೊಲೀಸ್ ಮಹಾನಿರೀಕ್ಷಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಪ್ರತಿ,
1) ಎಲ್ಲಾ ಪೊಲೀಸ್ ಆಯುಕ್ತರುಗಳಿಗೆ
2) ಎಲ್ಲಾ ವಲಯಾಧಿಕಾರಿಗಳಿಗೆ
3) ಎಲ್ಲಾ ಪೊಲೀಸ್ ಅಧೀಕ್ಷಕರುಗಳಿಗೆ

PART A2

Suspension due to other criminal charges against DySP

ಕ್ರ. ಸ	ಅಮಾನತ್ತಿನಲ್ಲಿರುವ ಅಧಿಕಾರಿಗಳು/ ಅಮಾನತ್ತುಗೊಂಡ ಸ್ಥಳ	ಪ್ರಕರಣದ ವಿವರ	ಅಮಾನತ್ತಿನ ಆದೇಶ ಸಂಖ್ಯೆ ಮತ್ತು ದಿನಾಂಕ	ಷರಾ
2024				
1.	ಶ್ರೀಧರ್ ಕೆ ಪೂಜಾರ, ಡಿವೈಎಸ್‌ಪಿ	ಸಿಸಿಬಿ ಪೊಲೀಸರು 1. ಕೆ.ಜಿ.ನಗರ ಪೊಲೀಸ್ ಠಾಣೆ ಮೊ.ಸಂ: 91/2020 2. ಕಾಟನ್ ಪೇಟೆ ಪೊಲೀಸ್ ಠಾಣೆ ಮೊ.ಸಂ: 153/2020 ಹಾಗೂ ಇತರೆ ಪ್ರಕರಣದಲ್ಲಿ ತನಿಖೆಯನ್ನು ಕೈಗೊಳ್ಳುವ ಸಮಯದಲ್ಲಿ ಆರೋಪಿಗಳ ಅಕ್ರಮ ಬಂಧನದಲ್ಲಿರಿಸಿಕೊಂಡಿರುವುದು, ಬಿಟ್ ಕಾಯಿನ್ ಕೇಸ್ **ಕ್ರಿಮಿನಲ್ ಪ್ರಕರಣ:** ಸಿಐಡಿ, ಸೈಬರ್ ಕ್ರೈಂ ವಿಭಾಗದಲ್ಲಿ ಮೊ.ಸಂ: 01/2024 ಕಲಂ 343,344, 409, 426, 34, 36, 37, 201, 204 ಐಪಿಸಿ ಹಾಗೂ ಕಲಂ 66, 84(ಸಿ) ಐಟಿ ಆಕ್ಟ್–2000 ವಿಧಾನಸೌಧ, ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಮೊ.ಸಂ: 19/2024 ಕಲಂ, 506, 504, 307, 332, 353 ಐಪಿಸಿ	ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/21/ಪೊಸಿಪ/2024, ದಿನಾಂಕ: 20.03.2024 ರಲ್ಲಿ ಅಮಾನತ್ತುಗೊಳಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 368 ಪಿಇಜಿ 2024, ದಿನಾಂಕ: 06.06.2025 ರಲ್ಲಿ ಅಮಾನತ್ತುನಿಂದ ತೆರವುಗೊಳಿಸಿದೆ. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 368 ಪಿಇಜಿ 2024, ದಿನಾಂಕ: 20.06.2025 ರಲ್ಲಿ ಇಲಾಖಾ ವಿಚಾರಣೆ ಬಾಕಿ ಇರಿಸಿ, ಅಮಾನತ್ತನ್ನು ಮುಂದುವರೆಸಿ ಆದೇಶಿಸಿದೆ. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 368 ಪಿಇಜಿ 2024, ದಿನಾಂಕ: 07.01.2026 ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 368 ಪಿಇಜಿ 2024, ದಿನಾಂಕ: 20.06.2025 ರ ಆದೇಶವನ್ನು ಹಿಂಪಡೆದು, ಶ್ರೀ ಶ್ರೀಧರ ಕೆ. ಪೂಜಾರ, ಡಿವೈ.ಎಸ್.ಪಿ., ಆಂತರಿಕ ಭದ್ರತಾ ವಿಭಾಗ, ಬೆಂಗಳೂರು ರವರನ್ನು ಅಮಾನತ್ತಿನಿಂದ ತೆರವುಗೊಳಿಸಿರುವ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 368 ಪಿಇಜಿ 2024, ದಿನಾಂಕ: 06.06.2025 ಅನ್ನು ಸ್ಥಿರೀಕರಿಸಿ ಆದೇಶಿಸಿದೆ. ತನಿಖಾ ಹಂತದಲ್ಲಿರುತ್ತದೆ.

PART B

Suspension due to other charges against DySP

ಕ್ರ. ಸ	ಅಮಾನತ್ತಿನಲ್ಲಿರುವ ಅಧಿಕಾರಿಗಳು/ ಅಮಾನತ್ತುಗೊಂಡ ಸ್ಥಳ	ಪ್ರಕರಣದ ವಿವರ	ಅಮಾನತ್ತಿನ ಆದೇಶ ಸಂಖ್ಯೆ ಮತ್ತು ದಿನಾಂಕ	ಷರಾ
2024				
1.	ಶ್ರೀ ವಿಜಯಕುಮಾರ್ ತಳವಾರ. ಡಿವೈಎಸ್‌ಪಿ	ಅಂಜಲಿ ಕೊಲೆ ಪ್ರಕರಣದಲ್ಲಿ ಕುಟುಂಬಸ್ಥರು ದಿನಾಂಕ: 22.04.2024ರಂದು ಬೆಂಡಿಗೇರಿ ಪೊಲೀಸ್ ಠಾಣೆಯಲ್ಲಿ ನೀಡಿದ ಅಹವಾಲನ್ನು ಸರಿಯಾಗಿ ಪರಿಶೀಲಿಸಿ, ಕ್ರಮವಹಿಸುವಲ್ಲಿ ಅಗತ್ಯ ಮೇಲ್ವಿಚಾರಣೆ ಮಾಡಿ ಕೊಲೆ ಪ್ರಕರಣವನ್ನು ತಡೆಗಟ್ಟಬಹುದಿತ್ತು. ಮುಂದುವರೆದು, ಬೆಂಡಿಗೇರಿ ಪೊಲೀಸ್ ಠಾಣೆಯ ಮೊ.ಸಂ: 47/2024 ಕಲಂ 302, 201 ಐಪಿಸಿ ಸಂಭವಿಸಿದ ಕೂಡಲೇ ಠಾಣೆಗೆ ಭೇಟಿ ನೀಡಿ ಪ್ರಕರಣದ ಕುರಿತು ಅಧೀನ ಅಧಿಕಾರಿಗಳಿಗೆ ಮುಂದೆ ವಹಿಸಬೇಕಾದ ಕ್ರಮಗಳ ಕುರಿತು ಮತ್ತು ಆರೋಪಿಯ ಪತ್ತೆಯ ಕುರಿತು ಯಾವುದೇ ಕ್ರಮವಹಿಸಿರುವುದು ಅಥವಾ ಅಧೀನ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿರುವುದು ಕಂಡು ಬಂದಿರುವುದಿಲ್ಲ.	ದಿನಾಂಕ: 20.05.2024ರಂದು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ. ಸ್ಥೀರಿಕರಿಸುವಂತೆ ಕೋರಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಾಗಿದೆ.	ದಿನಾಂಕ: 20.05.2024ರಂದು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ. ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಡಿ 42 ಪೊಸಿಪ 2024, ದಿನಾಂಕ: 13.06.2024 ಅಮಾನತ್ತಿನ ಆದೇಶವನ್ನು ಸ್ಥೀರಿಕರಿಸಿ ಆದೇಶಿಸಿದೆ. ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಡಿ 376 ಪಿಇಜಿ 2024, ದಿನಾಂಕ: 10.11.2025 ರಲ್ಲಿ ಸದರಿ ರವರ ವಿರುದ್ಧ ಮಾಡಲಾದ ಆರೋಪಗಳು ಪ್ರಾಥಮಿಕ ತನಿಖೆಯಲ್ಲಿ ಸಾಬೀತಾಗದೆ ಇರುವುದರಿಂದ ಇವರ ವಿರುದ್ಧ ಶಿಸ್ತು ಕ್ರಮವನ್ನು ಕೈಬಿಟ್ಟು ಹಾಗೂ ಇವರು ಅಮಾನತ್ತಿನಲ್ಲಿ ಕಳೆದ ದಿನಾಂಕ: 20.05.2024 ರಿಂದ 23.08.2024 ರವರೆಗಿನ ಅವಧಿಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 100(1)(ಬಿ) ರನ್ವಯ "ಕರ್ತವ್ಯದ ಅವಧಿಯೆಂದು" ಪರಿಗಣಿಸಿ ಆದೇಶಿಸಿದೆ.
2.	ಶ್ರೀ ಪ್ರಶಾಂತ್ ಜಿ ಮುನ್ನೋಳಿ, ಪೊಲೀಸ್ ಉಪಾಧೀಕ್ಷಕರು	ಚನ್ನಗಿರಿ ಠಾಣಾ ವ್ಯಾಪ್ತಿಯಲ್ಲಿ ಓರ್ವ ಸಂಶಯಾಸ್ಪದ / ಶಂಕಿತ ವ್ಯಕ್ತಿ ಮರಣಹೊಂದಿದ್ದು ಇಂತಹ ಸಂದರ್ಭಗಳಲ್ಲಿ ಹಿಂದಿನ ಪೂರ್ವ ಘಟನೆಗಳನ್ನು ಆಧರಿಸಿ ಕೋಮು ಗಲಭೆ	ದಿನಾಂಕ: 26.05.2024ರಂದು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ.	ಹೆಚ್‌ಡಿ 45 ಪೊಸಿಪ 2024, ದಿನಾಂಕ: 30.07.2024ರಲ್ಲಿ ಸೇವೆಯಿಂದ ಅಮಾನತ್ತಿನಲ್ಲಿರಿಸಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ತೆರವುಗೊಳಿಸಿ, ಇವರ ವಿರುದ್ಧದ ಇಲಾಖಾ ಶಿಸ್ತು ಪ್ರಕರಣವನ್ನು

		ಮತ್ತು ಠಾಣೆ ಮುತ್ತಿಗೆ ಹಾಕುವ ಸಂದರ್ಭ ಬರಬಹುದೆಂದು ಮುಂಚಿತವಾಗಿಯೇ ಗ್ರಹಿಸಬೇಕಾಗಿರುತ್ತದೆ. ದಿನಾಂಕ: 24.05.2024ರಂದು ಮೇಲಿನ ಘಟನೆ ಜರುಗಿದ ಸಮಯದಲ್ಲಿ ನೀವು ಕೇಂದ್ರಸ್ಥಾನದಲ್ಲಿದ್ದರೂ ಸಹ ಮೇಲ್ಕಂಡ ಘಟನೆಯ ಕುರಿತಾಗಿ ಪೂರ್ವ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಮತ್ತು ಪ್ರಕರಣದ ಗಂಭೀರತೆಯನ್ನು ಅರಿಯಲು ವಿಫಲರಾಗಿರುತ್ತಾರೆ		ಮುಕ್ತಾಯಗೊಳಿಸಿ ಆದೇಶಿಸಲಾಗಿರುತ್ತದೆ.
3.	ಸುಮೀತ್ ಎ.ಆರ್., ಡಿವೈಎಸ್‌ಪಿ, ಸಿವಿಲ್ ಮಂಡ್ಯ, ಶ್ರೀ ಅಶೋಕ್ ಕುಮಾರ್ ಬಿ., ಪೊಲೀಸ್ ಇನ್ಸ್‌ಪೆಕ್ಟರ್, ಶ್ರೀ ರವಿ ಬಿ.ಜೆ., ಪಿ.ಎಸ್.ಐ ಮತ್ತು ಶ್ರೀ ಎಂ. ರಮೇಶ್, ಸಿಹೆಚ್‌ಸಿ–408.	ದಿನಾಂಕ: 11–9–2024 ರಂದು ನಾಗಮಂಗಲ ಉಪ ವಿಭಾಗದ ಸರಹದ್ದಿನ ಬದ್ರಿಕೊಪ್ಪಲು ಗ್ರಾಮದ ಗಣೇಶ ವಿಸರ್ಜನೆಯ ಸಂಬಂಧವಾಗಿ ಉಭಯ ಕೋಮಿನವರ ನಡುವೆ ಉದ್ವಿಗ್ನ ಪರಿಸ್ಥಿತಿ ಸೃಷ್ಟಿಯಾಗಿ ಕಾನೂನು ಸುವ್ಯವಸ್ಥೆಗೆ ದಕ್ಕೆ ಉಂಟಾಗಲು ಕಾರಣರಾಗಿರುವುದು.	ಈ ಕಛೇರಿ ಪತ್ರ ಹೆಚ್‌ಆರ್‌ಎಂ–1(5)57/2024– 25, ದಿನಾಂಕ: 17.09.2024 ಹೆಚ್‌ಡಿ 392 ಪಿಇಜಿ 2024, ದಿನಾಂಕ: 14.11.2024 (ಸ್ಥಿರೀಕರಣ) ಲೀನ್– ಎ.ಎನ್.ಎಫ್, ಕಾರ್ಕಳ ಉಡುಪಿ	ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 392 ಪಿಇಜಿ 2024, ದಿನಾಂಕ: 28.02.2025 ರಲ್ಲಿ ಸೇವೆಯಿಂದ ಅಮಾತ್ತಿನಲ್ಲಿರಿಸಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ತೆರವುಗೊಳಿಸಿ, ಪೊಲೀಸ್ ಉಪಾಧೀಕ್ಷಕರು, ಡಿಸಿಆರ್‌ಇ, ಮೈಸೂರು ಈ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 392 ಪಿಇಜಿ 2024, ದಿನಾಂಕ: 03.05.2025 ರಲ್ಲಿ ಡಾ: ಸುಮಿತ್ ಎ.ಆರ್., ಡಿವೈಎಸ್‌ಪಿ ಹಾಗೂ ಶ್ರೀ ಅಶೋಕ್ ಕುಮಾರ್ ಬಿ., ಪೊಲೀಸ್ ಇನ್ಸ್‌ಪೆಕ್ಟರ್ ಇವರುಗಳಿಗೆ ಕೆ.ಎಸ್.ಪಿ (ಡಿಪಿ) ನಿಯಮಗಳು 1965/89 ಮತ್ತು ತಿದ್ದುಪಡಿ ನಿಯಮ 2022 ರ ನಿಯಮ 4ಂ(1)(ಚಿ)(ಎ) ರನ್ವಯ **"ವಾಗ್ದಂಡನೆ"** ವಿಧಿಸಿ, ಶ್ರೀ ರವಿ ಬಿ.ಜೆ., ಪಿ.ಎಸ್.ಐ ಮತ್ತು ಶ್ರೀ ಎಂ. ರಮೇಶ್, ಸಿಹೆಚ್‌ಸಿ–408 ಇವರುಗಳಿಗೆ ಕೆ.ಎಸ್.ಪಿ (ಡಿಪಿ) ತಿದ್ದುಪಡಿ ನಿಯಮ 2022 ರ ನಿಯಮ 4ಂ(1)(ಚಿ)(ಎ) ರನ್ವಯ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ 03 (ಮೂರು) ತಿಂಗಳ ಕಾಲ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

2025				
4.	ಶ್ರೀ ರಾಮಚಂದ್ರಪ್ಪ ಎನ್.ಬಿ. ಡಿ.ಎಸ್.ಪಿ. ಸಿವಿಲ್, ಮಧುಗಿರಿ ಉಪ ವಿಭಾಗ, ತುಮಕೂರು ಜಿಲ್ಲೆ	ಮಧುಗಿರಿ ಪೊಲೀಸ್ ಠಾಣೆ ಮೊ.ಸಂ. 03/2025 ಕಲಂ 68, 75, 79, ಬಿಎನ್ಎಸ್ ದಿನಾಂಕ: 02–01–2025 ರಂದು ಶ್ರೀ ರಾಮಚಂದ್ರಪ್ಪ ಎನ್.ಬಿ. ಡಿ.ವೈ.ಎಸ್.ಪಿ. ಮಧುಗಿರಿ ಉಪ ವಿಭಾಗ ಆದ ನೀವು ದೂರು ನೀಡಲು ಬಂದ ಮಹಿಳೆಯನ್ನು ಪುಸಲಾಯಿಸಿ ಅನೈತಿಕ ಚಟುವಟಿಕೆಗೆ ಬಳಸಿಕೊಂಡಿರುವುದು ದೃಶ್ಯ ಮಾಧ್ಯಮಗಳಲ್ಲಿ ಸುದ್ದಿ ಸಹ ಭಿತ್ತರಗೊಳ್ಳುತ್ತಿರುತ್ತದೆ.	ಹೆಚ್ಆರ್ಎಂ–1(5)72/2024–25, ದಿನಾಂಕ: 03.01.2025 ರಲ್ಲಿ ಅಮಾನತ್ತುಗೊಳಿಸಲಾಗಿದೆ. ದಿನಾಂಕ: 18.03.2025 ರಂದು ಸರ್ಕಾರದಿಂದ ಸ್ಥಿರೀಕರಿಸಿ ಆದೇಶಿಸಿದೆ. ಲೀನ್ – ಎ.ಎನ್.ಎಫ್. ಕಾರ್ಕಳ	ದಿನಾಂಕ: 22.09.2025 ರಂದು ಸರ್ಕಾರ ದೋಷಾರೋಪಣಾ ಪತ್ರವನ್ನು ಹೊರಡಿಸಲಾಗಿದೆ.
5.	ಶ್ರೀಮತಿ ಕನಕಲಕ್ಷ್ಮಿ ಬಿ.ಎಂ., ಡಿವೈಎಸ್ಪಿ, ಸಿಐಡಿ	ಬೆಂಗಳೂರು ನಗರ ಬನಶಂಕರಿ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 338/2024 ಕಲಂ 108 ಬಿಎನ್ಎಸ್–2023 ಮತ್ತು ಕಲಂ 7 ಪಿಸಿ ಆಕ್ಟ್–1988 ಪ್ರಕರಣ. ಕುಮಾರಿ ಜೀವಾ ಎಸ್. ರವರ ಆತ್ಮಹತ್ಯೆ ಪ್ರಕರಣದ ಕುರಿತು.	ಸರ್ಕಾರದ ಆದೇಶ ಸಂಖ್ಯೆ: ಹೆಚ್ಡಿ 126 ಪಿಇಜಿ 2025, ದಿನಾಂಕ: 11.04.2025 ರಂದು ಅಮಾನತ್ತುಗೊಳಿಸಿ ಆದೇಶಿಸಿದೆ. ಸರ್ಕಾರದ ಪತ್ರ ದಿನಾಂಕ: 18.08.2025 ರಲ್ಲಿ ಅಮಾನತ್ತು ತೆರವುಗೊಳಿಸಲು ಅಭಿಪ್ರಾಯವನ್ನು ಕೋರಿದೆ. ಲೀನ್– ಆಂತರಿಕ ಭದ್ರತಾ ವಿಭಾಗ, ಬೆಂಗಳೂರು	ಸರ್ಕಾರದ ಆದೇಶ ಸಂಖ್ಯೆ: ಹೆಚ್ಡಿ 126 ಪಿಇಜಿ 2025, ದಿನಾಂಕ: 28.11.2025 ಮತ್ತು 01.12.2025 ರಲ್ಲಿ ಸರ್ಕಾರವು ಕೆ.ಎಸ್.ಪಿ. (ಡಿಪಿ) ನಿಯಮಗಳು 1965/89ರ ನಿಯಮ 5 ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀಮತಿ ಕನಕಲಕ್ಷ್ಮೀ, ಡಿವೈಎಸ್ಪಿ (ಸಿವಿಲ್), ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ ಸದರಿಯವರ ಅಮಾನತ್ತನ್ನು ತೆರವುಗೊಳಿಸಿ ಆಂತರಿಕ ಭದ್ರತಾ ವಿಭಾಗ, ಬೆಂಗಳೂರು ಇಲ್ಲಿಗೆ ಸ್ಥಳ ನಿಯುಕ್ತಿಗೊಳಿಸಿದೆ.
6.	ಶ್ರೀ ಸಿ. ಬಾಲಕೃಷ್ಣ, ಡಿವೈಎಸ್ಪಿ, ಕಬ್ಬನ್ ಪಾರ್ಕ್ ಉಪ ವಿಭಾಗ, ಬೆಂಗಳೂರು ನಗರ	ದಿನಾಂಕ: 04.06.2025 ರಂದು ಆರ್.ಸಿ.ಬಿ ತಂಡದ ವಿಜಯೋತ್ಸವದ ಅಭಿನಂದನಾ ಸಮಾರಂಭದ ಕಾಲ್ತುಳಿತ ಬಗ್ಗೆ	ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 183 ಎಸ್ಎಎಸ್ 2025, ದಿನಾಂಕ: 05.06.2025 ರಲ್ಲಿ ಅಮಾನತ್ತುಗೊಳಿಸಲಾಗಿದೆ.	ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 131 ಎಸ್ಪಿಎಸ್ 2025, ದಿನಾಂಕ: 28.07.2025 ರಲ್ಲಿ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಅಮಾನತ್ತುನಿಂದ ತೆರವುಗೊಳಿಸಿದೆ.

PART A1 : SUSPENSION DUE TO CRIMINAL CASES. REGISTERED UNDER P.C. ACT (2024)

ಕೆ.ಎಸ್.ಆರ್.ಪಿ., ಘಟಕ

ಕ್ರ. ಸಂ.	ಜಿಲ್ಲೆ	ಕರ್ತವ್ಯಲೋಪಮತ್ತುಭ್ರಷ್ಟಾಚಾರದಡಿಯಲ್ಲಿಸಿಲುಕಿ ಅಮಾನತ್ತುಗೊಂಡಪೊಲೀಸ್ ಅಧಿಕಾರಿ / ಸಿಬ್ಬಂದಿಯವರಹೆಸರುಮತ್ತುಹುದ್ದೆ	ಕರ್ತವ್ಯನಿರ್ವಹಿಸುತ್ತಿರುವಠಾಣೆಯಹೆಸರು	ದೋಷಾರೋಪ	ಇಲಾಖಾಶಿಸ್ತುಕ್ರಮಕೈಗೊಂಡಿರುವಬಗ್ಗೆವಿವರ	ಕ್ರಿಮಿನಲ್ ಪ್ರಕರಣದಾಖಲಾಗಿದ್ದಲ್ಲಿಪ್ರಕರಣದವಿವರ ಹಾಗೂನ್ಯಾಯಾಲಯದಅಂತಿಮಆದೇಶವಾಗಿದ್ದಲ್ಲಿವಿವರಅಥವಾಪ್ರಸ್ತುತಹಂತ
1	ಮೈಸೂರು	ಸಿ.ಆರ್. ಸುಪ್ರೀತ್ ಸ್ಪೆ.ಆರ್‌ಹೆಚ್‌ಸಿ-275	5ನೇಪಡೆ, ಕೆಎಸ್ ಆರ್‌ಪಿಮೈಸೂರು	ಪ್ರಯಾಣಭತ್ಯೆಶಾಖೆಯಲ್ಲಿಕೆ-2 ಸಬಿಲ್ಲನ್ನುತಯಾರಿಸುವಾಗಸರ್ಕಾರಕ್ಕೆವಂಚಿಸಿರೂ.78,65,350/- ಗಳನ್ನುಬ್ಯಾಂಕ್ ಆಫ್ ಬರೋಡಹಾಗೂಸ್ಟೇಟ್ ಬ್ಯಾಂಕ್ ನಲ್ಲಿರುವತನ್ನಹೆಸರಿನಖಾತೆಗೆಜಮಾಮಾಡಿಕೊಂಡಿರುವಬಗ್ಗೆ.	ಇಲಾಖಾವಿಚಾರಣೆನಡೆಸಲುಕ್ರಮಕ್ಕೆಗೊಳ್ಳಲಾಗುತ್ತಿದೆ.	ಮೈಸೂರುನಗರದನಜರ್‌ಬಾದ್ ಪೊಲೀಸ್ ಠಾಣೆಯಲ್ಲಿಎಫ್.ಐ.ಆರ್. ಸಂಖ್ಯೆ: 013/2024 ಆಗಿದ್ದು, ಭ್ರಷ್ಟಾಚಾರಪ್ರತಿಬಂಧಕಕಾಯ್ದೆ, 1988ರಕಲಂ 17(ಎ) ರಲ್ಲಿಸಿಐಡಿತನಿಖೆನಡೆದುದೋಷಾರೋಪಣಾಪತ್ರವನ್ನುಮಾನ್ಯನ್ಯಾಯಾಲಯಕ್ಕೆಸಲ್ಲಿಸಲಾಗಿದೆ.

ಪೊಲೀಸ್ ಮಹಾ ನಿರೀಕ್ಷಕರು ಪೂರ್ವ ವಲಯ ದಾವಣಗೆರೆ

ಕ್ರ.ಸಂ	ಕರ್ತವ್ಯ ಲೋಪ ಮತ್ತು ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಅಮಾನತ್ತುಗೊಂಡ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಕರ್ತವ್ಯ ನಿರ್ವಹಿಸುತ್ತಿರುವ ಠಾಣೆಯ ಹೆಸರು	ದೋಷಾರೋಪಣೆ	ಇಲಾಖಾ ಶಿಸ್ತು ಕ್ರಮ ಕೈಗೊಂಡಿರುವ ಬಗ್ಗೆ ವಿವರ/ ಶಿಕ್ಷೆ/ಪ್ರಸ್ತುತ ಹಂತ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಪ್ರಕರಣದ ವಿವರ/ ಹಾಗೂ ನ್ಯಾಯಾಲಯದ ಆದೇಶವಾಗಿದ್ದಲ್ಲಿ ವಿವರ ಅಥವಾ ಪ್ರಸ್ತುತ ಹಂತ
2 3	1) ಶರಣಬಸಪ್ಪ ಕಾಂದೆ, ಪಿಎಸ್‌ಐ 2)ಎಸ್. ಪಿಮನೋಜಿ ಸಿಪಿಸಿ-1390	1)ಜಗಳೂರು ಪೊಲೀಸ್ ಠಾಣೆ, ದಾವಣಗೆರೆ ಜಿಲ್ಲೆ. 2) ಹಂಸಭಾವಿ ಪೊಲೀಸ್ ಠಾಣೆ, ಹಾವೇರಿ ಜಿಲ್ಲೆ	ಶ್ರೀ ಪ್ರಭಾಕರ ಈರಪ್ಪ ಬೆಟದುರ ಸಾ ತಡಸ ರವರಿಗೆ ಕಾನೂನು ಬಾಹಿರವಾಗಿ ಇಸ್ಪೀಟ್ ಆಡಿಸುವ ಸಂಬಂಧ ರೂ.5.00.000/- ಗಳ ಲಂಚದ ಹಣವನ್ನು ಬೇಡಿಕೆ ಇಟ್ಟಿದ್ದು ದಿನಾಂಕ: 15/05/2024 ರಂದು ಮದ್ಯವರ್ತಿರವರಿಂದ ಮುಂಗಡವಾಗಿ ರೂ.2.,00,000/- ಗಳ ಲಂಚದ ಹಣವನ್ನು ಪಡೆದುಕೊಳ್ಳುವಾಗ ಟ್ರ್ಯಾಪ್ ಮಾಡಿದ್ದು ಈ ಸಂಬಂಧ ಹಾವೇರಿ ಲೋಕಾಯುಕ್ತ ಪ್ರಕರಣ ಸಂ: 07/2024 ಕಲಂ 7(a)(A) ಭ್ರಷ್ಟಾಚಾರ ಪ್ರತಿಭಂದಕ ಕಾಯ್ದೆ 1988(ತಿದ್ದುಪಡಿ) ಕಾಯ್ದೆ 2018) ರೀತ್ಯಾ ದಾಖಲಾದ ಪ್ರಕರಣದಲ್ಲಿ ಭಾಗಿಯಾಗಿ ಕರ್ತವ್ಯದಲ್ಲಿ ತೀವ್ರ ದುರ್ನಡತೆ ಪ್ರದರ್ಶಿಸಿರುವ ಬಗ್ಗೆ	ಸದರಿ ಪಿಎಸ್‌ಐ ರವರನ್ನು ದಿನಾಂಕ: 12/08/2024 ರಂದು ಸೇವೆಯಿಂದ ಅಮಾನತ್ತುಗೊಳಿಸಿ, ಅಮಾನತ್ತಿನ ಬಿಡುಗಡೆಗೊಳಿಸಿ ಇಲಾಖಾ ವಿಚಾರಣೆಗೆ ಆದೇಶಿಸಿಲಾಗಿರುತ್ತದೆ	

ಪೊಲೀಸ್ ಅಧೀಕ್ಷಕರು, ದಾವಣಗೆರೆ ಜಿಲ್ಲೆ

ಕ್ರ. ಸಂ.	ಜಿಲ್ಲೆ	ಕರ್ತವ್ಯ ಲೋಪ ಮತ್ತು ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಅಮಾನತ್ತು ಗೊಂಡ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಕರ್ತವ್ಯ ನಿರ್ವಹಿಸುತ್ತಿರುವ ಠಾಣೆಯ ಹೆಸರು	ದೋಷಾರೋಪ	ಇಲಾಖಾ ಶಿಸ್ತು ಕ್ರಮ ಕೈಗೊಂಡಿರುವ ಬಗ್ಗೆ ವಿವರ ಮತ್ತು ಶಿಕ್ಷೆ ವಿವರ ಮತ್ತು ಪ್ರಸ್ತುತ ಹಂತ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಪ್ರಕರಣದ ವಿವರ ಹಾಗೂ ನ್ಯಾಯಾಲಯದ ಅಂತಿಮ ಆದೇಶವಾಗಿದ್ದಲ್ಲಿ ವಿವರ ಅಥವಾ ಪ್ರಸ್ತುತ ಹಂತ
1	2	3	4	5	6	7
2024						
4	ದಾವಣಗೆರೆ	ಹೊನ್ನೂರುಸ್ವಾಮಿ.ಟಿ., ಸಿ.ಹೆಚ್.ಸಿ-02	ಸಂತೇಬೆನ್ನೂರು ಪೊಲಿಸ್ ಠಾಣೆ, (ಈ ಹಿಂದೆ ಮಾಯಕೊಂಡ ಪೊಲೀಸ್ ಠಾಣೆ) ದಾವಣಗೆರೆ ಜಿಲ್ಲೆ.	ಈ ಹಿಂದೆ ದಿನಾಂಕ: 01-02-2024 ರಂದು ಮಾಯಕೊಂಡ ಠಾಣಾ ಪ್ರಭಾರದಲ್ಲಿರುವಾಗ ಪರ್ಯಾದಿಯ ಬೈಕ್ ಬಿಡುಗಡೆಗಾಗಿ ರೂ.6,000/- ಹಣಕ್ಕೆ ಬೇಡಿಕೆ ಇಟ್ಟು, ದಿನಾಂಕ: 02-02-2024	ಈ ಕಛೇರಿ ಆದೇಶ ಸಂ:ಸಿಬ್ಬಂದಿ(5)/ನಿಲಂಬನೆ/04/2024, ಓ.ಬಿ.ಸಂ: 71/2024, ದಿನಾಂಕ: 06-02-2024 ರಲ್ಲಿ ಸದರಿಯವರನ್ನು ದಸ್ತಗಿರಿಯಾದ ದಿನಾಂಕ ಅಂದರೆ ದಿನಾಂಕ: 03-02-2024 ರಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ.	ದಾವಣಗೆರೆಯ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಿನಾಂಕ: 02-02-2024 ರಂದು ಗು.ಸಂ: 01/2024, ಕಲಂ: 7(ಎ) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ತಿದ್ದುಪಡಿ ಕಾಯ್ದೆ

				ರಂದು ರೂ.1,000/- ಹಣವನ್ನು ಬೈಕ್ ಮಾಲಿಕನ ತಂದೆಯಿಂದ ಪಡೆದುಕೊಂಡಿದ್ದು, ಉಳಿದ ಹಣವನ್ನು ಮರು ದಿನ ನೀಡುವಂತೆ ಬೇಡಿಕೆ ಇಟ್ಟಿದ್ದು, ಚಂದ್ರಪ್ಪನು ನೀಡಿದ ದೂರಿನ ಮೇರೆಗೆ ದಾವಣಗೆರೆ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ: 01/2024 ಕಲಂ: 7(ಎ) ಲಂಚ ನಿರೋಧಕ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದು, ನಂತರದಲ್ಲಿ ಉಳಿದ ರೂ.5,000/- ಹಣವನ್ನು ದಿನಾಂಕ: 03-02-2024 ರಂದು ಚಂದ್ರಪ್ಪನಿಂದ ಪಡೆಯುವಾಗ ಲೋಕಾಯುಕ್ತ ಪೊಲೀಸರಿಂದ ಟ್ರಾಪ್ ಆಗಿ ದಸ್ತಗಿರಿಯಾಗಿರುವ ಆರೋಪ	ನಂತರ ಸದರಿಯವರ ಮನವಿ ಮೇರೆಗೆ ಎಸ್.ಪಿ., ಲೋಕಾಯುಕ್ತ ದಾವಣಗೆರೆ ರವರಿಂದ ಅಭಿಪ್ರಾಯ ಪಡೆದು ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಇವರ ಲೀನ್ ಅನ್ನು ಮಾಯಕೊಂಡ ಠಾಣೆಯಿಂದ ಸಂತೇಬೆನ್ನೂರು ಪೊಲೀಸ್ ಠಾಣೆಗೆ ಬದಲಾವಣೆ ಮಾಡಲಾಗಿರುತ್ತದೆ. ನಂತರ ಈ ಕಛೇರಿ ಜ್ಞಾಪನ ಸಂ: ಸಿಬ್ಬಂದಿ(5)/ ಪೂ.ಭಾ.ವಿ/03/2024, ದಿನಾಂಕ: 12-04-2024 ರಲ್ಲಿ ಪೂರ್ವಭಾವಿ ವಿಚಾರಣೆಗೆ ಆದೇಶಿಸಲಾಗಿದ್ದು, ಪೂರ್ವಭಾವಿ ವಿಚಾರಣೆಯಲ್ಲಿ ಇವರ ಮೇಲಿನ ಆರೋಪವು ಸಾಭೀತಾಗಿದ್ದರಿಂದ ಈ ಕಛೇರಿ ಆದೇಶ ಸಂ: ಸಿಬ್ಬಂದಿ(5)/ಇ.ವಿ/02/2024, ದಿನಾಂಕ: 24-06-2024 ರಲ್ಲಿ ಕೆ.ಎಸ್.ಪಿ (ಡಿ.ಪಿ) ನಿಯಮ-6 ರಡಿಯಲ್ಲಿ ದೋಷಾರೋಪಣೆ ಪತ್ರವನ್ನು ಹೊರಡಿಸಿದ್ದು, ಸದರಿ ದೋಷಾರೋಪಣೆ ಪತ್ರಕ್ಕೆ ಸದರಿಯವರು ಸಲ್ಲಿಸಿದ್ದ ಸಮಜಾಯಿಷಿಯನ್ನು ಒಪ್ಪದೇ ಈ ಕಛೇರಿ ಆದೇಶ ಸಂ: ಸಿಬ್ಬಂದಿ(5)/ಇ.ವಿ/02/2024, ಓ.ಬಿ.ಸಂ: 588/2024, ದಿನಾಂಕ: 08-11-2024 ರಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದ್ದು, ಹಾಲಿ ಇಲಾಖಾ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.	2018, ರಂತೆ ಪ್ರಕರಣ ದಾಖಲಾಗಿದ್ದು, ಹಾಲಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ.
5	ದಾವಣಗೆರೆ	ಹನುಮಂತಪ್ಪ ಸಿ.ನೀಲಗುಂದ, ಸಿಪಿಸಿ-286	ಉತ್ತರ ಸಂಚಾರ ಪೊಲೀಸ್ ಠಾಣೆ (ಈ ಹಿಂದೆ	ಈ ಹಿಂದೆ ಬಡಾವಣೆ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ	ಈ ಕಛೇರಿ ಆದೇಶ ಸಂ:ಸಿಬ್ಬಂದಿ(5)/ನಿಲಂಬನೆ/15/2024, ಓ.ಬಿ.ಸಂ: 282/2024, ದಿನಾಂಕ: 06-06-	ದಾವಣಗೆರೆಯ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಿನಾಂಕ:

			ಬಡಾವಣೆ ಪೊಲೀಸ್ ಠಾಣೆ), ದಾವಣಗೆರೆ.	ಚೆಕ್‌ಬೌನ್ಸ್ ಪ್ರಕರಣದಲ್ಲಿ ಆರೋಪಿ ಮೇಲೆ ಘನ ನ್ಯಾಯಾಲಯವು ಹೊರಡಿಸಿದ್ದ ಸಮನ್ಸನ್ನು ಜಾರಿಗೊಳಿಸದೇ ಸದರಿ ಸಮನ್ಸನ್ನು ವಾರೆಂಟ್ ಮಾಡಿಸಿಕೊಡುವುದಾಗಿ ಪರ್ಯಾದಿಗೆ ದೂರವಾಣಿ ಮುಖೇನ ಮಾತನಾಡಿ ಘನ ನ್ಯಾಯಾಲಯದಿಂದ ವಾರೆಂಟ್ ಜಾರಿ ಮಾಡಿಸಲು ರೂ.2,000/- ಲಂಚದ ಹಣಕ್ಕೆ ಬೇಡಿಕೆಯಿಟ್ಟು, ನಂತರ ಫೋನ್ ಪೇ ಮುಖಾಂತರ ಲಂಚದ ಹಣವನ್ನು ಪಡೆದುಕೊಂಡು ಲೋಕಾಯುಕ್ತ ಪೊಲೀಸರಿಂದ ದಸ್ತಗಿರಿಯಾಗುವ ಮೂಲಕ ಇಲಾಖೆಗೆ ಸಲ್ಲದ ಅತೀವ ದುರ್ನಡತೆ ಪ್ರದರ್ಶಿಸಿರುವ ಬಗ್ಗೆ.	2024 ರಲ್ಲಿ ಸದರಿಯವರನ್ನು ದಸ್ತಗಿರಿಯಾದ ದಿನಾಂಕ ಅಂದರೆ ದಿನಾಂಕ: 02-06-2024 ರಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ. ನಂತರ ಸದರಿಯವರ ಮನವಿ ಮೇರೆಗೆ ಎಸ್.ಪಿ., ಲೋಕಾಯುಕ್ತ ದಾವಣಗೆರೆ ರವರಿಂದ ಅಭಿಪ್ರಾಯ ಪಡೆದು ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಇವರ ಲೀನ್ ಅನ್ನು ಬಡಾವಣೆ ಠಾಣೆಯಿಂದ ಗಾಂಧಿನಗರ ಪೊಲೀಸ್ ಠಾಣೆಗೆ ಬದಲಾವಣೆ ಮಾಡಲಾಗಿರುತ್ತದೆ. ನಂತರ ಈ ಕಛೇರಿ ಜ್ಞಾಪನ ಸಂ: ಸಿಬ್ಬಂದಿ(5)/ಪೂ.ಭಾ.ವಿ/16/2024, ದಿನಾಂಕ: 23-09-2024 ರಲ್ಲಿ ಪೂರ್ವಭಾವಿ ವಿಚಾರಣೆಗೆ ಆದೇಶಿಸಲಾಗಿದ್ದು, ಪೂರ್ವಭಾವಿ ವಿಚಾರಣೆಯಲ್ಲಿ ಇವರ ಮೇಲಿನ ಆರೋಪವು ಸಾಭೀತಾಗಿದ್ದರಿಂದ ಈ ಕಛೇರಿ ಆದೇಶ ಸಂ: ಸಿಬ್ಬಂದಿ(5)/ಇ.ವಿ/03/2025, ದಿನಾಂಕ: 18-02-2025 ರಲ್ಲಿ ಕೆ.ಎಸ್.ಪಿ (ಡಿ.ಪಿ) ನಿಯಮ-6 ರಡಿಯಲ್ಲಿ ದೋಷಾರೋಪಣೆ ಪತ್ರವನ್ನು ಹೊರಡಿಸಿದ್ದು, ಸದರಿ ದೋಷಾರೋಪಣೆ ಪತ್ರಕ್ಕೆ ಸದರಿಯವರು ಸಲ್ಲಿಸಿದ್ದ ಸಮಜಾಯಿಷಿಯನ್ನು ಒಪ್ಪದೇ ಈ ಕಛೇರಿ ಆದೇಶ ಸಂ: ಸಿಬ್ಬಂದಿ(5)/ಇ.ವಿ/ 03/2025, ಓ.ಬಿ.ಸಂ: 185/2025, ದಿನಾಂಕ: 22-04-2025 ರಲ್ಲಿ ಇಲಾಖಾ	31-05-2024 ರಂದು ಗು.ಸಂ: 03/2024, ಕಲಂ: 7(ಎ) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ತಿದ್ದುಪಡಿ ಕಾಯ್ದೆ 2018, ರಂತೆ ಪ್ರಕರಣ ದಾಖಲಾಗಿದ್ದು,, ತನಿಖೆಯಲ್ಲಿರುತ್ತದೆ.

					ವಿಚಾರಣೆಗೆ ಆದೇಶಿಸಲಾಗಿದ್ದು, ಹಾಲಿ ಇಲಾಖಾ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.	
6	ದಾವಣಗೆರೆ	ಡಿ.ಸತೀಶ, ಸಿ.ಹೆಚ್.ಸಿ-98	ಮಾಯಕೊಂಡ ಪೊಲೀಸ್ ಠಾಣೆ (ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆ), ದಾವಣಗೆರೆ ಜಿಲ್ಲೆ	ಈ ಹಿಂದೆ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಪಿರ್ಯಾದಿಯ ವಿರುದ್ಧ ದಾವಣಗೆರೆ ಪ್ರಿನ್ಸಿಪಲ್ ಸೀನಿಯರ್ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ ನ್ಯಾಯಾಲಯವು ಸಿ.ಸಿ.ನಂ: 3865/2023 ರಲ್ಲಿ ಹೊರಡಿಸಿದ್ದ ಅರೆಸ್ಟ್ ವಾರೆಂಟ್ ವಿಚಾರವಾಗಿ ಪದೇ ಪದೇ ಲಂಚದ ಹಣಕ್ಕೆ ಒತ್ತಾಯಿಸುತ್ತಾ ಪಿರ್ಯಾದಿಯ ಕಡೆಯಿಂದ ರೂ.7000/- ಲಂಚದ ಹಣ ಪಡೆದುಕೊಂಡು ಪುನಃ ರೂ 10,000/- ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಇಲಾಖೆಯ ಗೌರವಕ್ಕೆ ಧಕ್ಕೆ ಬರುವಂತೆ ತೀವ್ರ ದುರ್ನಡತೆ ಪ್ರದರ್ಶಿಸಿದ್ದಲ್ಲದೇ ತಮ್ಮ ಮೇಲೆ ಪ್ರಕರಣ ದಾಖಲಾದ ಬಗ್ಗೆ ಮಾಹಿತಿ ತಿಳಿದು, ದಿನಾಂಕ: 09-09-2024 ರಿಂದ ಕರ್ತವ್ಯಕ್ಕೆ ಗೈರು ಹಾಜರಾಗಿ ತಮ್ಮ ಕರ್ತವ್ಯದಲ್ಲಿ ಅತೀವ	ಈ ಕಛೇರಿ ಆದೇಶ ಸಂ:ಸಿಬ್ಬಂದಿ(5)/ನಿಲಂಬನೆ/24/2024, ಓ.ಬಿ.ಸಂ: 585/2024, ದಿನಾಂಕ: 08-11-2024 ರಲ್ಲಿ ಸದರಿಯವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ. ನಂತರ ಸದರಿಯವರ ಮನವಿ ಮೇರೆಗೆ ಎಸ್.ಪಿ., ಲೋಕಾಯುಕ್ತ ದಾವಣಗೆರೆ ರವರಿಂದ ಅಭಿಪ್ರಾಯ ಪಡೆದು ಅಮಾನತ್ತಿ ನಿಂದ ಬಿಡುಗಡೆಗೊಳಿಸಿ, ಇವರ ಲೀನ್ ಅನ್ನು ಬಡಾವಣೆ ಠಾಣೆಯಿಂದ ಗಾಂಧಿನಗರ ಪೊಲೀಸ್ ಠಾಣೆಗೆ ಬದಲಾವಣೆ ಮಾಡಲಾಗಿರುತ್ತದೆ. ನಂತರ ಈ ಕಛೇರಿ ಜ್ಞಾಪನ ಸಂ: ಸಿಬ್ಬಂದಿ(5)/ಪೂ.ಭಾ.ವಿ/01/2025, ದಿನಾಂಕ: 03-02-2025 ರಲ್ಲಿ ಪೂರ್ವಭಾವಿ ವಿಚಾರಣೆಗೆ ಆದೇಶಿಸಲಾಗಿದ್ದು, ಪೂರ್ವಭಾವಿ ವಿಚಾರಣೆಯಲ್ಲಿ ಇವರ ಮೇಲಿನ ಆರೋಪವು ಸಾಭೀತಾಗಿದ್ದರಿಂದ ಈ ಕಛೇರಿ ಆದೇಶ ಸಂ: ಸಿಬ್ಬಂದಿ(5)/ಇ.ವಿ/05/2025, ದಿನಾಂಕ: 02-05-2025 ರಲ್ಲಿ ಕೆ.ಎಸ್.ಪಿ (ಡಿ.ಪಿ) ನಿಯಮ-6 ರಡಿಯಲ್ಲಿ ದೋಷಾರೋಪಣೆ ಪತ್ರವನ್ನು ಹೊರಡಿಸಿದ್ದು, ಸದರಿ ದೋಷಾರೋಪಣೆ ಪತ್ರಕ್ಕೆ	ದಾವಣಗೆರೆಯ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಿನಾಂಕ: 07-09-2024 ರಂದು ಗು.ಸಂ: 08/2024, ಕಲಂ: 7(ಎ) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ತಿದ್ದುಪಡಿ ಕಾಯ್ದೆ 2018, ರಂತೆ ಪ್ರಕರಣ ದಾಖಲಾಗಿದ್ದು,, ಟ್ರ್ಯಾಪ್ ಕಾರ್ಯಚರಣೆಯು ಯಶಸ್ವಿಯಾಗಿರುವುದಿಲ್ಲ. ಹಾಲಿ ಪ್ರಕರಣವು ತನಿಖೆಯಲ್ಲಿರುತ್ತದೆ.

				ಅಶಿಸ್ತು & ಬೇಜವಾಬ್ದಾರಿತನ ತೋರಿರುವ ಆರೋಪ.	ಸದರಿಯವರು ಸಲ್ಲಿಸಿದ್ದ ಸಮಜಾಯಿಷಿಯನ್ನು ಒಪ್ಪದೇ ಈ ಕಛೇರಿ ಆದೇಶ ಸಂ: ಸಿಬ್ಬಂದಿ(5)/ಇ.ವಿ/05/ 2025, ಓ.ಬಿ.ಸಂ: 370/2025, ದಿನಾಂಕ: 11-07-2025 ರಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದ್ದು, ಹಾಲಿ ಇಲಾಖಾ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.	
7	ದಾವಣಗೆರೆ	ಜಿ.ಈರಣ್ಣ, ಎಎಸ್ಐ	ಆಜಾದ್ ನಗರ ಪೊಲೀಸ್ ಠಾಣೆ (ಈ ಹಿಂದೆ ಕೆ.ಟಿ.ಜೆ ನಗರ ಪೊಲೀಸ್ ಠಾಣೆ), ದಾವಣಗೆರೆ.	ಕೆ.ಟಿ.ಜೆ ನಗರ ಪೊಲೀಸ್ ಠಾಣೆಯಲ್ಲಿ ಪಿರ್ಯಾದಿಯ ತಾಯಿ ಮತ್ತು ಪತ್ನಿಯ ಮೇಲೆ ದಾಖಲಾಗಿರುವ ಪ್ರಕರಣದಲ್ಲಿ ಪಿರ್ಯಾದಿಯ ತಾಯಿ ಮತ್ತು ಪತ್ನಿಯನ್ನು ಚಾರ್ಜ್ ಶೀಟಿನಿಂದ ಕೈಬಿಡಲು ಮತ್ತು ಸೆಕ್ಷನ್‌ಗಳನ್ನು ಕಡಿಮೆ ಮಾಡಿ ಕಾಂಪೌಂಡಬಲ್ ಸೆಕ್ಷನ್‌ಗಳನ್ನು ಹಾಕಿ ರಾಜಿ ಪ್ರಕರಣವನ್ನಾಗಿ ಮಾಡಿ ಚಾರ್ಜ್ ಶೀಟ್ ಮಾಡಲು ಪಿರ್ಯಾದಿಗೆ ರೂ.1,00,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಪಿರ್ಯಾದಿಯಿಂದ ದಿನಾಂಕ: 03-12-2024 ರಂದು ಮುಂಗಡವಾಗಿ ರೂ.50,000/- ಗಳ ಲಂಚದ ಹಣವನ್ನು ಪಡೆಯುವಾಗ ಲೋಕಾಯುಕ್ತ ಪೊಲೀಸರಿಂದ ಟ್ರ್ಯಾಪ್ ಆಗಿ ದಸ್ತಗಿರಿಯಾಗುವ ಮೂಲಕ ಇಲಾಖೆಗೆ ಸಲ್ಲದ ಅತೀವ	ಈ ಕಛೇರಿ ಆದೇಶ ಸಂ:ಸಿಬ್ಬಂದಿ(5)/ನಿಲಂಬನೆ/27/2024, ಓ.ಬಿ.ಸಂ: 635/2024, ದಿನಾಂಕ: 06-12-2024 ರಲ್ಲಿ ಸದರಿಯವರನ್ನು ದಸ್ತಗಿರಿಯಾದ ದಿನಾಂಕ ಅಂದರೆ ದಿನಾಂಕ: 03-12-2024 ರಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ. ನಂತರ ಸದರಿಯವರ ಮನವಿ ಮೇರೆಗೆ ಎಸ್.ಪಿ., ಲೋಕಾಯುಕ್ತ ದಾವಣಗೆರೆ ರವರಿಂದ ಅಭಿಪ್ರಾಯ ಪಡೆದು ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಇವರ ಲೀನ್ ಅನ್ನು ಕೆ.ಟಿ.ಜೆ ನಗರ ಠಾಣೆಯಿಂದ ಬಸವಾಪಟ್ಟಣ ಪೊಲೀಸ್ ಠಾಣೆಗೆ ಬದಲಾವಣೆ ಮಾಡಲಾಗಿರುತ್ತದೆ. ನಂತರ ಈ ಕಛೇರಿ ಜ್ಞಾಪನ ಸಂ: ಸಿಬ್ಬಂದಿ(5)/ಪೂ.ಭಾ.ವಿ/02/2025, ದಿನಾಂಕ: 27-05-2025 ರಲ್ಲಿ ಪೂರ್ವಭಾವಿ ವಿಚಾರಣೆಗೆ ಆದೇಶಿಸಲಾಗಿದ್ದು, ಪೂರ್ವಭಾವಿ ವಿಚಾರಣೆಯಲ್ಲಿ ಇವರ ಮೇಲಿನ ಆರೋಪವು ಸಾಭೀತಾಗಿದ್ದರಿಂದ ಈ ಕಛೇರಿ ಆದೇಶ ಸಂ: ಸಿಬ್ಬಂದಿ(5)/ಇ.ವಿ/08/2025, ದಿನಾಂಕ:	ದಾವಣಗೆರೆಯ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಿನಾಂಕ: 03-12-2024 ರಂದು ಗು.ಸಂ: 13/2024, ಕಲಂ: 7(ಎ) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ತಿದ್ದುಪಡಿ ಕಾಯ್ದೆ 2018, ರಂತೆ ಪ್ರಕರಣ ದಾಖಲಾಗಿದ್ದು,, ಹಾಲಿ ಪ್ರಕರಣವು ತನಿಖೆಯಲ್ಲಿರುತ್ತದೆ.

				ದುರ್ನಡತೆ ಪ್ರದರ್ಶಿಸಿರುವ ಆರೋಪ	25-11-2025 ರಲ್ಲಿ ಕೆ.ಎಸ್.ಪಿ (ಡಿ.ಪಿ) ನಿಯಮ-6 ರಡಿಯಲ್ಲಿ ದೋಷಾರೋಪಣೆ ಪತ್ರವನ್ನು ಹೊರಡಿಸಿದ್ದು, ಈ ಕುರಿಂತೆ ಸದರಿಯವರ ಸಮಜಾಯಿಷಿಯು ಸ್ವೀಕೃತಗೊಂಡಿರುವುದಿಲ್ಲ.	

ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ

ಕ್ರಮ ಸಂಖ್ಯೆ	ಜಿಲ್ಲೆ	ಕರ್ತವ್ಯ ಲೋಪ ಮತ್ತು ಭಷ್ಟಚಾರದಡಿಯಲ್ಲಿ ಸಿಲುಕಿ ಅಮಾನತ್ತುಗೊಂಡ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಕರ್ತವ್ಯ ನಿರ್ವಹಿಸುತ್ತಿರುವ ಠಾಣೆಯ ಹೆಸರು	ದೋಷಾರೋಪ	ಇಲಾಖಾ ಶಿಸ್ತು ಕ್ರಮ ಕೈಗೊಂಡಿರುವ ಬಗ್ಗೆ ವಿವರ ಮತ್ತು ಶಿಕ್ಷೆ ವಿವರ ಮತ್ತು ಪ್ರಸ್ತುತ ಹಂತ	ಕ್ರಿಮಿನಲ್ ಪ್ರಕರಣ ದಾಖಲಾಗಿದಲ್ಲಿ ಪ್ರಕರಣದ ವಿವರ ಹಾಗೂ ನ್ಯಾಯಾಲಯದ ಅಂತಿಮ ಆದೇಶವಾಗಿದಲ್ಲಿ ವಿವರ ಅಥವಾ ಪ್ರಸ್ತುತ ಹಂತ
8		ಸಂಗಪ್ಪ ಮೇಟಿ, ಪಿ.ಎಸ್.ಐ	ತುರುವೇಕೆರೆ ಪೊಲೀಸ್ ಠಾಣೆ	ಅರುಣ್ ಕುಮಾರ್ ರವರ ಮೊಬೈಲ್ ನಿಂದ 87000/- ಗಳನ್ನು ಫೋನ್ ಪೇ ಮಾಡಿಸಿಕೊಂಡ ಬಗ್ಗೆ	ಇಲಾಖಾ ವಿಚಾರಣೆ ಬಾಕಿ ಇರುತ್ತದೆ	-
9		ಭೋಜನಾಯ್ಕ್, ಸಿಪಿಸಿ-860	ಕಳ್ಳಂಬೆಳ್ಳ ಪೊಲೀಸ್	4000/- ಫೋನ್ ಪೇ	ಪ್ರಾಥಮಿಕ ವಿಚಾರಣೆ ನಡೆಸಿ ಆರೋಪ	-

10		ಗಂಗಾಧರ್, ಸಿಹೆಚ್‌ಸಿ-185 ವಿಜಯ್ ಕುಮಾರ್, ಸಿಪಿಸಿ-663	ಠಾಣೆ	ಮಾಡಿಸಿಕೊಂಡಿರುವ ಬಗ್ಗೆ	ಸಾಬೀತಾಗದ ಕಾರಣ ದೋಷಮುಕ್ತಗೊಳಿಸಿದೆ	

ಪೊಲೀಸ್ ಆಯುಕ್ತರು, ಮಂಗಳೂರು ನಗರ, ಮಂಗಳೂರು

ಕ್ರ. ಸಂ	ಜಿಲ್ಲೆ	ಕರ್ತವ್ಯ ಲೋಪ ಮತ್ತು ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಅಮಾನತ್ತುಗೊಂಡ ಪೊಲೀಸ್ ಅಧಿಕಾರಿ / ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಕರ್ತವ್ಯ ನಿರ್ವಹಿಸುತ್ತಿರುವ ಠಾಣೆಯ ಹೆಸರು	ದೋಷಾರೋಪಣೆ	ಇಲಾಖಾ ಶಿಸ್ತು ಕ್ರಮ ಕೈಗೊಂಡಿರುವ ಬಗ್ಗೆ ವಿವರ ಮತ್ತು ಶಿಕ್ಷೆ ವಿವಿರ ಮತ್ತು ಪ್ರಸ್ತುತ ಹಂತ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಪ್ರಕರಣದ ವಿವರ ಹಾಗೂ ನ್ಯಾಯಾಲಯದ ಅಂತಿಮ ಆದೇಶವಾಗಿದ್ದಲ್ಲಿ ವಿವರ ಅಥವಾ ಪ್ರಸ್ತುತ ಹಂತ
11	ಮಂಗಳೂರು ನಗರ (ದ.ಕ ಜಿಲ್ಲೆ)	ನಾಗರತ್ನ, ಮಹೆಚ್‌ಸಿ 778	ಮಂ.ಗ್ರಾಮಾಂತರ ಪೊಲೀಸ್ ಠಾಣೆ	ಲೋಕಾಯುಕ್ತ ಪ್ರಕರಣ - ಸಂಚಾರ ಉತ್ತರ ಪೊಲೀಸ್ ಠಾಣೆ ಅ.ಕ್ರ: 254/2024 ರಲ್ಲಿ ವಾಹನವನ್ನು ಬಿಡುಗಡೆ ಮಾಡಲು ಲಂಚಕ್ಕಾಗಿ ಒತ್ತಾಯ ಮಾಡಿರುವ ಬಗ್ಗೆ	ಅಮಾನತ್ತಿನಿಂದ ಬಿಡುಗಡೆಗೊಳಿಸಿಲಾಗಿದ್ದು, ಇಲಾಖಾ ವಿಚಾರಣೆ ಪ್ರಾರಂಭಿಸುವ ಕುರಿತು ಲೋಕಾಯುಕ್ತ ಘಟಕದಿಂದ ಅಂತಿಮ ತನಿಖಾ ವರದಿ ಬರಲು ಬಾಕಿ ಇರುತ್ತದೆ.	ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು ಇಲ್ಲಿ ಅ.ಕ್ರ: 01/2025, ಕಲಂ 7(ಎ), 7(ಸಿ) ಭ್ರಷ್ಟಾಚಾರ ನಿರ್ಬಂಧಕ ಕಾಯ್ದೆ 1988 (ತಿದ್ದುಪಡಿ 2018), ದಿ: 27-01-2025 ದಾಖಲಾಗಿದ್ದು, ಪ್ರಸ್ತುತ ತನಿಖೆಯ ಹಂತದಲ್ಲಿರುತ್ತದೆ
12	ಮಂಗಳೂರು ನಗರ (ದ.ಕ ಜಿಲ್ಲೆ)	ಪ್ರವೀಣ್ ನಾಯ್ಕ, ಸಿಪಿಸಿ 838	ಮೂಡಬಿದ್ರೆ ಪೊಲೀಸ್ ಠಾಣೆ	ಲೋಕಾಯುಕ್ತ ಪ್ರಕರಣ - ಸಂಚಾರ ಉತ್ತರ ಪೊಲೀಸ್ ಠಾಣೆ ಅ.ಕ್ರ: 254/2024 ರಲ್ಲಿ ವಾಹನವನ್ನು ಬಿಡುಗಡೆ ಮಾಡಲು ಲಂಚವನ್ನು ಪಡೆದಿರುವ ಬಗ್ಗೆ	ಅಮಾನತ್ತಿನಿಂದ ಬಿಡುಗಡೆಗೊಳಿಸಿಲಾಗಿದ್ದು, ಇಲಾಖಾ ವಿಚಾರಣೆ ಪ್ರಾರಂಭಿಸುವ ಕುರಿತು ಲೋಕಾಯುಕ್ತ ಘಟಕದಿಂದ ಅಂತಿಮ ತನಿಖಾ ವರದಿ ಬರಲು ಬಾಕಿ ಇರುತ್ತದೆ.	ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು ಇಲ್ಲಿ ಅ.ಕ್ರ: 01/2025, ಕಲಂ 7(ಎ), 7(ಸಿ) ಭ್ರಷ್ಟಾಚಾರ ನಿರ್ಬಂಧಕ ಕಾಯ್ದೆ 1988 (ತಿದ್ದುಪಡಿ 2018), ದಿ: 27-01-2025 ದಾಖಲಾಗಿದ್ದು, ಪ್ರಸ್ತುತ ತನಿಖೆಯ ಹಂತದಲ್ಲಿರುತ್ತದೆ

ಪೊಲೀಸ್ ಉಪ ಮಹಾ ನಿರೀಕ್ಷಕರು, ಬಳ್ಳಾರಿ ವಲಯ, ಬಳ್ಳಾರಿ

ಕ್ರ. ಸಂ.	ಜಿಲ್ಲೆ	ಕರ್ತವ್ಯ ಲೋಪ ಮತ್ತು ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಅಮಾನತ್ತುಗೊಂಡ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ಹೆಸರು & ಹುದ್ದೆ	ಕರ್ತವ್ಯ ನಿರ್ವ ಹಿಸುತ್ತಿರುವ ಠಾಣೆಯ ಹೆಸರು	ದೋಷಾರೋಪ	ಇಲಾಖಾ ಶಿಸ್ತು ಕ್ರಮ ಕೈಗೊಂಡಿರುವ ಬಗ್ಗೆ ವಿವರ ಮತ್ತು ಶಿಕ್ಷೆ ವಿವರ ಮತ್ತು ಪ್ರಸ್ತುತ ಹಂತ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಪ್ರಕರಣದ ವಿವರ ಹಾಗೂ ನ್ಯಾಯಾಲಯದ ಅಂತಿಮ ಆದೇಶವಾಗಿದ್ದಲ್ಲಿ ವಿವರ ಅಥವಾ ಪ್ರಸ್ತುತ ಹಂತ
13	ಬಳ್ಳಾರಿ ವಲಯ ಕಛೇರಿ	ಶ್ರೀ.ಟಿ.ಡಿ.ಮಂಜುನಾಥ, ಪಿಎಸ್ಐ (ಕಾ&ಸು)	ಪಶ್ಚಿಮ ಪೊಲೀಸ್ ಠಾಣೆ, ರಾಯಚೂರು ಜಿಲ್ಲೆ ಈ ಹಿಂದೆ ಗಬ್ಬೂರು ಪೊಲೀಸ್ ಠಾಣೆ, ರಾಯಚೂರು ಜಿಲ್ಲೆ	ಗಬ್ಬೂರು ನಿವಾಸಿಯಾದ ಫಾರೂಕ್ ಎಂಬಾತನಿಗೆ ಕ್ರಿಕೆಟ್ ಬೆಟ್ಟಿಂಗ್ ಆಡುತ್ತಿದ್ದೀಯಾ ನಿನ್ನ ಮೇಲೆ ಕೇಸ್ ದಾಖಲಿಸದಿರಲು ಮತ್ತು ಪೊಲೀಸ್ ವಶದಿಂದ ಬಿಡಲು ರೂ.10.00 ಲಕ್ಷಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕೊನೆಗೆ ಚೌಕಾಸಿ ಮಾಡಿ ರೂ.3.00 ಲಕ್ಷಗಳಿಗೆ ಒಪ್ಪಿಸಿ, ಸ್ವಲ್ಪ ಹಣವನ್ನು ಫೋನ್‌ಪೇ ಮೂಲಕ ಹಾಕಿಸಿಕೊಂಡು, ರೂ.50,000/- ಗಳ ಲಂಚದ ಹಣವನ್ನು ಪಡೆಯುವಾಗ ಲೋಕಾಯುಕ್ತ ಪೊಲೀಸ್‌ರಿಗೆ ಸಿಕ್ಕಿಬಿದ್ದಿರುತ್ತಾರೆ. ಈ ಬಗ್ಗೆ ಪಿಎಸ್ಐ ಮತ್ತು ಸಿಪಿಸಿ ರವರ ವಿರುದ್ಧ ರಾಯಚೂರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ. 03/2024 ಕಲಂ 7(ಎ) ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ (ತಿದ್ದುಪಡಿ ಕಾಯ್ದೆ 2018) ಕಾಯ್ದೆ 1988 ರಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ.	ಈ ವಲಯ ಕಛೇರಿಯ ಆದೇಶ ದಿ:03.09.2025 (ಓ.ಬಿ.ನಂ.291/2025) ರಲ್ಲಿ ಕೆಎಸ್‌ಪಿ(ಡಿಪಿ) ನಿಯಮಗಳು 1965/89/2022 ರ ನಿಯಮ 6 & 8 ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿದೆ.	ಪಿಎಸ್ಐ & ಸಿಪಿಸಿ-70 ರವರ ವಿರುದ್ಧ ರಾಯಚೂರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ. 03/2024 ಕಲಂ 7(ಎ) ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ (ತಿದ್ದುಪಡಿ ಕಾಯ್ದೆ 2018) ಕಾಯ್ದೆ 1988 ರಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ತನಿಖಾ ಹಂತದಲ್ಲಿರುತ್ತದೆ.
14		ಶ್ರೀ.ರಮೇಶ್, ಸಿಪಿಸಿ-70	ಲಿಂಗಸುಗೂರು ಪೊಲೀಸ್ ಠಾಣೆ ಈ ಹಿಂದೆ ಗಬ್ಬೂರು ಪೊಲೀಸ್ ಠಾಣೆ, ರಾಯಚೂರು ಜಿಲ್ಲೆ			

ಪೊಲೀಸ್ ಅಧೀಕ್ಷಕರು, ಹಾವೇರಿ ಜಿಲ್ಲೆ.

ಕ್ರಮ ಸಂಖ್ಯೆ	ಜಿಲ್ಲೆ	ಕರ್ತವ್ಯ ಲೋಪ ಮತ್ತು ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಅಮಾನತ್ತುಗೊಂಡ ಪೊಲೀಸ್ ಅಧಿಕಾರಿ / ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ಕರ್ತವ್ಯ ನಿರ್ವಹಿಸುತ್ತಿರುವ ಠಾಣೆಯ ಹೆಸರು	ದೋಷಾರೋಪಣೆ	ಇಲಾಖಾ ಶಿಸ್ತು ಕ್ರಮ ಕೈಗೊಂಡಿರುವ ಬಗ್ಗೆ ವಿವರ ಮತ್ತು ಶಿಕ್ಷೆ ವಿವರ ಮತ್ತು ಪ್ರಸ್ತುತ ಹಂತ	ಕ್ರಿಮಿನಲ್ ಪ್ರಕರಣ ದಾಖಲಾಗಿದ್ದಲ್ಲಿ ಪ್ರಕರಣದ ವಿವರ ಹಾಗೂ ನ್ಯಾಯಾಲಯದ ಅಂತಿಮ ಆದೇಶವಾಗಿದ್ದಲ್ಲಿ ವಿವರ ಅಥವಾ ಪ್ರಸ್ತುತ ಹಂತ
15 16	ಹಾವೇರಿ	1) ಶ್ರೀ ಶರಣಬಸಪ್ಪ ಕಾಂದೆ ಪಿಎಸ್ಐ, ತಡಸ ಪೊಲೀಸ್ ಠಾಣೆ. 2) ಶ್ರೀ ಎಸ್.ಪಿ. ಮಾನೋಜಿ, ಸಿಪಿಸಿ-1390, ತಡಸ ಪೊಲೀಸ್ ಠಾಣೆ	1) ಜಗಳೂರು ಪಿಎಸ್ ದಾವಣಗೆರೆ. 2) ಸವಣೂರು ಪೊಲೀಸ್ ಠಾಣೆ	ಶ್ರೀ ಪ್ರಭಾಕರ ಈರಪ್ಪ ಬೆಟದೂರ ಸಾ: ತಡಸ ಇವರಿಗೆ ಇಸ್ಪೇಟ್ ಆಡಿಸಲು ರೂ.5,00,000-00 ಗಳ ಲಂಚದ ಹಣದ ಬೇಡಿಕೆ ಇಟ್ಟು,ದಿನಾಂಕ 17.05.2024 ರಂದು ಮದ್ಯವರ್ತಿ ಶ್ರೀ ಕಿರಣ ವನಹಳ್ಳಿ ರವರ ಮೂಲಕ ಮುಂಗಡವಾಗಿ ರೂ.2,00,000-00 ಗಳ ಲಂಚದ ಹಣವನ್ನು ಪಡೆದುಕೊಳ್ಳುವಾಗ ಹಾವೇರಿ ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಟ್ರಾಪ್ ಮಾಡಿದ್ದು, ಈ ಬಗ್ಗೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಹಾವೇರಿಯಲ್ಲಿ ಪ್ರಕರಣ ಸಂಖ್ಯೆ: 07/2024 ಕಲಂ 7(ಚಿ),(ಂ೦) ಪಿ.ಸಿ.ಕಾಯ್ದೆ-1988 ಮತ್ತು ತಿದ್ದುಪಡಿ ಕಾಯ್ದೆ-2018 ರಿತ್ಯ ಪ್ರಕರಣವು ದಾಖಲಾಗಿ	ವಲಯ ಕಛೇರಿ, ದಾವಣಗೆರೆಯಲ್ಲಿ ಇಲಾಖಾ ವಿಚಾರಣೆ ಚಾಲ್ತಿಯಲ್ಲಿರುತ್ತದೆ. (ದಿನಾಂಕ 17.03.2025 ರಂದು ಶ್ರೀ ಸಂಗಪ್ಪ ಹುಚ್ಚಪ್ಪ ಮಿಟ್ಟಲ್ಕೋಡ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ರವರಲ್ಲಿ ಇಲಾಖಾ ವಿಚಾರಣೆ ಜಾರಿಯಲ್ಲಿದೆ.)	

ಪೊಲೀಸ್ ಅಧೀಕ್ಷಕರು, ರಾಯಚೂರು.

ಕ್ರಮ	ಜಿಲ್ಲೆ	ಕರ್ತವ್ಯ ಲೋಪ ಮತ್ತು	ಕರ್ತವ್ಯ	ದೋಷಾರೋಪ	ಇಲಾಖಾ ಶಿಸ್ತು ಕ್ರಮ ಕೈಗೊಂಡಿರುವ ಬಗ್ಗೆ	ಕ್ರಿಮಿನಲ್ ಪ್ರಕರಣ

ಸಂಖ್ಯೆ		ಭ್ರಷ್ಟಾಚಾರದಡಿಯಲ್ಲಿ ಸಿಲುಕಿ ಅಮಾನತುಗೊಂಡ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ	ನಿರ್ವಹಿಸುತ್ತಿರುವ ಠಾಣೆಯ ಹೆಸರು		ವಿವರ ಮತ್ತು ಶಿಕ್ಷೆ ವಿವರ ಮತ್ತು ಪ್ರಸ್ತುತ ಹಂತ	ದಾಖಲಾಗಿದ್ದಲ್ಲಿ ಪ್ರಕರಣದ ವಿವರ ಹಾಗೂ ನ್ಯಾಯಾಲಯದ ಅಂತಿಮ ಆದೇಶವಾಗಿದ್ದಲ್ಲಿ ವಿವರ ಅಥವಾ ಪ್ರಸ್ತುತ ಹಂತ
17	ರಾಯಚೂರು	ಮಂಜುನಾಥ ಟಿ.ಡಿ ಪಿಎಸ್ಐ	ಗಬ್ಬೂರು ಪೊಲೀಸ್ ಠಾಣೆ	ರಾಯಚೂರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ 03/2024 ಕಲಂ 7(ಎ) ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ (ತಿದ್ದುಪಡಿ ಕಾಯ್ದೆ 2018) ಕಾಯ್ದೆ 1988 ರಡಿ ಪ್ರಕರಣ ದಾಖಲಾಗಿರುತ್ತದೆ.	ಪೊಲೀಸ್ ಉಪ ಮಹಾ ನಿರೀಕ್ಷಕರು, ಬಳ್ಳಾರಿ ವಲಯ, ಬಳ್ಳಾರಿ ರವರ ಅದೇಶ ಸಂಖ್ಯೆ:03/ಇವಿ/ ಸಿಬ್ಬಂದಿ-2/2024, ದಿನಾಂಕ: 03.09.2025 ರಲ್ಲಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿದೆ.	

ಪೊಲೀಸ್ ಅಧೀಕ್ಷಕರು, ವಿಜಯನಗರ ಜಿಲ್ಲೆ, ಹೊಸಪೇಟೆ

